ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2026 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:9, Pages:56
April - 2026, Price Rs. 20/-



**ಶ್ರೀಪದ್ಮಾವತಿ ಶ್ರೀನಿವಾಸರ ಪರಿಣಯ ಮಹೋತ್ಸವ, ತಿರುಮಲೆ**

**25-04-2026 ರಿಂದ 27-04-2026 ರ ವರೆಗೆ**

## ನಾಗುಲಾಪುರಂ, ಶ್ರೀ ವೇದವಲ್ಲಿ ಸಮೇತ ಶ್ರೀ ವೇದನಾರಾಯಣ ಸ್ವಾಮಿಯವರ ಬ್ರಹ್ಮೋತ್ಸವಗಳು

**30-04-2026 ರಿಂದ 09-05-2026 ರ ವರೆಗೆ**



| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 30-04-2026 | ಗುರುವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 01-05-2026 | ಶುಕ್ರವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 02-05-2026 | ಶನಿವಾರ | ಚಿಕ್ಕಶೇಷವಾಹನ | ಹಂಸವಾಹನ |
| 03-05-2026 | ಭಾನುವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 04-05-2026 | ಸೋಮವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 05-05-2026 | ಮಂಗಳವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 06-05-2026 | ಬುಧವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 07-05-2026 | ಗುರುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 08-05-2026 | ಶುಕ್ರವಾರ | ರಥೋತ್ಸವ | ಅಶ್ವವಾಹನ |
| 09-05-2026 | ಶನಿವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

## ಜಮ್ಮಲಮಡುಗು, ಶ್ರೀ ಭೂಸಮೇತ ಶ್ರೀ ನಾರಾಪುರ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**30-04-2026 ರಿಂದ 10-05-2026 ರ ವರೆಗೆ**



| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 30-04-2026 | ಗುರುವಾರ | -------------- | ಅಂಕುರಾರ್ಪಣೆ |
| 01-05-2026 | ಶುಕ್ರವಾರ | ಧ್ವಜಾರೋಹಣ | ದೊಡ್ಡಶೇಷವಾಹನ |
| 02-05-2026 | ಶನಿವಾರ | ಚಿಕ್ಕಶೇಷವಾಹನ | ಹಂಸವಾಹನ |
| 03-05-2026 | ಭಾನುವಾರ | ಮುತ್ತಿನಚಪ್ಪರವಾಹನ | ಸಿಂಹವಾಹನ |
| 04-05-2026 | ಸೋಮವಾರ | ಕಲ್ಪವೃಕ್ಷವಾಹನ | ಹನುಮದ್ವಾಹನ |
| 05-05-2026 | ಮಂಗಳವಾರ | ಮೋಹಿನಿ ಅವತಾರೋತ್ಸವ | ಗರುಡವಾಹನ |
| 06-05-2026 | ಬುಧವಾರ | ಸರ್ವಭೂಪಾಲವಾಹನ | ಕಲ್ಯಾಣ, ಗಜವಾಹನ |
| 07-05-2026 | ಗುರುವಾರ | ರಥೋತ್ಸವ | ಅಶ್ವವಾಹನ |
| 08-05-2026 | ಶುಕ್ರವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 09-05-2026 | ಶನಿವಾರ | ಚಕ್ರಸ್ನಾನ | ಧ್ವಜಾವರೋಹಣ |
| 10-05-2026 | ಭಾನುವಾರ | ---------- | ಶ್ರೀ ಪುಷ್ಪಯಾಗಮಹೋತ್ಸವ |


# ಭಗವದ್ಗೀತೆ



**ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ।**
**ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥**

ಸುಖದುಃಖಗಳು, ಲಾಭನಷ್ಟಗಳು, ಗೆಲವು ಸೋಲುಗಳು – ಈ ದ್ವಂದ್ವಗಳ ಬಗೆಗೆ ಸಮದೃಷ್ಟಿ ತಳೆದು ಯುದ್ಧಕ್ಕೆ ಸಿದ್ಧನಾಗು. ಆಗ ನಿನಗೆ ಪಾಪ ಅಂಟುವುದಿಲ್ಲ.

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -38)



ಸಾರಿದೆ ನಿನ್ನ ವೆಂಕಟರನ್ನ ಪಾಲಿಸು ಎನ್ನ ಅ-
ಪಾರಜನುಮಕ್ಕೆ ನೀನೆ ದೈವವೆಂದು ॥ಪ॥
ಶೂನ್ಯಜ್ಞನು ನಾನು ಅನ್ಯಥಾಗತಿಯ ಅರಿಯೆ।
ಅನ್ಯರಲ್ಲಿಗೆ ಕೊಡದೆ ಧನ್ಯನ ಮಾಡೊ ಬಿಡದೆ ॥1॥
ಕಲ್ಪತರವು ಎಂದು ಒಪ್ಪದಿಂದಲಿ ಬಂದೆ ।
ಅಲ್ಪರಿಯದಂತೆ ನಾಗಕಲ್ಪನೆ ಫಲವೀಯೊ ॥2॥
ವರುಷಾ ವರುಷ ಹೀಗೆ ದರುಶನ ಕೊಡು ಎನಗೆ ।
ಹರುಷವಾಗಲಿ ಪರಮಪುರುಷ ವಿಜಯವಿಟ್ಠಲಾ ॥3॥

- ಶ್ರೀ ವಿಜಯವಿಠಲ





# ಈಶಾವಾಸ್ಯೋಪನಿಷತ್

## ಮಂತ್ರ -4

- ಓಂ ಪ್ರಕಾಶ್ ಭಟ್
99640 25922

**ಅನೇಜದೇಕಂ ಮನಸೋ ಜವೀಯೋ ನೈನದ್
ದೇವಾ ಆಪ್ನುವನ್ ಪೂರ್ವಮರ್ಷತ್ ।
ತದ್ ಧಾವತೋಽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಪೋ ಮಾತರಿಶ್ವಾ ದಧಾತಿ॥**

ಬದುಕು ಒಂದು ಭಯ, ಭಯದ ಸರಮಾಲೆಯೇ ಆಗಿದೆ. ಆದ್ದರಿಂದ ಭಯದಿಂದ ನಿರ್ಭಯತ್ವದ ಕಡೆಗೆ ನಮ್ಮ ನಡೆಯಿರಬೇಕು. 'ಅನೇಜತ್' ಅಂದರೆ ಭಯರಹಿತವಾದದ್ದು. ಯಾವುದು ಎಂದರೆ 'ಆತ್ಮ' ನಾವು ಅವನನ್ನು ನಿರ್ಭಯ ಎಂದು ಉಪಾಸಿಸಿದರೆ ನಾವು ಭಯರಹಿತರಾಗಬಹುದು. 'ತಂ ಯಥಾ ಯಥಾ ಉಪಾಸತೇ ತದೇವ ಭವತಿ' . ಯಾವುದು ಸರ್ವತಂತ್ರ ಸ್ವತಂತ್ರವೋ ಅದು ಇನ್ನೊಂದಕ್ಕೆ ಹೆದರುವ ಕಾರಣವೇ ಇಲ್ಲ. ಯಾವುದನ್ನು ತಿಳಿಯುವುದರಿಂದ ನಮ್ಮ ಭಯ ದೂರವಾಗುತ್ತದೋ ಅದನ್ನು ಮೊದಲು ತಿಳಿಯುವ ನಿಮಿತ್ತ ಈ ಮಂತ್ರದ ಮೊದಲ ಶಬ್ದವಾಗಿ 'ಅನೇಜದೇಕಂ' ಎಂದು ಪ್ರಯೋಗವಾಗಿದೆ. ಆ ಭಯರಹಿತತತ್ತ್ವ ಎಷ್ಟಿದೆ? ಬಹಳಷ್ಟಿದೆಯೇ ಎಂದರೆ ಇಲ್ಲ, 'ಏಕಂ', ಎಲ್ಲಕ್ಕಿಂತಲೂ ಪ್ರಧಾನವಾಗಿರುವುದು ಒಂದೇ, ಎರಡಿಲ್ಲ. ದೇವರು ಒಬ್ಬನೇ. ಇನ್ನೊಂದರ್ಥದಲ್ಲಿ 'ಏಕ' ಅಂದರೆ 'ಸರ್ವಕರ್ತಾ'. ಸರ್ವಕರ್ತನಾದ ಅವನ ವೇಗ ಎಷ್ಟಿದೆ ಎಂದರೆ, ಮನಸ್ಸಿಗಿಂತಲೂ ವೇಗವಾಗಿ ಹೋಗುತ್ತಾನೆ ಎನ್ನುವುದನ್ನು ಸೂಚಿಸಲು 'ಮನಸಃ ಜವೀಯಃ' ಎಂದರು. ನಮಗೆ ಗೊತ್ತಿರುವ ವಸ್ತುಗಳಲ್ಲಿ ಹೆಚ್ಚು ವೇಗವಾಗಿ ಚಲನೆ ಇರುವುದು ಮನಸ್ಸಿಗೆ. ಆದರೆ ಪರಮಾತ್ಮ ಆ ವೇಗಕ್ಕಿಂತಲೂ ಹೆಚ್ಚಿನ ವೇಗ ಉಳ್ಳವನೆಂದರೆ ಅವನ ಅಚಿಂತ್ಯಾದ್ಭುತ ಶಕ್ತಿ ಎಷ್ಟಿರಬಹುದು ಎಂದು ಉಪನಿಷತ್ತು ಸೂಚಿಸುತ್ತದೆ.

ನಮಗೆ, ನಮ್ಮ ಮನಸ್ಸಿಗೆ ನಿಲುಕುವವನಲ್ಲ. ಅಂದರೆ ಯಾವುದೇ ಇಂದ್ರಿಯಕ್ಕೂ ನಿಲುಕದವನು. ಅಷ್ಟೇ ಅಲ್ಲ. ಇಂದ್ರಿಯಾಭಿಮಾನಿ ದೇವತೆಗಳೂ ಆ ಪರಮತತ್ತ್ವವನ್ನು ಪೂರ್ಣವಾಗಿ ತಿಳಿದಿಲ್ಲ. ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ಯಾಕೆ ಅವನನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ ಎಂದರೆ, ಅವನು ಈ ಸೃಷ್ಟಿ ಆಗುವ ಮೊದಲೇ ಇದ್ದವನು. ಎಲ್ಲಿಯೂ, ಯಾರೂ ಇಲ್ಲದಿರುವಾಗಲೂ, ಈ ವಿಶ್ವವೇ ಹುಟ್ಟುವ ಮೊದಲು ಇವನಿದ್ದನು ಎಂದು ತಿಳಿಸಲು 'ಪೂರ್ವಮ್' ಎಂಬ ಶಬ್ದ ಬಂದಿದೆ. ಮೊದಲಿನಿಂದಲೂ ಇರುವುದರಿಂದ, ಆ ಪರಮತತ್ತ್ವಕ್ಕೆ ಆತ್ಮಕ್ಕೆ ಎಲ್ಲಾ ಕಾಲದಲ್ಲಿ ಎಲ್ಲವೂ ತಿಳಿದಿದೆ.

ಅವನು ಎಲ್ಲರಿಗಿಂತ ಎತ್ತರದಲ್ಲಿರುವವನು. ನಾವು ಎಷ್ಟು ಸಾಧನೆ ಮಾಡಿ ತಿಳಿದುಕೊಂಡರೂ ಅದರಾಚೆಗೆ ಭಗವಂತನಿದ್ದಾನೆ. ಹಾಗಾದರೆ, ನಾವು ಭಗವಂತನನ್ನು ಹೇಗೆ ತಿಳಿಯಬಹುದು ಎಂದರೆ ಉಪನಿಷತ್ತು ಈಗ ಪ್ರಾಣತತ್ತ್ವವನ್ನು ಪರಿಚಯಿಸುತ್ತದೆ. ವಾಯುತತ್ತ್ವ ನಮ್ಮೊಳಗೆ ಉಸಿರಾಗಿ ಕೂತು ನಮ್ಮಿಂದ ಕರ್ಮ ಮಾಡಿಸುತ್ತದೆ. ಮಾಡಿಸಿದ ಕರ್ಮವನ್ನು ಭಗವಂತನಿಗೆ ಅರ್ಪಿಸುತ್ತದೆ. ಅರ್ಪಿಸಿ ಅದರ ಫಲವನ್ನು ನಮಗೆ ಮುಟ್ಟಿಸುತ್ತದೆ. ಅದನ್ನು ಈ ಮಂತ್ರ 'ತಸ್ಮಿನ್ ಅಪಃ ಮಾತರಿಶ್ವಾ ದಧಾತಿ' ಎಂದದ್ದು. ಜೀವನಿಗೆ ಮತ್ತು ದೇವನಿಗೆ ಮಧ್ಯದಲ್ಲಿ ಸಂಯೋಜಕನಾಗಿ ಇರುವವನು 'ವಾಯು', 'ಮಾತರಿಶ್ವಾ'. ಈತನ ಅನುಗ್ರಹದಿಂದ ಆ ಪರಮತತ್ತ್ವವನ್ನು ತಿಳಿಯಲು ಸಾಧ್ಯ. ಉಸಿರು ಮಾತ್ರವಲ್ಲ, ಎಲ್ಲ ಕರ್ಮಗಳ ನಿಯಾಮಕ ತತ್ತ್ವವೇ ವಾಯುತತ್ತ್ವ ಒಳಗೆ ಗಾಳಿ ಇದ್ದರೆ ಎಲ್ಲವೂ.

ಈ ರಹಸ್ಯಮಯವಾದ ಉಪಾಸನೆಯನ್ನು ಉಪನಿಷತ್ತು ಈ ಮಂತ್ರದಲ್ಲಿ ತಿಳಿಸುತ್ತಾ ಮುಂದಿನ ಮಂತ್ರದಲ್ಲಿ ಭಗವಂತನ ಇನ್ನಷ್ಟು ಮಹಿಮೆಯನ್ನು ತಿಳಿಸುತ್ತದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ಪರಾಭವ ನಾಮ ಸಂವತ್ಸರ ಚೈತ್ರ - ವೈಶಾಖ ಮಾಸ ಸಂಚಿಕೆ

ಸಂಪುಟ : 05 ಏಪ್ರಿಲ್ - 2026 ಸಂಚಿಕೆ : 09



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಎಂ. ರವಿಚಂದ್ರ, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಕಾಶಕರು, ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ., ಡಿಪ್.ಇನ್.ಜೆ.ಎಂ.ಸಿ

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್, ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸ ಪತ್ರಿಕೆಯನ್ನು ವೀಕ್ಷಿಸಲು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಪ್ರಧಾನ ಸಂಪಾದಕರು

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಅಕ್ಷಯ ತೃತೀಯ ಭಾರತೀಯ ಸಂಸ್ಕೃತಿಯಲ್ಲಿ ಸುವರ್ಣದ ತಾತ್ತ್ವಿಕ ಮತ್ತು ಸಾಂಸ್ಕೃತಿಕ ಮಹತ್ವ | - ಪ್ರಣವ | 07 |
| ಮೊದಲಕಲ್ ಶೇಷದಾಸರು | - ಡಾ॥ ರೂಪಶ್ರೀ ಶಶಿಕಾಂತ್ | 09 |
| ಮಧುರಕವಿ ಆಳ್ವಾರ್ | - ಡಾ॥ ಎನ್.ಕೆ. ರಾಮಶೇಷನ್ | 12 |
| ಸಾಲು ಸಾಲು ಜಯಂತಿಗಳ ಮಾಸ - ವೈಶಾಖ | - ಶ್ರೀಮತಿ ವಾರುಣಿ ಹೊನ್ನಾಳಿ | 14 |
| ಶಂಕರ ಜಯಂತಿ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 18 |
| ಹರಿಕಥಾಮೃತಸಾರ ಮಹಿಮೆ ಅಪಾರ | - ಶ್ರೀಮತಿ ಪ್ರಿಯಪ್ರಾಣೇಶ ಹರಿದಾಸ | 20 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಜಿ.ಎನ್. ಶ್ರೀನಿವಾಸನ್ | 24 |
| ಶ್ರೀ ರಾಮಾನುಜ ಚತುಃಶ್ಲೋಕಿ | - ಎಸ್. ವಾದಿರಾಜ | 27 |
| ಸಿಂಹಾಚಲ | - ವಿ.ನಾಗೇಂದ್ರ ಪ್ರಸಾದ್ | 31 |
| ಪಾವಗಡದ ಪ್ರಾಚೀನ ದೇವಾಲಯಗಳು | - ಕೆಂಗೇರಿ ಚಕ್ರಪಾಣಿ | 34 |
| ರಾಮಾನುಜಾಚಾರ್ಯರು | - ಶ್ರೀಮತಿ ಕೆ. ವಿ. ಪದ್ಮಾವತಿ | 36 |
| ತಿರುಮಹೀಂದ್ರಪುರಂ | - ಸೂರ್ಯವಂಶಿ | 38 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 40 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 42 |
| ಶ್ರೀ ವೆಂಕಟಾಚಲ ಮಹಾತ್ಮ್ಯ | - ಶ್ರೀಮತಿ ಎನ್. ಪಾರ್ವತಿ | 44 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಪ್ರಾಚೀನ ಭಾರತದ ನಾರಿ ಶಕ್ತಿಯೂ ದೊಡ್ಡದು | - ಎ.ಆರ್. ರಘುರಾಮ | 48 |
| ಚಿತ್ರಕಥೆ-ತೃಪ್ತಿಗಿಂತ ಐಶ್ವರ್ಯ ಮೊತ್ತೊಂದಿಲ್ಲ | - ಆರ್.ಕೆ.ವಿ | 52 |

**ಮುಖಚಿತ್ರ** - ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯ ಮಹೋತ್ಸವ, ತಿರುಮಲೆ
**ಹಿಂಬದಿಚಿತ್ರ**- ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವ, ತಿರುಚಾನೂರು

ಸಂಪಾದಕೀಯ

# ಕಾರಣ ಜನ್ಮರಾದ ಮಹಾತ್ಮರು

ಮಹಾತ್ಮರು ಈ ಭೂಮಿಯ ಮೇಲೆ ಸುಮ್ಮನೇ ಅವತರಿಸುವುದಿಲ್ಲ. ಅವರ ಹುಟ್ಟಿನ ಹಿಂದೆ ಯಾವುದೋ ಒಂದು ಪ್ರಮುಖವಾದ, ಶುಭಪ್ರದವಾದ, ಮಂಗಳಕರವಾದ ಕಾರಣವಿರುತ್ತದೆ. ಅದ್ಭುತವಾದ ವ್ಯಕ್ತಿಗಳು, ಜ್ಞಾನಿಗಳು ಒಂದೆಡೆ ಬರುತ್ತಿದ್ದಾರೆಂದರೆ ಆ ಪ್ರದೇಶವು ಭಗವಂತನಿಂದ ಆಶೀರ್ವದಿಸಲ್ಪಟ್ಟಿದೆ ಎಂದರ್ಥ!

ಸನಾತನ ಹಿಂದೂ ಧರ್ಮವೆನ್ನುವುದು ಅನಂತವಾದ, ಕಾಲಾತೀತವಾದ ಮತ್ತು ಆದಿ ಅಂತ್ಯಗಳಲ್ಲಿನ ಬಹು ಮೌಲ್ಯವಾದ ಜೀವನ ಮಾರ್ಗ. ಇದು ಕೇವಲ ಮತವಲ್ಲ. ದಯೆ, ನೀತಿ, ಸತ್ಯಸಂಧತೆ, ಸದ್ಗುಣಗಳು ಮತ್ತು ಆತ್ಮ ನಿಗ್ರಹದಂತಹಾ ನಿಯಮಗಳಿಗೆ ನೆಲೆಯಾದ ಶಾಶ್ವತವಾದ ಧರ್ಮ, ಸತ್ಯ, ಕರ್ಮ ಸಿದ್ಧಾಂತ ಮತ್ತು ಧರ್ಮಾಚರಣೆಯ ಮೇಲೆ ಆಧಾರಗೊಂಡು ವೇದಗಳ ಕಾಲದಿಂದಲೂ ನಿರಂತರವಾಗಿ ಮುಂದುವರೆದು ಬರುತ್ತಿರುವ ಜೀವನ ವಿಧಾನ.

ಸನಾತನವೆಂದರೆ ಎಂದಿಗೂ ಬದಲಾಗದಂತದ್ದು, ಮಾಸಿಹೋಗದಂತದ್ದು ಎಂದರ್ಥ! ಇದು ಕಾಲಕ್ಕೆ ಸಂಬಂಧವಿಲ್ಲದೇ ನೆಲೆಯೂರಿರುವಂತಾಹ ಧರ್ಮ ! ವೇದಗಳು, ಉಪನಿಷತ್ತುಗಳು, ಭಗವದ್ಗೀತೆ, ರಾಮಾಯಣ, ಭಾರತಗಳು ಈ ಧರ್ಮಕ್ಕೆ ಬುನಾದಿಯಂತಹುವು. ಆತ್ಮದ ಸ್ವಭಾವ, ಜನನ ಮರಣ ಚಕ್ರ, ಮೋಕ್ಷವನ್ನು ಪಡೆಯುವುದೇ ಮುಖ್ಯವಾದ ಗುರಿ ಎಂದು ಉಪದೇಶಿಸುವಂತದ್ದು. ಧರ್ಮ, ಅಹಿಂಸೆ, ದಯೆ, ದಾನ, ಶುಚಿ, ಇಂದ್ರಿಯ ನಿಗ್ರಹ ಮತ್ತು ಜ್ಞಾನಾರ್ಜನೆ ಇವು ನಮ್ಮ ಸುತ್ತಲಿನ ಸಮಾಜವನ್ನು ಹಾಗೂ ಪ್ರಪಂಚವನ್ನು ಉಳಿಸುವಂತಹಾ ನಿಯಮಗಳು.

ಇದು ಕೇವಲ ಪೂಜೆ ಪುನಸ್ಕಾರಗಳಿಗೆ ಸೀಮಿತವಾಗಲ್ಲದೇ ಪ್ರತಿಯೊಂದು ಜೀವಿಯಲ್ಲೂ ದೈವವನ್ನು ದರ್ಶಿಸುವುದು, ಪ್ರಕೃತಿಯನ್ನು ಆರಾಧಿಸುವುದು, ಯೋಗ ಮತ್ತು ಧ್ಯಾನದಂತಹವು ಇದರಲ್ಲಿ ಒಂದು ಭಾಗ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಬೋಧಿಸಿದಂತೆ ಫಲಾಪೇಕ್ಷೆಯಿಲ್ಲದೇ ನಮ್ಮ ಕೆಲಸವನ್ನು ನಾವು ಮಾಡುತ್ತಾ ಧರ್ಮಮಾರ್ಗದಲ್ಲಿ ನಡೆಯುವುದು. ಈ ಸನಾತನ ಧರ್ಮವು ಕಾಲಕ್ರಮೇಣ ಅನೇಕ ಬದಲಾವಣೆಗಳಿಗೆ ಒಳಗಾದರೂ ಅದರ ಮೂಲ ಸಿದ್ಧಾಂತಗಳು ಮಾತ್ರ ಸ್ಥಿರವಾಗಿದೆ. ಅದಕ್ಕೇ ಇದನ್ನು ಹಿಂದೂ ಧರ್ಮ ಎಂದು ಕರೆಯುತ್ತಾರೆ.

ಹೀಗೆ ಈ ಧರ್ಮ ಸಂಸ್ಥಾಪನೆಗಾಗಿ ಈ ತಿಂಗಳಿನಲ್ಲಿ ಕೆಲವು ಮಹಾತ್ಮರು ಜನ್ಮಿಸಿದ್ದಾರೆ. ಅವರಲ್ಲಿ ಪ್ರಮುಖರಾದ ಶ್ರೀ ರಾಮಚಂದ್ರನು ಆದರ್ಶಪುರುಷನಾಗಿ, ಶ್ರೀ ಶಂಕರಾಚಾರ್ಯರು ಹಿಂದೂ ಧರ್ಮದ ಕರ್ತರಾಗಿ, ರಾಮಾನುಜಾಚಾರ್ಯರು ಅಷ್ಟಾಕ್ಷರೀ ಮಂತ್ರದ ಉಪದೇಶಕರಾಗಿ, ತಿರುಮಲೆಯ ಶ್ರೀನಿವಾಸನ ಬರುವಿಕೆಗೆ ಕಾರಣವಾದ, ವೈಖಾನಸಾಗಮ ಗ್ರಂಥಕರ್ತರಾದ ಭೃಗುಮಹರ್ಷಿ, ಕೋಪವನ್ನು ಜಯಿಸಿದರೆ ಲಾಭಗಳೇನು ಎಂದು ತಿಳಿಸುವ ಪರಶುರಾಮ, ಇನ್ನೂ ಮೊದಲಿಯಾಂಡನ್, ಶ್ರೀನಿವಾಸ ದೀಕ್ಷಿತರು, ಅನಂತಾ ಳ್ವಾರರು, ಮಧುರಕವಿಆಳ್ವಾರರು, ವೆಂಗಮಾಂಬ ಮೊದಲಾದ ಮಹಾನುಭಾವರೆಲ್ಲರೂ ಅವರ ಜನ್ಮವನ್ನು ಹಿಂದೂ ಧರ್ಮದ ಪ್ರಚಾರಕ್ಕಾಗಿ ಮೀಸಲಿಟ್ಟರು. ಅವರ ವಾರಸತ್ವದ ದಾರಿಯನ್ನು ನಮಗೆ ತೋರಿ ತಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಂಡ ಈ ಮಹನೀಯರೆಲ್ಲರನ್ನೂ ಸ್ಮರಿಸುತ್ತಾ ಅವರ ದಾರಿಯಲ್ಲಿ ಪಯಣಿಸಿ ಧನ್ಯರಾಗೋಣ ಬನ್ನಿ...

ಗೋವಿಂದಾ....ಗೋವಿಂಗಾ,,, ಗೋವಿಂದಾ



# ಅಕ್ಷಯ ತೃತೀಯ ಭಾರತೀಯ ಸಂಸ್ಕೃತಿಯಲ್ಲಿ ಸುವರ್ಣದ ತಾತ್ತ್ವಿಕ ಮತ್ತು ಸಾಂಸ್ಕೃತಿಕ ಮಹತ್ವ

- ಪ್ರಣವ
90356 18076

ಯುಗಾದಿಯ ಬೇವು-ಬೆಲ್ಲದ ಸವಿ ಇನ್ನೂ ನಾಲಿಗೆಯಿಂದ ಮಸುಕಾಗುವ ಮುನ್ನವೇ ಭೂಮಿಯು ಬಿಸಿಲಿಗೆ ತಪಿಸಿ, ಮಳೆಯ ನಿರೀಕ್ಷೆಯಲ್ಲಿ ಬಾಯ್ದೆರೆದು ನಿಂತಿರುವ ಕಾಲ ಇದು. ಹಸಿರುಡುಗೆಯ ನಿರೀಕ್ಷೆಯಲ್ಲಿ ಇಳೆ ತಲ್ಲಣಿಸುವ ಸಮಯ. ಇಂತಹ ಸಂದರ್ಭದಲ್ಲೇ ಮನೆ ಮನೆಯಲ್ಲೂ ಒಂದು ಮೃದು ಸಂಭಾಷಣೆ - ಈ ಸಲ ಅಕ್ಷಯ ತೃತೀಯಕ್ಕೆ ಒಂದು ಸಣ್ಣ ಆಭರಣವಾದರೂ ಖರೀದಿಸಲಾಗುವುದೇ? ಎಂಬ ಪ್ರಶ್ನೆ.

ಮನೆಯೊಳಗೆ ಆಭರಣಗಳ ಭಂಡಾರವಿದ್ದರೂ, ಆ ದಿನ ಒಂದನ್ನಾದರೂ ಕೊಳ್ಳಲೇಬೇಕು ಎಂಬುದು ಸಂಪ್ರದಾಯ. ಸಾಸಿವೆ ಡಬ್ಬದಲ್ಲಿ ಉಳಿಸಿದ ಪುಡಿಗಾಸು, ಅಪ್ಪನ ಕಣ್ತಪ್ಪಿಸಿ ಎತ್ತಿಟ್ಟ ಚಿಕ್ಕ ಮೊತ್ತ ಎಲ್ಲವೂ ಅಂದು ಹಳದಿ ಲೋಹದ ರೂಪ ತಾಳುತ್ತದೆ. ಅಕ್ಷಯ ತೃತೀಯ ಎಂದರೆ ಕೇವಲ ಖರೀದಿಯ ದಿನವಲ್ಲ. ಅದು ಸಂಪತ್ತಿನ ತಾತ್ತ್ವಿಕ ಅರ್ಥವನ್ನು ನೆನಪಿಸುವ ದಿನ.

**ಅಕ್ಷಯ ತೃತೀಯ ಅರ್ಥ ಮತ್ತು ಧಾರ್ಮಿಕ ಹಿನ್ನೆಲೆ :-**

ಅಕ್ಷಯ ಎಂದರೆ ಕ್ಷಯವಿಲ್ಲದ, ಎಂದಿಗೂ ಕಡಿಮೆಯಾಗದ. ವೈಶಾಖ ಮಾಸದ ಶುಕ್ಲಪಕ್ಷದ ತೃತೀಯ ದಿನವಾದ ಅಕ್ಷಯ ತೃತೀಯವನ್ನು ಭಾರತೀಯ ಸಂಪ್ರದಾಯದಲ್ಲಿ ಅತ್ಯಂತ ಶುಭ ದಿನವೆಂದು ಪರಿಗಣಿಸಲಾಗಿದೆ. ಈ ದಿನ ಆರಂಭಿಸಿದ ಕಾರ್ಯಗಳು ನಿರಂತರ ವೃದ್ಧಿಯಾಗುತ್ತವೆ ಎಂಬ ನಂಬಿಕೆ ವ್ಯಾಪಕವಾಗಿದೆ.

ಪುರಾಣಗಳಲ್ಲಿ ಅಕ್ಷಯ ತೃತೀಯದಂದು ಮಾಡಿದ ದಾನ, ಜಪ, ಹೋಮ, ವ್ರತ ಮತ್ತು ಖರೀದಿಗಳು ಅನಂತ ಪುಣ್ಯವನ್ನು ನೀಡುತ್ತವೆ ಎಂದು ವರ್ಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಂಗಾರ ಖರೀದಿಸುವುದು ಶುಭಪ್ರದವೆಂಬ ಸಂಪ್ರದಾಯ ಬಲವಾಗಿ ನೆಲೆಗೊಂಡಿದೆ.

**ಬಂಗಾರ ಮತ್ತು ಭಾರತೀಯ ಬದುಕು :-**


ಭಾರತವನ್ನು "ಸ್ವರ್ಣಭೂಮಿ" ಎಂದು ಕರೆಯುವುದು ಅತಿಶಯೋಕ್ತಿಯಲ್ಲ. ಭೂಮಿ ಭಾರತೀಯರ ದೃಷ್ಟಿಯಲ್ಲಿ ವಸುಂಧರೆ - ಸ್ತ್ರೀ ರೂಪಿಣಿ, ದೇವಿ ಸಮಾನ. ದೇವಿಯನ್ನು ನಿರಾಭರಣವಾಗಿ ಕಲ್ಪಿಸಿಕೊಳ್ಳಲು ಭಾರತೀಯ ಮನಸ್ಸಿಗೆ ಸಾಧ್ಯವಿಲ್ಲ. ಕಿವಿಯ ಓಲೆ, ಮೂಗಿನ ಮೂಗುತಿ, ಕೊರಳಿನ ಸರ, ತೋಳಿನ ತೋಳ ಬಂದಿ, ಸೊಂಟದ ಒಡ್ಯಾಣ, ಕಾಲಿನ ಕಾಲ್ಬೆಳಕು-ಅಡಿಯಿಂದ ಮುಡಿಯವರೆಗೆ ಚಿನ್ನವೇ ಚಿನ್ನ, ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯ ಸೌಂದರ್ಯವನ್ನು ಇಮ್ಮಡಿಸುವ ಶಕ್ತಿ ಚಿನ್ನಾಭರಣಗಳಿಗೆ ಇದೆ ಎಂಬ ನಂಬಿಕೆ ಗಟ್ಟಿಯಾಗಿದೆ.

**ಸಂಸ್ಕಾರಗಳಲ್ಲಿ ಚಿನ್ನದ ಸ್ಥಾನ :-**

ಭಾರತೀಯ ಸನಾತನ ಪರಂಪರೆಯಲ್ಲಿ ಮನುಷ್ಯನ ಮೃಣ್ಮಯ ಬದುಕನ್ನು ಚಿನ್ಮಯಗೊಳಿಸುವ ಆಶಯ ಅಡಕವಾಗಿದೆ. ಜನನದಿಂದ ಮರಣದವರೆಗೆ ನಡೆಯುವ ಷೋಡಶ ಸಂಸ್ಕಾರಗಳಲ್ಲಿ ಚಿನ್ನದ ಬಳಕೆ ಅನಿವಾರ್ಯವಾಗಿದೆ.

**ಜಾತಕಕರ್ಮ :-**

ಜೇನು ಮತ್ತು ತುಪ್ಪವನ್ನು ಚಿನ್ನದಿಂದ ತೇದು ಮಂತ್ರ ಪೂರ್ವಕವಾಗಿ ಮಗುವಿಗೆ ನೀಡಲಾಗುತ್ತದೆ. ಇದರಿಂದ ಆಯುಷ್ಯ ಮತ್ತು ಮೇಧಾಶಕ್ತಿ ವೃದ್ಧಿಯಾಗುತ್ತದೆ ಎಂಬ ನಂಬಿಕೆ ಇದೆ.



**ಅನ್ನಪ್ರಾಶನ :-**

ಚಿನ್ನದ ಪಾತ್ರೆಯಲ್ಲಿ ಅನ್ನವನ್ನು ಮಗುವಿಗೆ ಉಣಿಸುವ ಸಂಪ್ರದಾಯವಿದೆ.

**ಕರ್ಣವೇದ :-**

ಮಕ್ಕಳ ಕಿವಿಗಳನ್ನು ಚುಚ್ಚಿ ಚಿನ್ನದ ಆಭರಣ ತೊಡಿಸಲಾಗುತ್ತದೆ.

**ವಿವಾಹ ಸಂಸ್ಕಾರ :-**

ಸಮಾವರ್ತನದಿಂದ ಮದುವೆವರೆಗೂ ಚಿನ್ನಾಭರಣಗಳಿಗೆ ವಿಶಿಷ್ಟ ಸ್ಥಾನ.

**ಅಂತ್ಯ ಸಂಸ್ಕಾರ :-**

ದಶದಾನಗಳಲ್ಲಿ ಚಿನ್ನವೂ ಒಂದು. ಅದು ಪಾಪ ಪರಿಹಾರಕ ಮತ್ತು ಶುಭ ಫಲ ದಾಯಕವೆಂದು ಶಾಸ್ತ್ರಗಳು ಹೇಳುತ್ತವೆ.

**ಚಿನ್ನದ ಪಾವಿತ್ರ್ಯ ಮತ್ತು ತಾತ್ತ್ವಿಕತೆ :-**

ಹಿಂದೂ ಧಾರ್ಮಿಕ ವಿಧಿಗಳಲ್ಲಿ ಬಳಸುವ ಪವಿತ್ರವು ದರ್ಭೆ, ದನದ ಬಾಲ ರೋಮ ಅಥವಾ ಚಿನ್ನದ ಸರಿಗೆಯಿಂದ ಮಾಡಲ್ಪಡುತ್ತದೆ. "ಸುವರ್ಣಸ್ಯ ಪವಿತ್ರಸ್ಯ ಕಲಾಂ ನಾರ್ಹಂತಿ ಷೋಡಶಿಮ್"ಎಂಬ ಶಾಸ್ತ್ರೋಕ್ತಿಯಂತೆ, ಚಿನ್ನದ ಪವಿತ್ರಕ್ಕೆ ಹದಿನಾರು ಪಟ್ಟು ಹೆಚ್ಚಿನ ಪಾವಿತ್ರ್ಯವಿದೆ. ದರ್ಭೆಯ ಪವಿತ್ರಕ್ಕೆ ಇರುವ ನಿರ್ಬಂಧಗಳು ಚಿನ್ನದ ಪವಿತ್ರಕ್ಕೆ ಇಲ್ಲ ಎಂಬುದು ಅದರ ಮಹತ್ವವನ್ನು ಸೂಚಿಸುತ್ತದೆ.

**ಅಕ್ಷಯ ತೃತೀಯ ಮತ್ತು ಆಧುನಿಕ ಸಮಾಜ:-**

ಅಕ್ಷಯ ತೃತೀಯ ಸಮೀಪಿಸಿದಂತೆ ಚಿನ್ನಾಭರಣ ಅಂಗಡಿಗಳಲ್ಲಿ ವಿಶೇಷ ಸಡಗರ ಆರಂಭವಾಗುತ್ತದೆ. ಮುಂಗಡ ಬುಕ್ಕಿಂಗ್ ರಿಯಾಯಿತಿ ದರ, ಹೊಸ ವಿನ್ಯಾಸಗಳ ಪ್ರದರ್ಶನ ಎಲ್ಲವೂ ಗ್ರಾಹಕರನ್ನು ಆಕರ್ಷಿಸಲು. ಇಲ್ಲಿ ಒಂದು ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಸಂಪ್ರದಾಯದ ಹೆಸರಿನಲ್ಲಿ ಹಬ್ಬಗಳು ವಾಣಿಜ್ಯೀಕರಣಗೊಳ್ಳುತ್ತಿವೆಯೇ? ಅಥವಾ ಈ ದಿನ ಪಡೆದ ಸಂಪತ್ತು ನಿಜಕ್ಕೂ ವೃದ್ಧಿಯಾಗುತ್ತದೆಯೇ? ಇದಕ್ಕೆ ಉತ್ತರ ವ್ಯಕ್ತಿಗತ ನಂಬಿಕೆ ಮತ್ತು ವಿವೇಕಕ್ಕೆ ಬಿಟ್ಟಿದ್ದು.

**ಬಂಗಾರವಲ್ಲದೆ ಇತರ ಲೋಹಗಳು :-**

ಅಕ್ಷಯ ತೃತೀಯದಂದು ಕೇವಲ ಚಿನ್ನವನ್ನೇ ಖರೀದಿಸಬೇಕೆಂಬ ಕಟ್ಟು ನಿಟ್ಟಿಲ್ಲ. ಬೆಳ್ಳಿ,ಪ್ಲಾಟಿನಂ ಮುಂತಾದ ಲೋಹಗಳಿಗೂ ತಮ್ಮದೇ ಆದ ಆಕರ್ಷಣೆ ಇದೆ.

ಅಕ್ಷಯ ತೃತೀಯ ಕೇವಲ ಬಂಗಾರ ಖರೀದಿಸುವ ದಿನವಲ್ಲ. ಅದು ಭಾರತೀಯರ ಜೀವನದ ತಾತ್ತ್ವಿಕ ದೃಷ್ಟಿಯನ್ನು ಪ್ರತಿಬಿಂಬಿಸುವ ಸಂಸ್ಕೃತಿ ಪರ ದಿನ. ಸಂಪತ್ತು ಎಂದರೆ ಕೇವಲ ಸಂಗ್ರಹ ವಲ್ಲ ಬದುಕಿನ ಸಂಭ್ರಮವನ್ನು ಅಭಿವ್ಯಕ್ತಗೊಳಿಸುವ ಸಾಧನ, ಭವಿಷ್ಯದ ಭದ್ರತೆಗೆ ನೆಲೆ ಮತ್ತು ಆಪತ್ ಕಾಲದಲ್ಲಿ ನೆರವಾಗುವ ಆಧಾರ. ಅಕ್ಷಯ ತೃತೀಯ-ಅಕ್ಷಯ ಭಾಗ್ಯ ಅನನ್ಯ ಶುಭ, ಅಗಣಿತ ಪುಣ್ಯಗಳ ಸಂಕೇತ.

# ಮೊದಲಕಲ್ ಶೇಷದಾಸರು

**ಡಾ।। ರೂಪಶ್ರೀ ಶಶಿಕಾಂತ್**
**89041 26661**


**ಶ್ರೀಶಾಂಘ್ರಿ ಸೇವಕಂ ನಿತ್ಯಂ ಭೂಸುರಾಗ್ರಕುಲೋದ್ಭವಂ**
**ವಾಸಮಾದಿ ಶಿಲಾ ಕ್ಷೇತ್ರಂ ಶೇಷದಾಸ ಗುರುಂ ಭಜೇ**

ನಮ್ಮ ದಾಸ ಸಾಹಿತ್ಯ ಕಂಡಂತಹ ಅನರ್ಘ್ಯವಾದ ರತ್ನಗಳಲ್ಲಿ ಒಬ್ಬರಾದವರು ಮೊದಲಕಲ್ ಶೇಷದಾಸರು. ಇವರು ಅರ್ಜುನಾಂಶ ಸಂಭೂತರು ಎಂಬ ನಂಬಿಕೆ ಇದೆ. ಮೊದಲನೇ ಜನ್ಮದಲ್ಲಿ ಶ್ರೀ ಶ್ರೀ ಮಧ್ವಾಚಾರ್ಯರ ಗ್ರಂಥಗಳನ್ನು ಹೊತ್ತಂತಹ ಎತ್ತಾಗಿದ್ದವರು. ಎರಡನೇ ಜನ್ಮದಲ್ಲಿ ಜಯತೀರ್ಥರಾಗಿ ಅವತರಿಸಿ ಗ್ರಂಥಗಳಿಗೆ ಟೀಕೆಯನ್ನು ಬರೆದರು. ಇವರೇ ತಮ್ಮ ಮೂರನೆಯ ಜನ್ಮದಲ್ಲಿ ಶೇಷಗಿರಿರಾಯರಾಗಿ ಶ್ಯಾನುಭೋಗರ ವಂಶದಲ್ಲಿ ಜನಿಸಿದರು ಎಂದು ಶ್ರೀ ಪಿ. ರಾಮಚಂದ್ರರಾಯರು "ಮೊದಲಕಲ್ಲು ಶೇಷದಾಸವರ್ಯರ ಚರಿತ್ರೆ" ಎಂಬ ಗ್ರಂಥದಲ್ಲಿ ಸವಿಸ್ತಾರವಾಗಿ ತಿಳಿಸುತ್ತಾರೆ.

ಹೈದ್ರಾಬಾದ್ ಸಂಸ್ಥಾನಕ್ಕೆ ಸೇರಿದ ಮಹಬೂಬ್ ನಗರ ಜಿಲ್ಲೆಯ ಗದ್ವಾಲ ಸಂಸ್ಥಾನದ ಧರೂರು ಗ್ರಾಮದ ಶ್ಯಾನುಭೋಗರಾಗಿದ್ದ ಶ್ರೀ ತಿಮ್ಮಣ್ಣಯ್ಯನವರ ಮೊದಲನೆ ಮಗ ಶೇಷಪ್ಪ. ಇವರು ಶಾಲಿವಾಹನ ಶಕ 139 ಈಶ್ವರ ನಾಮ ಸಂವತ್ಸರ ಕಾರ್ತಿಕ ಶುದ್ಧ ದ್ವಾದಶಿ ಕ್ರಿಸ್ತಶಕ 1817 ರಲ್ಲಿ ಜನಿಸಿದರು. ಪ್ರಭುದ್ಧರಾದ ಮೇಲೆ ಶೇಷಗಿರಿರಾಯರು ಎಂದು ಪ್ರಸಿದ್ಧರಾದರು. ಇವರಿಗೆ ಸುಬ್ಬಮ್ಮ ಮತ್ತು ವೆಂಕಮ್ಮ ಎಂಬ ಇಬ್ಬರು ಪತ್ನಿಯರಿದ್ದರು. ಇವರು ಸುಖ ಸಂತೋಷದಿಂದ ಊಟೋಪಚಾರಗಳನ್ನು ಮಾಡಿಸುತ್ತಾ ರಾಜರಂತೆ ಬಾಳುತ್ತಿದ್ದರು.

## ಮನಃ ಪರಿವರ್ತನೆ :-

1853 ಇಸ್ವಿಯಲ್ಲಿ, ಇವರ ಬಗ್ಗೆ ಕೆಲವು ದುಷ್ಟರು ಗದ್ವಾಲ ಸಂಸ್ಥಾನದ ರಾಜರಿಗೆ ದೂರು ಕೊಟ್ಟರು. ರಾಜ ಸೋಮ ಭೂಪಾಲನು ವಿಚಾರಣೆಯನ್ನು ನಡೆಸದೆ. ಅವರ ಜರಿಯ ಧೋತ್ರ, ಜರಿ ರುಮಾಲು, ಬೆರಳ ಉಂಗುರಗಳು ಎಲ್ಲವನ್ನು ನೋಡಿ ಪ್ರಜೆಗಳ ದುಡ್ಡನ್ನು ಸ್ವಂತಕ್ಕೆ ಬಳಸಿದ್ದಾರೆ ಎಂದು ಕೈಯಲ್ಲಿದ್ದ ನಾಗಬೆತ್ತ ಶ್ಯಾನುಭೋಗರ ತಲೆಯ ಕಡೆಗೆ ಬೀಸಿದನು. ಆಗ ಶೇಷಪ್ಪನವರ ರುಮಾಲು ಕೆಳಗೆ ಬಿದ್ದಿತು. ಅವಮಾನವನ್ನು ಸಹಿಸಲಾರದೆ ಶೇಷಪ್ಪನವರು ನನ್ನ ರುಮಾಲು ಉರುಳಿದರೆ ನನ್ನ ತಲೆಯೆ ಉರುಳಿದಂತೆ, ಇನ್ನು ನಿಮ್ಮ ಕೆಲಸವನ್ನು ನಾನು ಮಾಡುವುದಿಲ್ಲ ಎಂದು ಹೇಳಿ, ಲೆಕ್ಕ ಪತ್ರಗಳನ್ನು ರಾಜನ ಮುಂದೆ ಎಸೆದು ಅಲ್ಲಿಂದ ಹೊರಗೆ ಬಂದರು. ಇದೇ ಅವರ ಜೀವನದಲ್ಲಿ ಒಂದು ಮಹತ್ತರವಾದ ಬದಲಾವಣೆಯಾಗಲು ಕಾರಣವಾಯಿತು. ಭಗವಂತನ ಸೇವೆಯ ಅವರ ಹೊಸ ಜೀವನ ಪ್ರಾರಂಭವಾಯಿತು. ಅರಮನೆಯಿಂದ ಅರಣ್ಯದ ಕಡೆ ನಡೆದರು. ಒಂದು ಸ್ಥಳದಲ್ಲಿ ನೆಲದ ಮೇಲೆ ಮಲಗಿಬಿಟ್ಟರು. ಸ್ವಪ್ನದಲ್ಲಿ ಮಾರುತಿ ದರ್ಶನವಾಯಿತು. ಬೆಳಗಾದಾಗ ಅವರು ಕುಳಿತಿದ್ದ ಜಾಗದಿಂದ ಸ್ವಲ್ಪ ದೂರದಲ್ಲೇ ಒಂದು ಹುತ್ತ ಕಾಣಿಸಿತು. ಅದರೊಳಗೆ ಮಾರುತಿ ವಿಗ್ರಹ ಗೋಚರವಾಯಿತು. ರಾಯರು ನಮಸ್ಕರಿಸಿ, ನೀರಿನ ಶಬ್ದವನ್ನು ಹಿಡದು ಕೃಷ್ಣಾ ನದಿಯಲ್ಲಿ ಸ್ನಾನ ಮಾಡಿ ಅನುಷ್ಠಾನ ಮುಗಿಸಿ ಮಾರುತಿ ಬಳಿ ಬಂದರು.



ರೇವನಹಳ್ಳಿ ಶ್ಯಾನುಭೋಗರಿಗೆ ಸ್ವಪ್ನದಲ್ಲಿ ಹನುಮಂತನು ಬಂದು, ನನ್ನ ಸೇವೆಗಾಗಿ ಬ್ರಾಹ್ಮಣನು ಬಂದಿದ್ದಾನೆ. ಅವನಿಗೆ ಊಟದ ವ್ಯವಸ್ಥೆಯನ್ನು ಮಾಡು ಎಂದಿದ್ದನು. ಅವರು ಅಡಿಗೆಯನ್ನು ಮಾಡಿಕೊಂಡು ಬಂದಿದ್ದರು. ಶೇಷಪ್ಪ ಅಲ್ಲಿ ಇರುವವರೆಗೂ ಅವರ ಊಟದ ವ್ಯವಸ್ಥೆಯನ್ನು ಅವರೇ ನೋಡಿಕೊಂಡರು. ಭಕ್ತರ ಯೋಗಕ್ಷೇಮ ಭಗವಂತ ನೋಡಿಕೊಳ್ಳುತ್ತಾನೆ!

**ತಪಸ್ಸು ಮತ್ತು ಸಾಧನೆ :**

ಅಲ್ಲೇ ಉಳಿದಿದ್ದ ಶೇಷದಾಸರು ಪ್ರತಿ ದಿನವೂ ಹುತ್ತದಿಂದ ಸ್ವಲ್ಪ ಸ್ವಲ್ಪ ಮಣ್ಣನ್ನು ತೆಗೆದು ಹುತ್ತದಲ್ಲಿ ಅಡಗಿದ್ದ ಮಾರುತಿರಾಯನ ದಿವ್ಯ ದರ್ಶನ ಎಲ್ಲರಿಗೂ ಆಗುವಂತೆ ಮಾಡಿದರು.

ನಂತರ ಪ್ರಾರಂಭವಾಯಿತು ಅವರ ತಪಶ್ಚರ್ಯ. ಪ್ರತಿದಿನ ಬಾವಿಯಲ್ಲಿ ಮಿಂದು ಇಳಿ ವದ್ದೆಯಲ್ಲಿ ಕುಳಿತು ಅಖಂಡವಾಗಿ ಮಾರುತಿಯ ಜಪ ಪ್ರಾರಂಭಿಸಿದರು. ಬಟ್ಟೆ ಸ್ವಲ್ಪ ಆರಿದರೆ ಮತ್ತೆ ಬಾವಿಯಲ್ಲಿ ಮುಳುಗಿ ಮತ್ತೆ ಜಪ ಮುಂದುವರಿಸುತ್ತಿದ್ದರು. ಅವರ ತಪಕೆ ಒಲಿದ ಆಂಜನೇಯನು ಕನಸಿನಲ್ಲಿ ಬಂದು ವಿಜಯದಾಸರಾಯರ ಸೇವೆಯನ್ನು ಮಾಡಲು ಆಜ್ಞಾಪಿಸಿದನು.

**ಅಂಕಿತಪ್ರದಾನ :**

ಅಲ್ಲಿಂದ ವಿಜಯದಾಸರ ಕಟ್ಟೆ ಚಿಪ್ಪಗಿರಿಗೆ ಬಂದು, ಅಲ್ಲಿ ಕಠಿಣ ತಪಸ್ಸನ್ನು ಮಾಡಿ ಸೇವೆ ಮಾಡಿದರು. ಆಗ ಒಂದು ದಿನ ವಿಜಯದಾಸರು ಸ್ವಪ್ನದಲ್ಲಿ ಬಂದು "ಶ್ರೀಗುರು ವಿಜಯವಿಠಲ" ಎಂಬ ಅಂಕಿತವನ್ನು ದಾಸರಿಗೆ ಕೊಟ್ಟರು. "ನಂಬಿದೆ ನಿನ್ನ ಪಾದ ಗುರು ಮುಖ್ಯ ಪ್ರಾಣ" ಎಂಬುದು ಅವರಿಂದ ಬಂದಂತಹ ಮೊದಲ ಕೃತಿ. ಅನೇಕ ಉಗಾಭೋಗ, ದೇವರ ನಾಮಗಳ ಜೊತೆ ಸುಳಾದಿಗಳನ್ನೂ ರಚಿಸಿದ್ದಾರೆ.

ಅಲ್ಲಿಂದ ಚಿಂತಲವೇಲಿ ಮಾರುತಿ ಸನ್ನಿಧಾನಕ್ಕೆ ಹಿಂದಿರುಗಿದರು. ಅಲ್ಲಿ ಉಗ್ರರೂಪ ಶಾಂತಗೊಳಿಸಲು ಯಂತ್ರ ಬರೆದಿಟ್ಟರು. ಸುತ್ತಮುತ್ತಲಿನ ಜನ ಬಂದು ತಮ್ಮ ಕಷ್ಟಗಳನ್ನು ದಾಸರಿಗೆ ಹೇಳಿ ಪರಿಹಾರ ಮಾಡಿಕೊಳ್ಳುತ್ತಿದ್ದರು.

ಗದ್ವಾಲಿನ ಮಹಾರಾಣಿ ವೆಂಕಟ ಲಕ್ಷಮ್ಮನವರು ದಾಸರಿಗೆ ತಮ್ಮ ಮೊದಲನೇ ಮಗನಿಂದ ಆದ ಅಪಚಾರಕ್ಕೆ ಕ್ಷಮೆ ಯಾಚಿಸಿ ಸೇವಾ ರೂಪದಲ್ಲಿ ಆಂಜನೇಯನಿಗೆ ದೇವಾಲಯವನ್ನು ನಿರ್ಮಿಸಿಕೊಟ್ಟರು.

**ಮೊದಲುಕಲ್ಲಿಗೆ ಪ್ರಯಾಣ**

ಒಂದು ರಾತ್ರಿ ದಾಸರಿಗೆ ಹನುಮಂತ ದೇವರು ಸ್ವಪ್ನದಲ್ಲಿ ಬಂದು ಆದಿ ಶಿಲಾ ಕ್ಷೇತ್ರದಲ್ಲಿ ಶ್ರೀನಿವಾಸನ ಸೇವೆಯನ್ನು ಮಾಡುವಂತೆ ಹೇಳಿದರು. ಈ ಕ್ಷೇತ್ರದಲ್ಲಿ ಶ್ರೀನಿವಾಸನ ದಿವ್ಯ ಸನ್ನಿಧಾನಕ್ಕೆ ಪ್ರಾಣದೇವರೇ ಅವರನ್ನು ಕಳುಹಿಸಿದರು! ಅಲ್ಲಿಗೆ ಬಂದ ದಾಸರು ಶ್ರೀನಿವಾಸನ ಸೇವೆ ಮತ್ತು ಪಶ್ಚಿಮ ಬಾಗಿಲಿನ ಹೊರಗಿದ್ದ ರುದ್ರ ದೇವರ ಉಪಾಸನೆ ಮಾಡುತ್ತಾ ಭಕ್ತರ ಕಷ್ಟಕ್ಕೆ ಸೂಕ್ತ ಪರಿಹಾರ ನೀಡುತ್ತಾ ಇದ್ದರು. ಗದ್ವಾಲಿನ ದೊರೆಗಳು ಆ ದೇವಸ್ಥಾನಕ್ಕೆ ಚಿಂತಲವೇಲಿ ಆಂಜನೇಯನಿಗೆ ಮತ್ತು ದಾಸರಿಗೆ ಕಲ್ಲೂರಿನಲ್ಲಿ ಹೊಲ, ಭೂಮಿ ನೀಡಿದ್ದರು.

**ಪವಾಡಗಳು**

ದಾಸರ ಭೂಮಿ ಶ್ಯಾನುಭೋಗ ಕೃಷ್ಣಪ್ಪ ನೋಡಿಕೊಳ್ಳುತ್ತಿದ್ದರು. ಅವರ ಮೇಲೆ ಸುಳ್ಳು ಅಪವಾದವನ್ನು ಹೊರಿಸಿ ನವಾಬನಿಗೆ ಕಿಡಿಗೇಡಿಗಳು ದೂರು ಕೊಟ್ಟಾಗ,ನವಾಬನು ವಿಚಾರಣೆ ಇಲ್ಲದೆ ತೋಪಿನಿಂದ ಅವರ ತಲೆಗೆ ಗುಂಡು ಹೊಡೆಯುವ ಆಜ್ಞೆ ಕೊಟ್ಟನು. ಆಗ ದಾಸರ ಬಳಿ ಬಂದ ಕೃಷ್ಣಪ್ಪನವರಿಗೆ ದಾಸರು ಮಂತ್ರಾಕ್ಷತೆ ಕೊಟ್ಟು, ಮೂರು ಉಗಾಭೋಗಗಳನ್ನು ರಚಿಸಿ, ಅದನ್ನು ನಿತ್ಯಪಠಿಸುವಂತೆ ಹೇಳಿ ಕಳಿಸಿದರು. ಮಂತ್ರಾಕ್ಷತೆಯನ್ನು ತಮ್ಮ ರುಮಾಲಿನಲ್ಲಿ ಕಟ್ಟಿಟ್ಟುಕೊಂಡಿದ್ದ ಕೃಷ್ಣಪ್ಪನವರ ಮೇಲೆ ಗುಂಡು ಹಾರಿಸಲು ತೋಪಿಗೆ ಬೆಂಕಿ ಹಚ್ಚಿದಾಗ ಮೂರು ಬಾರಿ ಆರಿಹೋಯಿತು. ನವಾಬನು ಅವರನ್ನು ದೇವತಾ ಮನುಷ್ಯ ಎಂದು ಬಿಟ್ಟು ಕಳುಹಿಸಿದನು.

ದಾಸರು ಆದಿಶಿಲಾ ಕ್ಷೇತ್ರದಲ್ಲಿ ಛತ್ರ ನಿರ್ಮಿಸಿ ನಿತ್ಯ ಅನ್ನದಾನ ಮಾಡುತ್ತಿದ್ದರು, ಭಗವಂತನ ಸೇವೆ, ಪುರಾಣ ಪ್ರವಚನ, ವೇದ ಪಠಣ ಸಂಗೀತದ ಆರಾಧನೆ ನಡೆಯುತ್ತಿತ್ತು. ಈ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿರುವ ಪರ್ವತದ ಗುಹೆಯಲ್ಲಿ ದೈವ ಚಿಂತನ ಮತ್ತು ತಪಸ್ಸನ್ನು ದಾಸರು ಮಾಡುತ್ತಿದ್ದರು. ಇವರ ತಪಸ್ಸಿಗೆ ಮೆಚ್ಚಿ ಶ್ರೀನಿವಾಸನು ಗುಹೆ ಒಳಗೆ ಒಂದು ಗುಂಡಿನ ಮೇಲೆ ಪ್ರತ್ಯಕ್ಷನಾಗಿರುವನು.

ಒಂದು ಬಾರಿ ಕಾಶಿಗೆ ಹೊರಟಿದ್ದ ಯಾತ್ರಾರ್ಥಿಗಳಿಗೆ, ಶ್ರೀನಿವಾಸನ ಮುಂದೆ ಕುಳಿತು ಪ್ರಾರ್ಥನೆ ಮಾಡಿದಾಗ ಅವನ ಪಾದದಿಂದ ಗಂಗಾದೇವಿ ಹೊರಗೆ ಬಂದು ಹರಿಯಲು ಪ್ರಾರಂಭಿಸಿದಳು. ಭಕ್ತರು ಗಂಗಾ ಸ್ನಾನ ಮಾಡಿದರು ಅಲ್ಲೇ ವಿಶ್ವನಾಥನ ದರ್ಶನವೂ ಆಯಿತು. ಬಂದ ಗಂಗೆಯನ್ನು ದಾಸರು ಹಿತ್ತಾಳೆ ಹೂಜಿಯಲ್ಲಿ ತುಂಬಿದ್ದರು. ಆ ಹೂಜಿ ಈಗ ಧರೂರಿನ ಪಾರ್ಥ ಸಾರಥಿ ಗುಡಿಯಲ್ಲಿದೆ. ದಾಸರು ಹತ್ತು ಬೆರಳಿಗೂ ಬಂಗಾರದ ಉಂಗುರ ಮತ್ತು ಕೊರಳಲ್ಲಿ ಕಂಠಿಹಾರ ಹಾಕಿರುತ್ತಿದ್ದರು. ಇದನ್ನು ಕದಿಯಲು ಬಂದ ಕಳ್ಳರಿಗೆ ಕಣ್ಣು ಕುರುಡಾಯಿತು. ದಾಸರೇ ಮತ್ತೆ ಕಣ್ಣು ಬರಿಸಿ, ಅವರಿಗೆ ಉಂಗುರಗಳನ್ನು ಕೊಟ್ಟು ಮತ್ತೆ ಕದಿಯದಿರಲು ಹೇಳಿದರು. ತಮ್ಮ ಮಗಳ ಮಗಳನ್ನು ಮಗನಿಗೆ ತಂದು ಕೊಂಡಿದ್ದರು. ಆಕೆ ಟೀಕಾರಾಯರ ದರ್ಶನಕ್ಕೆ ಹೋದಾಗ ಬೃಂದಾವನದ ಸನ್ನಿಧಾನದಲ್ಲಿ ಶೇಷದಾಸರ ದರ್ಶನ ಪಡೆದರು!

ಬಂಧುವಿನ ಮನೆಯ ಆಹಾರ ಸೇವನೆಯಿಂದ, ವಮನವಾಗಿ, (ವಾಂತಿಯಾಗಿ) ಆಹಾರದ ಜೊತೆ, ತಪಸ್ಸಿನ ಸಿದ್ಧಿ ಹೋಯಿತು ಮತ್ತೆ ಮೊದಲ ಕಲ್ಲಿನ ಬೆಟ್ಟ ಏರಿ ಭಗವಂತನಿಗೆ ವಿಧವಿಧವಾದ ಪ್ರಾರ್ಥನೆ ಸಲ್ಲಿಸಿ ಹಾಡಿದ್ದರು. "ಇಷ್ಟು ನಿರ್ದಯನ್ಯಾಕೋ ಎಲೆ ಆಪ್ತನಾದ ಕೃಷ್ಣ ನಿನಗೆ ನಾನು ದೂರನಾದವನೆ ಮಾಯಗಾರನೇ ನಿನ್ನ ಮಾಯ ತಿಳಿಯುವುದಕ್ಕೆ ಕಾಯ ಜಾದ್ಯಾದಿ ಸುರರು ಸಮರ್ಥರೇ? " ಎಂದು ಕೊಂಡಾಡಿ ಕೇವಲ ಉತ್ತತ್ತಿಯನ್ನು ಸೇವಿಸಿ ಕಠಿಣ ತಪಸ್ಸನ್ನು ಮಾಡಿ ಮತ್ತೆ ಅಪರೋಕ್ಷವನ್ನು ಪಡೆದುಕೊಂಡರು.

"ನಿನ್ನ ಕರುಣದಿಂದ ಧನ್ಯ" ದೈವ ಎಂದು ಹಾಡಿ ಹೊಗಳಿದ್ದಾರೆ. ಹೀಗೆ ಅನಂತ ಪವಾಡಗಳನ್ನು ಮಾಡಿ ಅನೇಕ ಸುಳಾದಿಗಳು, ಉಗಾಭೋಗಗಳನ್ನು ಮತ್ತು ಕೀರ್ತನೆಗಳನ್ನು ರಚಿಸಿ, ಶಾಲಿವಾಹನ ಶಕೆ 1807 ಪಾರ್ಥಿವ ನಾಮ ಸಂವತ್ಸರ ವೈಶಾಖ ಶುದ್ಧ ಅಷ್ಟಮಿ ದಿನ (ಕಿ.ಶ್ರ. 1885) ಮೊದಲಕಲ್ಲು ಕ್ಷೇತ್ರದಲ್ಲಿ ಶ್ರೀ ಹರಿಯ ಪಾದವನ್ನು ಸೇರಿದರು.

ಮೊದಲು ಕಲ್ಲಿನಲ್ಲಿ ಶ್ರೀನಿವಾಸ ದೇವಾಲಯ ದಕ್ಷಿಣ ಭಾಗದಲ್ಲಿ ದಾಸರಕಟ್ಟೆ ಇದೆ. ದಾಸರ ವಂಶಸ್ಥರು ಅಲ್ಲಿದ್ದು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಮತ್ತು ದಾಸರ ಆರಾಧನೆಯನ್ನು ಶ್ರದ್ಧೆಯಿಂದ ಮಾಡುತ್ತಾರೆ. ಇದನ್ನು "ಅಪ್ಪ ಅವರ ಕಟ್ಟೆ" ಎಂದು ಕರೆಯುತ್ತಾರೆ. ದಾಸರನ್ನು ಮೊದಲಕಲ್ಲು ದಾಸರು, ಧರೂರು ದಾಸರು, ಚಿಂತಲವೇಲಿ ದಾಸ ಎಂದೆಲ್ಲ ಕರೆಯುತ್ತಾರೆ.

**ಕೃತಿಗಳ ವಿಶೇಷತೆಗಳು**

ಇವರು ಭಗವದ್ಗೀತೆ ಸುಳಾದಿ ಬರೆದಿದ್ದಾರೆ. ಅದರಲ್ಲಿ ತಾವು ಅರ್ಜುನನ ಅಂಶ ಎಂದು ತಾವೇ ಹೇಳಿಕೊಂಡಿದ್ದಾರೆ. "ತತ್ರಶ್ರೀ ವಿಜಯೋ ಭೂರ್ತಿ" ಎಂದು ಪ್ರಾರಂಭವಾಗುವ ಸುಳಾದಿಯಲ್ಲಿ "ಮುಕ್ತರಾಶ್ರಯ ಗುರುವಿಜಯವಿಠ್ಠಲ ನಿನ್ನ ಅತ್ಯಧಿಕ ಪ್ರೀತಿಯೋ ಭೂತಿ ಎನಗೆ" ಎಂದು ತಾವು ಅರ್ಜುನಾಂಶ ಸಂಭೂತರು ಎಂಬುದನ್ನು ಹೇಳಿಕೊಂಡಿದ್ದಾರೆ. "ನಿನ್ನ ಕರುಣದಿಂದ ಧನ್ಯ ನಾನೆಲೋ ದೇವಾ" ಎಂದು ಈ ಸುಳಾದಿಯನ್ನು ಮುಗಿಸುತ್ತಾರೆ.

ಇನ್ನೊಂದು ಸುಳಾದಿಯ ಜತೆಯಲ್ಲಿ "ಬ್ರಹ್ಮಸ್ತು ಬ್ರಹ್ಮನಾಮಾಸೌ, ರುದ್ರಸ್ತು ರುದ್ರನಾಮ, ಎನ್ನ ನಾಮವು ನೀನೇ ಗುರು ವಿಜಯ ವಿಠಲ ರಾಯಾ" ಎಂದು ಹಾಡಿದ್ದಾರೆ. ದ್ವೈತ ಮತದ ತತ್ವಶಾಸ್ತ್ರವನ್ನು ಪ್ರತಿ ಪಾದಿಸುವ ಅನೇಕ ರಚನೆಗಳನ್ನು ಮಾಡಿದ್ದಾರೆ. ಅದರಲ್ಲಿ ವಾರದ ಸುಳಾದಿಗಳು ಎಂದು ಏಳು ಸುಳಾದಿಗಳನ್ನು ರಚಿಸಿದ್ದಾರೆ. ಆಯಾವಾರದ ಪೂಜಾ ವಿಧಿ ಮತ್ತು ದೇವತಾ ಆರಾಧನೆಯನ್ನು ತೋರಿಸುತ್ತದೆ.

ದೇವಿಯನ್ನು ಆರಾಧಿಸಿರುವಂತಹ ಸುಳಾದಿಯಲ್ಲಿ "ಬೇಡಿದ ವರಗಳ ನೀವೆನೆಂದು ಸುವಾಣಿಯಿಂದ ಎನ್ನ ಆದರಿಸಿದ ನಿನ್ನ ಔದಾರ್ಯ ತನಕಿನ್ನು ಆವದಾವದು ಸಮ. ಶ್ರೀವತ್ಸಲಾಂಛನ ಗುರುವಿಜಯವಿಠಲನ ಭಾವ ದಿಂದಲಿ ನೋಳ್ಪ ಭಾಗ್ಯವ ಪಾಲಿಸೇ" ಎಂದು ತಮಗಾದ ದೇವಿಯ ಕಾರುಣ್ಯವನ್ನು ಹೇಳಿಕೊಂಡಿದ್ದಾರೆ. ಸೋಮವಾರದ ಸುಳಾದಿಯಲ್ಲಿ 'ನಿನ್ನ ಕಾಂಬೋದೆ ನಿತ್ಯ ಐಶ್ವರ್ಯ, ಅವನ ಕಾಣಬೇಕೆಂಬ ಹಂಬಲ ಇರಬೇಕು ಎಂದು ಪ್ರತಿಪಾದಿಸಿದ್ದಾರೆ. ಆದಿತ್ಯವಾರದ ಸುಳಾದಿಯಲ್ಲಿ ಅತ್ಯಂತ ಸುಲಭವಾದ ಮಾರ್ಗದಲ್ಲಿ ಭಗವಂತನನ್ನು ನೋಡಲು ಕ್ಷೇತ್ರದೊಳಗೆ ಇರುವ ಕ್ಷೇತ್ರಜ್ಞನನ್ನು ಭಜಿಸು ಎಂದಿದ್ದಾರೆ. ಭಗವದ್ಗೀತೆಯ ವಿಶೇಷವಾದ ಶ್ಲೋಕಗಳಿಗೆ ಸುಳಾದಿಗಳ ರೂಪದಲ್ಲಿ ಅಚ್ಚ ಕನ್ನಡದಲ್ಲಿ ಎಲ್ಲರಿಗೂ ಅರ್ಥವಾಗುವ ಹಾಗೆ ಬರೆದಿದ್ದಾರೆ.

ಅವರು ವಿಶೇಷವಾಗಿ ಆಪತ್ತು ಪರಿಹಾರಕ್ಕೆ ಮೂರು ಉಗಾಭೋಗಗಳನ್ನು ರಚಿಸಿದ್ದಾರೆ. ಇದನ್ನು ಅವರು ಕಲ್ಲೂರು ಕೃಷ್ಣಪ್ಪನವರಿಗೆ ರಚಿಸಿಕೊಟ್ಟರು ಎಂದು ಪ್ರತೀತಿ ಇದೆ. ಕಷ್ಟ ಪರಿಹಾರಕ್ಕೆ ಹಾಡಿಕೊಳ್ಳಬೇಕಾದದ್ದು ಎಂದು ಇಲ್ಲಿ ಒಂದನ್ನು ಉಲ್ಲೇಖಿಸಲಾಗಿದೆ.

"ಭಕ್ತ ವತ್ಸಲ ನೆಂಬ ಬಿರುದುಳ್ಳ ದೇವ ನಿನ್ನ
ಭಕ್ತಿಯಿಂದಲೇ ನಮಿಸಿ ಬಿನ್ನಯಿಸುವೆ
ರಿಕತನ್ನ ಭಿನ್ನಪವ ಮನಕೆ ತಂದು ವೇಗ ಆ
ಸಕುತಿಯಿಂದಲಿ ಗ್ರಹಿಸಿ ಸಫಲ ಮಾಡು
ಭಕುತನಾದ ಇವಗೆ ಲೌಕಿಕದಿಂದ ಬಂದ
ವಿಕಟ ರೂಪವಾದ ದುರಿತದಿಂದ
ಮುಕುತನ್ನ ಮಾಡುವುದು ಕರುಣದಿಂದಲೇ ವೇಗ
ಶಕಟ ಭಂಜನ ಕೃಷ್ಣ ಉತ್ಕೃಷ್ಟನು
ಮುಕುತಿದಾಯಕ ಗುರು ವಿಜಯವಿಠಲ ಮದ್ಭಕ್ತನ
ಪ್ರಾಣ ಪ್ರೀತಿ ಎಂಬುದು ಸತ್ಯ ಮಾಡು"

ದಾಸರ ಕೃತಿಗಳಲ್ಲಿ ಅವರ ತಪಸ್ಸು ಸಾಧನೆಯ ಫಲದಿಂದ ಅವರು ಕಂಡು ಕೊಂಡಂತಹ ಸತ್ಯಗಳನ್ನು ತುಂಬಿಟ್ಟಿರುವುದರಿಂದ, ಅವರ ಕೃತಿಗಳ ಅವಲೋಕನ ಗಾಯನ ಮತ್ತು ಭಜನ ಜೊತೆಗೆ ಅರ್ಥಾನುಸಂಧಾನದಿಂದ ಸನ್ಮಾರ್ಗ ದರ್ಶನವಾಗುತ್ತದೆ. ದಾಸರ ಅನುಗ್ರಹ ಮತ್ತು ದಾಸರ ಅಂತರ್ಯಾಮಿಯಾದ ಮಧ್ವಾಚಾರ್ಯರ ಮತ್ತು ಅವರ ಅಂತರ್ಯಾಮಿಯಾದ ಪರಮಾತ್ಮನ ಅನುಗ್ರಹವು ಎಲ್ಲರಿಗೂ ಆಗಲಿ ಎಂದು ಪ್ರಾರ್ಥಿಸುತ್ತೇನೆ.



# ಮಧುರಕವಿ ಆಳ್ವಾರ್

**ಡಾ॥ ಎನ್.ಕೆ. ರಾಮಶೇಷನ್**
**8277146110**

ಆಳ್ವಾರರಲ್ಲಿ ಗುರುಭಕ್ತಿ, ಭಾಗವತ ಭಕ್ತಿಗೆ ಪ್ರಾಮುಖ್ಯತೆ ನೀಡಿದವರು ಮಧುರಕವಿ ಇವರು, ತಮ್ಮ ಆಚಾರ್ಯರಾದ ನಮ್ಮಾಳ್ವಾರರ ಇವರಿಬ್ಬರ ಜೀವನಗಳೇ ಒಂದರಲ್ಲಿ ಇನ್ನೊಂದು ಗಾಢವಾಗಿ ಬೆರೆತ, ಬೆಸೆದುಕೊಂಡ ಜೀವನಗಳು, ನಮ್ಮಾಳ್ವಾರರೆಂಬುವ ಮರವನ್ನು ಆಶ್ರಯಿಸಿದ್ದ ಬಳ್ಳಿ ಮಧುರ ಕವಿಯಾಳ್ವಾರರು, ಜಾತಿಯಲ್ಲಿ ಬ್ರಾಹ್ಮಣರಾದ ಮಧುರಕವಿಗಳು "ವೆಳ್ಳಾಲ್" ಜಾತಿಯ ನಮ್ಮಾಳ್ವಾರರನ್ನು 'ಆಚಾರ್ಯದೇವೋ ಭವ" ಎಂಬಂತೆ ತಮ್ಮ ಪರಮ ಆಚಾರ್ಯರಾಗಿ ಅಂಗೀಕರಿಸಿ, ನಿಷ್ಠೆಯಲ್ಲಿ ತೋರಿದರು ಕೂಡ ಕುಲಕ್ಕಿಂತಲೂ ಗುಣಕ್ಕೆ ಕೊಟ್ಟ ಹಿರಿಮೆ ಏನೆಂಬುದು ಮಧುರ ಕವಿಗಳ ಜೀವನದಿಂದ ವ್ಯಕ್ತವಾಗುವುದು. 'ಚೈತ್ರೇ ಚಿತ್ರಾ ಸಮುದ್ಭೂತಂ ಪಾಂಡ್ಯ ದೇಶೇ ಖಹಾಂ ಶಕಲಿ'!

ಶ್ರೀ ಪರಾಂಕುಶ ಸದ್ಭಕ್ತಂ "ಮಧುರಂ ಕವಿಂ ಆಶ್ರಯೇ" ಎಂಬುದು ಇವರನ್ನು ಸ್ಮರಿಸುವ ಶ್ಲೋಕ. ಮಧುರಕವಿಗಳು ಜನಿಸಿದ್ದು "ಆಳ್ವಾರ್ ತಿರುನಗರಿ"ಯ ಸಮೀಪದ "ತಿರುಕ್ಕೋಳೂರು"ಎಂಬ ಕ್ಷೇತ್ರದಲ್ಲಿ ಈಶ್ವರ ಸಂವತ್ಸರ, ಮೇಷಮಾಸ ಶುಕ್ಲಪಕ್ಷ, ಚಿತ್ತಾನಕ್ಷತ್ರ, ಶುಕ್ರವಾರದಂದು ಶ್ರೀಮನ್ನಾರಾಯಣನ ಗರುಡನ ಅಂಶಜರು ಇವರು ಬಹು ಬೇಗ ವಿದ್ಯಾ ಪಾರಂಗತರಾದರು, ಅನೇಕ ದಿವ್ಯದೇಶ ಯಾತ್ರೆ ಮಾಡಿದರು (ಅಯೋಧ್ಯಾ ಮಥುರಾ, ಮಾಯಾ, ಕಾಶೀ, ಕಾಂಚೀ, ಆವಂತಿಕಾ, ಪೂರಿ, ದ್ವಾರಾವತಿ- ಹೀಗೆ ಏಳು ಕ್ಷೇತ್ರ ಯಾತ್ರೆ) ಯೋಗಸಾಧಕರು. ಉತ್ತರಭಾರತದ ಯಾತ್ರೆ-ಹುಳ್ಳೂರಿಗೆ ಇನ್ನು ಮರಳುವ ಯೋಚನೆ,ಕಾಶಿಯಲ್ಲಿ, ರಾತ್ರಿವೇಳೆ, ಆಕಾಶದಲ್ಲಿ ಒಂದು ದಿವ್ಯ ತೇಜಸ್ಸು ಮಧುರಕವಿಗಳು ಕಂಡರು. ಹಾಗೆಯೇ ಅದು ದಕ್ಷಿಣದೆಡೆ ಗಮನಿಸುತ್ತಿರುವಂತೆ ಕಂಡಿತು. ಮಧುರ ಕವಿಗಳು ಆಜ್ಯೋತಿಯನ್ನೇ ಅನುಸರಿಸಿ ದಕ್ಷಿಣದ ಆಳ್ವಾರ್‌ತಿರುನಗರಿ ಸೇರಿದ್ದಾರೆ. ಅಲ್ಲಿ ಆ ದಿವ್ಯ ತೇಜಸ್ಸು ಮಾಯ ಮತ್ತೆ ಅಚ್ಚರಿ!! (ಈ ಊರಿಗೆ ಕುರುಹುರು ಎಂದು ಹೆಸರಿದೆ). ಅಲ್ಲಿ ಆದಿನಾಥನ ದೇವಾಲಯ, ಅಲ್ಲೆ ಒಂದು ದೊಡ್ಡ ಹುಣಿಸೆ ಮರದ ಪೊಟರೆಯಲ್ಲಿ ಧ್ಯಾನದಲ್ಲಿ ಒಂದು ಶಕ್ತಿ ಮಗುವಿನ ರೂಪದಲ್ಲಿದೆ. ಮಧುರಕವಿಗೆ ಅಚ್ಚರಿ! ಅವರು ಕಂಡ ತೇಜಸ್ಸು, ನಮ್ಮಾಳ್ವಾರರ (ಮಗು) ತೇಜಸ್ಸು ಒಂದೇ ರೀತಿ "ಗುರುಪಾದಾಂಭುಜಂ ಧ್ಯಾಯೇತ್, ಸದಾ ಜಪೇತ್" ಎಂಬುದು ಮಧುರಕವಿಗಳ ದಿನ ಚಕ್ಕಿಯೇ!

ಮಗು ಸುಮಾರು 12-14 ವರ್ಷ ಪದ್ಮಾಸನಸ್ಥ ನಮ್ಮಾಳ್ವಾರರು! ಧ್ಯಾನಾಸಕ್ತರಾಗಿ ಕಣ್ಣುಗಳನ್ನು ಮುಚ್ಚಿದ್ದಾರೆ. ಬಲಗೈ ಧ್ಯಾನ/ಜ್ಞಾನ ಮುದ್ರೆ, ಶಿಲಾಪ್ರತಿಮೆಯೇ ಪರೀಕ್ಷಿಸೋಣ ಎಂದು ಒಂದು ದಪ್ಪ ಕಲ್ಲನ್ನು ಎತ್ತಿ ದೊಪ್ಪನೆ ಕೆಳಗೆ ಹಾಕಿದರು, ಸದ್ದು ಕೇಳಿದ ತನ್ನ ಕೃಪಾದೃಷ್ಟಿಯನ್ನು ಮಧುರ ಕವಿಗಳಿಗೆ ಬೀರಿದಾ ಪ್ರಕೃತಿಯ ಹೊಟ್ಟೆಯಲ್ಲಿ ಉದಯಿಸಿದ ಜೀವನು ರೂಪವನ್ನು ತಿಂದು ಹೀಗೇ ಇರುವನು ಎಂದು ಪ್ರಶ್ನಿಸಿದರೆ, ಉತ್ತರ ನೀಡಿದರು. ನಮ್ಮಾಳ್ವಾರರು ಅದನ್ನೇ ತಿಂದು ಅಲ್ಲೇ ಇರುವನು (ಕರ್ಮ/ಅಕರ್ಮ ಜಿಜ್ಞಾಸೆ) ಇದನ್ನಾಲಿಸಿ ಮಧುರಕವಿಗಳು ಆನಂದದಿಂದ ಯೋಗಿ ವರನ ಪಾದಗಳಿಗೆರಗಿ ನಮಿಸುತ್ತ ತಮ್ಮ ನಾದಭಕ್ತಿಯನ್ನು ಹಾಡಿದರು. ನಮ್ಮಾಳ್ವಾರರನ್ನು ಕುರಿತು ಮತ್ತೆ ಮೆತ್ತೆ ಮಧುರ ಕವಿಗಳ ಪ್ರಬಂಧ ಕಣ್ಣಿನುಣ್‌ಶಿರುತ್ತಾಯಿ ಇಂದಿಗೂ ಪ್ರಬಂಧಸೇವಾ ಕಾಲದ ಆದಿಯಲ್ಲೇ ಪಾರಾಯಣ ಮಾಡುವ ಸಂಪ್ರದಾಯವಿದೆ.

ಆಶ್ರಿತಸುಲಭವನಾದ ಶ್ರೀಕೃಷ್ಣನ ನಾಮಗಳಿಗಿಂತ ನಮ್ಮಾಳ್ವಾರರ ನಾಮವೇ ನನ್ನ ನಾಲಿಗೆಗೆ ಭೋಗ್ಯ ಗುರುವಿಗಿಂತ ಬೇರೆ ದೈವವಿಲ್ಲ.ಶ್ರೀಮನ್ನಾರಾಯಣನ ಅನುಗ್ರಹಕ್ಕೂ ಗುರುಕೃಪೆಯೇ ದಾರಿ ತೋರುವುದಲ್ಲವೇ? ಕಣ್ಣಿನುಣ್ ಶಿರುತ್ತಾಂಬು ಹನ್ನೊಂದೇ ಪದ್ಯಗಳ ಪ್ರಬಂಧ ಆದರೆ ಗೌರವಾದರಗಳಿಗೆ ಪಾತ್ರವಾಗಿದೆ. ಈ ಪದ್ಯಗಳು ಅವುಗಳ ಸಾರಸ್ವಾರಸ್ಯ ಒಂದೆರಡನ್ನು ನಾನು ಉದಾಹರಿಸಬಹುದು.

ಕಣ್ಣಿನುಣ್ ಶಿರುತ್ತಾಂಬಿನಾಲ್ ಕಟ್ಟುಣ್ಣ
ಪ್ಪಣ್ಣಿಯ ಪೆರುಮಾಯನೆನ್ನಾಪ್ಪನಿಲ್

ನಣ್ಣಿತ್ತೆನ್ ಕುರುಹೂರ್ ನಂಬಿಯೆನ್ರಕ್ಕಾಲ್
ಅಣ್ಣಿಕ್ಕುಮಮುದೂರುಂ ಎನ್ನಾವುಕ್ಕೇ

ಸಣ್ಣ ಸಣ್ಣ ಗರಟುಗಳಿಂದ ಕೂಡಿದ ನಯವಾದ ಚಿಕ್ಕ ಹಗ್ಗದಿಂದ ಕಟ್ಟಲ್ಪಡುವುದಕ್ಕೆ ವಶನಾಗಿ (ಕಟ್ಟಿಸಿಕೊಂಡ ಪುಟ್ಟ ಕೃಷ್ಣ-ಮುಂದೆ ದುರ್ಯೋಧನ ಕಟ್ಟಲು ಯತ್ನಿಸಿದರೆ ಸಾಧ್ಯ ಆಯಿತೇ? ಭಕ್ತ ಸುಲಭ ನಮ್ಮ ಯಶೋದಾ ಕಂದಾ ತಾಯಿಯ ಪ್ರೀತಿ ವಾತ್ಸಲ್ಯ ಪ್ರೇಮಪೂರಿತ ಭಕ್ತಿಗೆ ಒಳಪಟ್ಟು ಚಿಕ್ಕ ಹಗ್ಗ ದಿಂದಲೇ ತನ್ನನ್ನು ಕಟ್ಟಿಕೊಂಡು ತಾಯಿಗೆ ಸಂತೋಷ ಉಂಟು ಮಾಡಿದ ದಾಮ-ಎಂದರೆ ಹಗ್ಗದಿಂದ ಕಟ್ಟಿಸಿಕೊಂಡು ದಾಮೋದರ ಎಂದೂ ಹೆಸರಾದ.) ಮಹಾಮಾಯಾ ಚೇಷ್ಟಿತ ಶ್ರೀಕೃಷ್ಣನ ದಿವ್ಯ ನಾಮಗಳಿಗಿಂತ ಕರು ಸೂರಿಗೆ ಅಧಿಪನಾದ ನನ್ನ ಗುರು ನಮ್ಮಾಳ್ವಾರ ನಾಮ ಇನ್ನೂ ಪ್ರಿಯವೆನಿಸುತ್ತದೆ ಎಂದರೆ ಹರಿ ಪ್ರೀತಿ ಪಡೆಯುವ ಗುರು ಭಕ್ತಿಯೂ ಅತ್ಯಗತ್ಯ.

ಈ ಪ್ರಬಂಧ ಎಷ್ಟು ಹಾಡಿದರೆ, ಹನ್ನೊಂದು ಪಾಶುರಗಳು ತುಂಬ ಸ್ವಾರಸ್ಯವಾದವು.

ಅನ್ಬನ್ ತನ್ನೈಯಡೈಂದವರ್ ಕಳೆಲ್ಲಾಂ
ಅನ್ಬರ್ ತೆನ್‌ಕುರುಹೂರ್ ನಗರ್ ನಂಬಿಕ್ಕೂ
ಅನ್ಬನಾಯ್ ಮಧುರ ಕವಿಶೋನ್ನಶೋಲ್
ನಂಬುದಾರ್ ಪದಿ ವೈಕುಂದು ಕಾಣ್ಣಿನೇ ॥

(ಹಿನ್ಬು-ಪರಮ ಪ್ರಿಯ) ಪ್ರೀತಿ, ಶೊನ್ನಶೊಲ್ ಹಾಡಿದ ಈ ಸೊಲ್ಲು ಪದ್ಯಗಳು, ಯಾರು ನಂಬಿ ಹಾಕುವರೋ ಅವರಿಗೆ ಶ್ರೀ ವೈಕುಂಠ ಪ್ರಾಪ್ತವಾಗುತ್ತದೆಂಬುದು ದಿಟ)

ಈ ನಯನ ಮನೋಹರ, ಪರಮ ಪ್ರಿಯ ಶ್ರೀಕೃಷ್ಣನನ್ನು ಆಶ್ರಯಿಸಿದವರಿಗೆ ಸದಾ ಒಳ್ಳೆಯದಾಗುವುದಲ್ಲವೇ? ಹಾಗೆಯೇ ವಾತ್ಸಲ್ಯಮಯಿ ನಮ್ಮ ಕರುಹೂರು ನಮ್ಮಾಳ್ವಾರ್ ಮುನಿಗಳಿಗೆ ನಾನು ದಾಸಭೂತನಾಗಿದ್ದೇನೆ. ಈ ಮಧುರ ಕವಿ ಹಾಡಿರುವ ಭಕ್ತಿ ಮಾಲೆಯ ಪಾಶುರಗಳನ್ನು ಭಕ್ತಿಯಿಂದ ಹಾಡುವವರಿಗೆ ಖಂಡಿತ ಪರಮ ಪದವು ಪ್ರಾಪ್ಯ. (ಹಾಗೆಯೇ ಇಲ್ಲಿ - ಈ ಇಹ ಲೋಕದಲ್ಲಿ ಅಭಿಷೇಕಗಳಲ್ಲಿ ನೆರವೇರುತ್ತವೆ ಎಂದು ಅರಿತರೆ ತಪ್ಪಾಗದು)

ಮಧುರಕವಿ ಆಳ್ವಾರರ ಮಧುರವಾಗಿ ಇರುವ ಈ ಪ್ರಬಂಧ ಎಲ್ಲ ಸೇವಾ ಕಾಲದಲ್ಲಿಯೂ ಪಠಿಸುವ ನಿಯಮವಿದೆ. ಅದೇ ಪರಮ ಗೌರವು ಈ ಪ್ರಬಂಧಕ್ಕೆ ಕೃತಿ ಕಿರಿದಾದಲ್ಲಿ ಅರ್ಥ ಹಿರಿದು ಎನ್ನುವುದು ಮನನೀಯಾ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ. ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನ ವನಗಳನ್ನು ಬೆಳೆಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾಮಂಡಪ.

### ಶ್ರೀವೇಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಸಾಲು ಸಾಲು ಜಯಂತಿಗಳ ಮಾಸ – ವೈಶಾಖ

-ಶ್ರೀಮತಿ. ವಾರುಣಿ ಹೊನ್ನಾಳಿ
99160 22982

ಋತುಗಳ ರಾಜ ವಸಂತನ ಎರಡನೇ ಚರಣವೇ ವೈಶಾಖ. ಹೌದು. ಕಟುವಾದ ಬಿಸಿಲಿನ ನಡುವೆಯೇ ಅರಳಿದ ಪರಿಮಳ ಭರಿತ ಹೂವುಗಳು, ಕೂಗುತ್ತಿರುವ ಕೋಗಿಲೆ, ಕಾಜಾಣಗಳು, ಸಮೃದ್ಧ ಹಾಲು ನೀಡುತ್ತಿರುವ ಕಾಮಧೇನುಗಳು, ಶುಭ್ರ ಮುಂಜಾನೆ, ಸುದೀರ್ಘ ಹಗಲು, ಪ್ರಖರ ದಿನ ಕರನ ತಾಪದ ನಡುವೆಯೂ ಒಂದು ಮಧುರಾನುಭೂತಿ, ಸಂಜೆಯ ಗೋಧೂಳಿ ಓಕುಳಿ ರಂಗಿನ ನಡುವೆ ದುಂಬಿಗಳ ಝೇಂಕಾರ, ಆಗೊಮ್ಮೆ ಈಗೊಮ್ಮೆ ಗುಡುಗು-ಸಿಡಿಲಿನ ಆರ್ಭಟದ ನಡುವೆ ವರುಣನ ಸಿಂಚನ- ಅದಕ್ಕೆ ಇರಬೇಕು-ಶಾಸ್ತ್ರವು ವೈಶಾಖ ಮಾಸಕ್ಕೆ ವಿಶೇಷ ಮಹತ್ವ, ಮನ್ನಣೆಗಳನ್ನು ನೀಡಿದೆ. ಇದು ಸತ್ಯ.

ಪುರಾಣಗಳ ಪ್ರಕಾರ ತ್ರೇತಾಯುಗವು ವೈಶಾಖ ಮಾಸದಲ್ಲೇ ಪ್ರಾರಂಭವಾಗಿದೆ. ರಘುವಂಶದ ಕೀರ್ತಿಯನ್ನು ಮೂರು ಲೋಕಕ್ಕೂ ಬೆಳಗಿದ ಮತ್ತು ಮರ್ಯಾದಾ ಪುರುಷೋತ್ತಮ ಶ್ರೀರಾಮನ ಅವತಾರಕ್ಕೆ ಹೆಬ್ಬಾಗಿಲು ತೆಗೆದ ಯುಗಾರಂಭ ಎಂದ ಮೇಲೆ ಈ ಮಾಸಕ್ಕೆ ತನ್ನದೇ ಆದ ವಿಶೇಷತೆ ಇರಲೇಬೇಕು. ಇಷ್ಟು ಮಾತ್ರವಲ್ಲ ವಿಷ್ಣುವು ಕೂರ್ಮ, ನರ-ನಾರಾಯಣ (ವೇದವ್ಯಾಸ) ನರಸಿಂಹ ಮತ್ತು ಪರಶುರಾಮ ಅವತಾರಗಳನ್ನು ತಾಳಿದ ಆ ಮೂಲಕ ಲೋಕದಲ್ಲಿ ದುಷ್ಟ ಸಂಹಾರವನ್ನು ಮಾಡಿದ ಪವಿತ್ರ ತಿಂಗಳೂ ವೈಶಾಖವೇ ಆಗಿದೆ.

**ಮಾಸಾನಾಂ ಧರ್ಮಹೇತೂನಾಂ**
**ವೈಶಾಖಶ್ಚೋತ್ತಮ ಸ್ತಥಾ।**
**ನಾನೇನ ಸದೃಶೋ ಲೋಕೇ**
**ವಿಷ್ಣುಪ್ರೀತಿ ವಿಧಾಯಕಃ ॥**

ವೈಶಾಖಮಾಸವು ಎಲ್ಲಾ ಮಾಸಗಳಲ್ಲಿ ಸರ್ವಶ್ರೇಷ್ಠವಾಗಿದೆ ಎಂದು ಧ್ವನಿಸುತ್ತದೆ ಈ ಶ್ಲೋಕ. ಧರ್ಮಕಾರ್ಯಗಳನ್ನು ವಿಧಿವತ್ತಾಗಿ ಮಾಡಲು ಉಳಿದೆಲ್ಲ ಮಾಸಗಳಿಗಿಂತ ಹಿತಕರವಾಗಿದೆ ಇದು. ಭಗವಾನ್ ಶ್ರೀ ವಿಷ್ಣುವಿನ ಪ್ರೀತಿಯನ್ನು ಸಂಪಾದಿಸಲು ಈ ಮಾಸಕ್ಕೆ ಸಮಾನವಾದ ತಿಂಗಳು ಬೇರೆ ಯಾವುದೂ ಇಲ್ಲ ಎಂಬುದು ಶ್ಲೋಕದ ತಾತ್ಪರ್ಯ. ಹಿಂದೂ ಪಂಚಾಂಗದಲ್ಲಿ ಸಂವತ್ಸರದಲ್ಲಿ 2 ನೇ ಮಾಸವಿದು. ಹುಣ್ಣಿಮೆ ದಿನ ವಿಶಾಖ ನಕ್ಷತ್ರ ಇರುವ ತಿಂಗಳಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ ಎಂಬುದು ಸರ್ವವಿದಿತ.

ಧರ್ಮ ಶಾಸ್ತ್ರದಲ್ಲಿ ಜಪ ತಪಸ್ಸು, ದಾನ ಮತ್ತು ಸಂಪ್ರದಾಯ ಸೇರಿದಂತೆ ಪುಣ್ಯ ಸಂಪಾದನೆ ಕೆಲಸಗಳನ್ನು ಮಾಡಲು ಇದು ಅತ್ಯಂತ ಪ್ರಶಸ್ತ ಮಾಸವೆಂದೇ ಪರಿಗಣಿತವಾಗಿದೆ. ವೈಶಾಖ ಮಾಸದಲ್ಲಿ ನಾವು ಮಾಡುವ ಜಪ, ತಪ, ದಾನ, ಧರ್ಮ, ಸತ್ಕರ್ಮಗಳು ನಮಗೆ ನಿರಂತರವಾಗಿ ಅಕ್ಷಯ ಪುಣ್ಯವನ್ನು ಒದಗಿಸುತ್ತದೆ. ಹಾಗಾಗಿ ಈ ಮಾಸದಲ್ಲಿ ಅಕ್ಷಯ ತೃತೀಯ ಆಚರಣೆಯೂ ಅನ್ವರ್ಥವಾಗಿದೆ ಎನ್ನಬಹುದು.

### ಸ್ಕಂದ ಪುರಾಣದ ವ್ಯಾಖ್ಯಾನ

ವೈಶಾಖಮಾಸಕ್ಕೆ ಮಧುಸೂದನರೂಪಿ ಪರಮಾತ್ಮನೇ ನಿಯಾಮಕ. ಹಾಗಾಗಿ ಸ್ಕಂದ ಪುರಾಣವೂ ಈ ಮಾಸವನ್ನು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದೆ.

**ನ ಮಾಧವಸಮೋ ಮಾಸೋ**
**ನ ಕೃತೇನ್ ಯುಗಂ ಸಮಂ**
**ನ ಚ ವೇದಸಮಂ ಶಾಸ್ತ್ರಂ**
**ನ ತೀರ್ಥಂ ಗಂಗಾಯಾ ಸಮಂ...**

ಜ್ಞಾನದಲ್ಲಿ ವೇದಗಳು, ಯುಗಗಳಲ್ಲಿ ಕೃತಯುಗ, ಮಂತ್ರಗಳಲ್ಲಿ ಪ್ರಣವ, ವೃಕ್ಷಗಳಲ್ಲಿ ಕಲ್ಪ, ಗೋವುಗಳಲ್ಲಿ ಕಾಮಧೇನು, ದೇವತೆಗಳಲ್ಲಿ ಶ್ರೀಹರಿ, ನದಿಗಳಲ್ಲಿ ಗಂಗಾನದಿ-ಇಷ್ಟು ಮಾತ್ರವಲ್ಲ ಆಯುಧಗಳಲ್ಲಿ ಚಕ್ರ, ಲೋಹಗಳಲ್ಲಿ ಚಿನ್ನ ಮತ್ತು ರತ್ನಗಳಲ್ಲಿ ಕೌಸ್ತುಭಮಣಿ ಹೇಗೆ ಶ್ರೇಷ್ಠವೋ ಹಾಗೆಯೇ ವರ್ಷದ ಸಕಲ ಮಾಸಗಳಲ್ಲಿ ವೈಶಾಖವು ಅತ್ಯಂತ ಶ್ರೇಷ್ಠ ಎಂದು ಹೇಳಿದೆ.

### ಹಬ್ಬಗಳ ಸಾಲು, ಜಯಂತಿಗಳ ಸಂಭ್ರಮ

ಚಂದ್ರನು ಹುಣ್ಣಿಮೆ ದಿನ ವಿಶಾಖ ನಕ್ಷತ್ರಕ್ಕೆ ಬರುವ ಮಾಸವನ್ನು ವೈಶಾಖ ಎಂದರು ಪಂಚಾಂಗ ಕರ್ತೃಗಳು. ಈ ಮಾಸಕ್ಕೆ ಮಾಧವ ಮಾಸ ಎಂಬ ಹೆಸರೂ ಇದೆ. ಇದು ಶ್ರೀಹರಿಗೆ ಅತ್ಯಂತ ಪ್ರೀತಿಪಾತ್ರವಾದ ಕಾಲಘಟ್ಟ. ಏಕೆಂದರೆ ಇದು ಹಬ್ಬಗಳ ಸಾಲು, ಅವತಾರಗಳ ಸಂಭ್ರಮ, ಜಯಂತಿಗಳ ಮಹಾ ಮೆರವಣಿಗೆ. ವೈಶಾಖ ಶುಕ್ಲ ಪಕ್ಷದ ತದಿಗೆಯು ಅಕ್ಷಯ ತದಿಗೆ. ಆ ದಿನ ಚಿನ್ನ, ಬೆಳ್ಳಿ ಹಾಗೂ ಧನ ಧಾನ್ಯಗಳನ್ನು ಸಮೃದ್ಧವಾಗಿ ದಾನ ಮಾಡಿದರೆ ಅನಂತ ಫಲ ದೊರಕುತ್ತದೆ. (ಚಿನ್ನ ಖರೀದಿ ಮಾಡುವುದೇ ಹಬ್ಬದ ಆಚರಣೆ ಅಲ್ಲ) ಅದೇ ದಿನ ಹಿಮಾಲಯದ ಗಂಗೋತ್ರಿ, ಬದರಿ, ಕೇದಾರ ಹಾಗೂ ಯಮುನೋತ್ರಿಗಳ ದೇವಾಲಯದ ಮಹಾದ್ವಾರವು ತೆರೆಯುತ್ತದೆ. ಅಂದಿ

ನಿಂದ ಆರು ತಿಂಗಳ ಕಾಲ "ಚಾರ್‌ಧಾಮ್‌ಯಾತ್ರಾ" ದರ್ಶನದ ಭಾಗ್ಯ ದೊರಕುತ್ತದೆ. ಇದು ಸಮಸ್ತ ಭರತಖಂಡದ ಜನರಿಗೆ ಅತ್ಯಂತ ಪವಿತ್ರ, ಪಾವನ ಮತ್ತು ಸಾಹಸಮಯ ತೀರ್ಥಯಾತ್ರೆಯಾಗಿದೆ. ಬಹುತೇಕ ಜೀವನದಲ್ಲಿ ಒಂದು ಬಾರಿ ಮಾತ್ರ ಸಾಧ್ಯವಾಗುವ ಯಾನವಿದು. ಚೌತಿ ದಿನ ವಿಶಿಷ್ಟಾದ್ವೈತ ಮತ ಸ್ಥಾಪಕ ಶ್ರೀರಾಮಾನುಜರ ಜಯಂತಿ. ಪಂಚಮಿಯಂದು ಅದ್ವೈತ ಮತ ಸಿದ್ಧಾಂತಿ ಶ್ರೀಶಂಕರರ ಜಯಂತಿ. ಈ ದಿನವನ್ನು ತತ್ವ ಜ್ಞಾನಿಗಳ ದಿನ ಎಂದು ದೇಶದಾದ್ಯಂತ ಆಚರಣೆ ಮಾಡುವ ಮೂಲಕ ಅವತಾರಿಗಳಿಗೆ ಗೌರವ ಸೂಚಿಸಲಾಗುತ್ತದೆ. ಶುಕ್ಲ ತ್ರಯೋದಶಿಯು ನರಸಿಂಹ ಅವತಾರವಾದ ಪುಣ್ಯ ದಿನ. ನೃಸಿಂಹ ಜಯಂತಿ. ರಾಷ್ಟ್ರದ ತುಂಬೆಲ್ಲ ಇರುವ ಶ್ರೀನರಸಿಂಹ ಕ್ಷೇತ್ರಗಳಲ್ಲಿ ಅಂದು ವಿಶೇಷ ಪೂಜೆ ಪುನಸ್ಕಾರಗಳು ವಿಜೃಂಭಣೆಯಿಂದಲೇ ಸಂಪನ್ನಗೊಳ್ಳುತ್ತವೆ.

ಬಹು ಮಹತ್ವ ಎಂದರೆ ತಿರುಪತಿ ತಿಮ್ಮಪ್ಪನಿಗೂ ಮನೆ ದೇವರು ನರಸಿಂಹ! ಅವನ ಸನ್ನಿಧಿಯಲ್ಲೂ ನರಸಿಂಹನ ನೆಲೆ ಇದೆ ಎಂಬುದನ್ನು ಭಕ್ತ ಕೋಟಿಗಳು ಗಮನಿಸಿಯೇ ಇರುತ್ತಾರೆ. ಸಪ್ತಮಿಯಂದು ಇನ್ನೊಂದು ವಿಶೇಷ ದಿನ. ಅಂದು ಲೋಕಮಾತೆಯಾದ ಗಂಗಾ ದೇವಿ ಅವತರಿಸಿ ಭೂಲೋಕದ ಜೀವಿಗಳಿಗೆ ವರದಾನವಾದ ದಿನ. ಗಂಗಾಜಯಂತಿ ಆಚರಣೆ ಎಲ್ಲ ಕ್ಷೇತ್ರಗಳಲ್ಲೂ ನಡೆಯುತ್ತದೆ. ಪ್ರತಿಯೊಂದು ನೀರಿನ ಹನಿಯೂ ಗಂಗೆ ಎಂಬ ಪರಮೋಚ್ಛ ಭಾವ ಭಾರತೀಯರಲ್ಲಿ ಇದೆ. ಅಂದು ಮಾಡುವ ಗಂಗಾ ಸ್ನಾನ ವಿಶೇಷ ಫಲದಾಯಕ.

ಪರಶುರಾಮರು ಜನಿಸಿದ್ದೂ ವೈಶಾಖದಲ್ಲೇ. ವೈಶಾಖದ ಕೃಷ್ಣ ಪಕ್ಷದ ವರುತಿನಿ ಏಕಾದಶಿ ಶುಕ್ಲ ಪಕ್ಷದ ಮೋಹಿನಿ ಏಕಾದಶಿ ಉಪವಾಸಗಳು ಫಲದಾಯಕವಾಗಿದೆ. ಒಂದೊಂದು ಸಮುದಾಯವೂ ವೈಶಾಖದಲ್ಲಿ ತಮ್ಮದೇ ಆದ ಆಚರಣೆಗಳನ್ನು ವ್ರತಗಳನ್ನು ಹೊಂದಿದೆ ಎಂಬುದು ಇನ್ನೊಂದು ಗಮನೀಯ ಸಂಗತಿಯಾಗಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಸಿದ್ಧಾಂತವನ್ನು ಅನುಸರಿಸುವವರಿಗಂತೂ ಈ ಮಾಸವು ಒಂದು ಮಹೋತ್ಸವವೇ ಆಗಿದೆ. ಒಟ್ಟಾರೆ ವೈಶಾಖ ಮಾಸ ಪ್ರಾಚೀನ ಸಂಸ್ಕೃತಿ ಸಂಪ್ರದಾಯ ಮತ್ತು ಅನುಷ್ಠಾನಗಳ ಆಧಾರವೇ ಆಗಿದೆ ಎನ್ನಬಹುದು.

### ನಾರದರು ಹೇಳಿದ ವೈಶಾಖ ಪುಣ್ಯ ಸ್ನಾನ ಮಹತ್ವ

ವೈಶಾಖ ಸ್ನಾನವು ಮೋಕ್ಷಕ್ಕೆ ಮಹಾಮಾರ್ಗ ತೋರುತ್ತದೆ. ಹಾಗಾಗಿ ಈ ಮಾಸದಲ್ಲಿ ಮುಂಜಾನೆ ಎದ್ದು ಮಾಡುವ ಸ್ನಾನಕ್ಕೆ ಬಹಳ ಮಹತ್ವ ಇದೆ.

**ವೈಶಾಖ ಸ್ನಾನ ಮಾತ್ರೇಣ**
**ನ ಪುನಃ ಜಾಯತಿ ಭುವಿ**

ಅಂದರೆ ವೈಶಾಖ ಸ್ನಾನ ಮಾತ್ರದಿಂದ ಈ ಭೂಮಿ ಮೇಲೆ ಮತ್ತೆ ಜನ್ಮ ಬರುವುದಿಲ್ಲ. ಸಾಕ್ಷಾತ್ ಗಂಗೆಯೇ ಗಂಗಾವತರಣವಾದ ಈ ಮಾಸದಲ್ಲಿ ಗಂಗಾ, ಯಮುನಾ, ಕಾವೇರಿ, ನರ್ಮದಾ , ಕೃಷ್ಣಾ ನದಿಗಳಲ್ಲಿ ಸ್ನಾನ ಮಾಡುವುದು ಅತ್ಯಂತ ಶ್ರೇಷ್ಠ ಎಂದು ಪುರಾಣಗಳು ಹೇಳಿವೆ. ಒಂದು ಪಕ್ಷ ಈ ನದಿಗಳಿಗೆ ಹೋಗಲು ಆಗದಿದ್ದರೆ ಸಮೀಪದ ಇರುವ ನದಿ, ಸರೋವರ, ಕೆರೆ ಮತ್ತು ಬಾವಿಗಳಲ್ಲೇ,

**ಮಧುಸೂದನ ದೇವೇಶ**
**ವೈಶಾಖೇ ಮೇಷಗೇ ರವೈ।**
**ಪ್ರಾತಃ ಸ್ನಾನಮ್ ಕರಿಷ್ಯಾಮಿ**
**ನಿರ್ವಿಘ್ನಮ್ ಕುರು ಮಾಧವ॥**

ಎಂದು ಹೇಳಿಕೊಂಡು ಸ್ನಾನ ಮಾಡಬೇಕು. ಹೇ ಮಧುಸೂದನಾ, ನಾನೀಗ ವೈಶಾಖ ಪುಣ್ಯ ಸ್ನಾನ ಮಾಡಲು ನದಿ ತೀರದಲ್ಲಿ ಇರುವ ಭಾಗ್ಯ ದೊರಕಿದೆ. ಬ್ರಾಹ್ಮೀ ಮುಹೂರ್ತದ ಈ ದಿನಗಳಲ್ಲಿ ಸೂರ್ಯನು ಮೇಷ ರಾಶಿಯಲ್ಲಿರುತ್ತಾನೆ.

ಯಾವುದೇ ವಿಘ್ನಗಳು ನನಗೆ ಕಾಡದೇ ಕೈಗೊಂಡ ಕಾರ್ಯ ಪೂರ್ಣಗೊಳ್ಳುವಂತೆ ಹರಸು. ಸ್ನಾನಾ ನಂತರ ಕೊಡುವ ಅರ್ಘ್ಯವನ್ನು ಸೂರ್ಯ ನಾರಾಯಣ ದೇವರು ಸ್ವೀಕಾರ ಮಾಡಲಿ. ಎಂದಿಗೂ ಜಲಕ್ಷಾಮ ಬಾರದಂತೆ ಅನುಗ್ರಹಿಸು ಎಂದು ಪ್ರಾರ್ಥಿಸಬೇಕು. (ಇಲ್ಲಿ ಕೇವಲ ಇಂದಿನ ಹಿತ ಮತ್ತು ಪುಣ್ಯ ಸಂಪಾದನೆ ಮಾತ್ರವಲ್ಲ, ಮುಂಬರುವ ಪೀಳಿಗೆಗೂ ಜಲ ಸಂಪತ್ತು ಸಮೃದ್ಧವಾಗಿರಲಿ ಎಂಬ ಕಾಳಜಿ ಇದೆ. ಜಲ ಸಂರಕ್ಷಣೆ ಬಗ್ಗೆ ಧರ್ಮ, ಶಾಸ್ತ್ರಗಳೂ ಕಳಕಳಿ ತೋರಿಸಿವೆ) ಈ ಸಂದೇಶವನ್ನು ನಾರದರು ರಾಜಾ ಅಂಬರೀಷ ಚಕ್ರವರ್ತಿಗೆ ಹೇಳಿದ್ದರು. ತ್ರಿಲೋಕ ಸಂಚಾರಿಗಳಾದ ಹರಿಯ ಸುವಾರ್ತೆಗಳ ವಾಹಕರಾದ ಅವರೇ ಹೇಳಿದ ಮೇಲೆ ಇದು ಲೋಕಕ್ಕೆ ನೀಡಿದ ಸಂದೇಶವಾಗಿದೆ.

ವೈಶಾಖಮಾಸದಲ್ಲಿ ತೀರ್ಥಾದಿ ದೇವತೆಗಳೆಲ್ಲರೂ ನದಿ, ಕೊಳ್ಳ, ಕೆರೆ, ಜಲಾಶಯ ಮತ್ತು ಸಮುದ್ರಗಳ ಜಲವನ್ನು ಆಶ್ರಯಿಸಿಕೊಂಡು ಅಲ್ಲೇ ಸನ್ನಿಹಿತರಾಗಿರುತ್ತಾರಂತೆ. ಸೂರ್ಯೋದಯದಿಂದ ಹಿಡಿದು ಆರು ಘಳಿಗೆ ( 2 ವರೆ ಗಂಟೆ , ಕಾಲ) ಈ ತೀರ್ಥಾದಿ ದೇವತೆಗಳು ಶ್ರೀ ವಿಷ್ಣುವಿನ ಆಜ್ಞಾನುಸಾರ ಮಾನವ ಕೋಟಿಗೆ ಮಂಗಳ ಉಂಟು ಮಾಡುವಲ್ಲಿ ಸಕ್ರಿಯರಾಗಿರುತ್ತಾರಂತೆ ಹಾಗಾಗಿ,

**ವೈಶಾಖಂ ಸಕಲಂ ಮಾಸಂ ಮೇಷ ಸಂಕ್ರಮಣೇ ರವೇಃ।**
**ಪ್ರಾತಃ ಸನಿಯಮಃ ಸ್ನಾಸ್ಯೇ ಪ್ರೀಯತಾಂ ಮಧುಸೂದನಃ॥**

ಎಂದು ಪಠಿಸುತ್ತಾ ಮಾಡುವ ವೈಶಾಖ ಪ್ರಾತಃಸ್ನಾನದ ಮಹತ್ವ ದೊಡ್ಡದಾಗಿದೆ ಎಂದು ನಾರದರು ವೈಶಾಖಮಾಸ ಮಹಾತ್ಮೆಯಲ್ಲಿ ಹೇಳಿದ್ದಾರೆ. ವೈಶಾಖಮಾಸದಲ್ಲಿ ಪ್ರಾತಃಸ್ನಾನ ಮಾಡಲು ನಿರ್ಧರಿಸಿ ನದಿಗಳ ಕಡೆಗೆ ನಾವು ಇಡುವ ಒಂದೊಂದು ಹೆಜ್ಜೆಗೂ ಹತ್ತು ಸಹಸ್ರ ಅಶ್ವಮೇಧಯಾಗ ಮಾಡಿದ ಫಲ, ಸ್ನಾನದ ಸಂಕಲ್ಪ ಮಾಡಿದರೆ 100 ಯಜ್ಞ ಮಾಡಿದ ಫಲ ದೊರಕುತ್ತದೆ ಎಂಬುದು ಮಾಸದ ಇನ್ನೊಂದು ಮಹಿಮೆ. ಶ್ರೀ ವಿಷ್ಣುವಿನ

ಪ್ರೀತಿಯನ್ನು ಸಂಪಾದಿಸಲು ಲೋಕದಲ್ಲಿ ಈ ಮಾಸಕ್ಕೆ ಸದೃಶವಾದ ತಿಂಗಳು ಬೇರೊಂದು ಇಲ್ಲ.

### ಜಲ ದಾನದ ಮಹತ್ವ

ವೈಶಾಖ ಮಾಸದಲ್ಲಿ ಶಾಖ ಉತ್ತುಂಗದಲ್ಲಿರುತ್ತದೆ. ಈ ಸಂದರ್ಭ ಬಾಯಾರಿ ಮನೆಗೆ ಬಂದವರಿಗೆ ಮೊದಲು ತಂಪನೆಯ ನೀರು, ಬೆಲ್ಲ ಕೊಟ್ಟು ಉಪಚರಿಸುವುದು ಶ್ರೇಷ್ಠಕರ್ಮವಾಗಿದೆ. ನೀರು ಮಜ್ಜಿಗೆ, ಬೇಲದ ಹಣ್ಣಿನ, ನಿಂಬೆ ಹಣ್ಣಿನ ಪಾನಕ, ಎಳನೀರು, ವಿವಿಧ ಫಲಗಳ ಶರಬತ್ತು, ದಣಿವಾರಿಸುವ ತಂಪು ಪಾನೀಯಗಳನ್ನೂ ನೀಡಬಹುದು. ಇದರಿಂದ ಜೀವನದ ಸದಾ ಕಾಲ ಸಂತೋಷ ಸಿಗುತ್ತದೆ ಎಂದು ನಂಬಲಾಗಿದೆ.

ಗಂಧಮಾಲ್ಯಾನಿ ಚ ತಥಾ
ವೈಶಾಖೇ ಸುರಭೀಣಿ ಚ

ಎಂದರೆ ದೇವರುಗಳ ಮೂರ್ತಿಗೆ, ಸಾಲಗ್ರಾಮಗಳಿಗೆ, ವೃಂದಾವನಗಳಿಗೆ ಗಂಧಲೇಪನ ಮಾಡಿ ನಂತರ ಅದನ್ನು ಸಾತ್ವಿಕರಿಗೆ ಗುರುಗಳಿಗೆ, ವ್ರತಾನುಷ್ಠಾನ ಮಾಡುವವರಿಗೆ ಹಚ್ಚಿಕೊಳ್ಳಲು ಉದಾರವಾಗಿ ಕೊಡಬೇಕು. ದಾರಿಹೋಕರಿಗೆ ನೀರು ನೀಡಲು ಶುದ್ಧ ನೀರಿನ ಅರವಟ್ಟಿಗೆ ವ್ಯವಸ್ಥೆ ಮಾಡಬೇಕು.

ಹಣ್ಣುಗಳ ರಾಜ ಮಾವು ಈ ಮಾಸದಲ್ಲಿ ಸಮೃದ್ಧವಾಗಿ ದೊರಕುತ್ತದೆ. ರಸಭರಿತ ಹಣ್ಣುಗಳನ್ನು ದಾನ ಮಾಡುವುದು ಶುಭಕರ. ಗಿಡಮರ, ಪ್ರಾಣಿ, ಪಕ್ಷಿಗಳಿಗೂ ನೀರು ಮತ್ತು ಆಹಾರ ವ್ಯವಸ್ಥೆ ಮಾಡಬೇಕು. ಹಿಂದಿನ ಕಾಲದವರು ಬಿಸಿಲಿನಲ್ಲಿ ನಡೆಯುವವರಿಗೆ ನೆರವಾಗಲಿ ಎಂದು ಛತ್ರಿ, ಚಪ್ಪಲಿ, ಬೀಸಣಿಕೆ ದಾನ ಕೊಡುತ್ತಿದ್ದರು. ಇದರಿಂದ ಅಪಮೃತ್ಯು ಪರಿಹಾರ ಎಂಬ ನಂಬಿಕೆ ದೃಢವಾಗಿದೆ. ಉತ್ತಮ ಗುಣಮಟ್ಟದ ಶುದ್ಧ ಹತ್ತಿಯ ಬಟ್ಟೆಗಳನ್ನು ದಾನ ಮಾಡಬೇಕು. ಈ ಆಚರಣೆಯಲ್ಲಿ ಶ್ರದ್ಧೆ, ಭಕ್ತಿ ಇರಬೇಕಾದದ್ದು ಬಹಳ ಅವಶ್ಯಕ. ಒಟ್ಟಾರೆ ವೈಶಾಖ ಮಾಸದಲ್ಲಿ ಮಾಡುವ ದಾನವು ವರ್ಷ ವಿಡೀ ಮಾಡಿದ ದಾನಕ್ಕೆ ಸಮನಾಗಿದೆ ಎಂದು ಶಾಸ್ತ್ರಗಳು ಹೇಳಿವೆ.

### ಆಹಾರ ಕ್ರಮ ಹೀಗಿದೆ

ವೈಶಾಖ ಮಾಸಕ್ಕೆ ತನ್ನದೇ ಆದ ಆಹಾರ ಕ್ರಮವಿದೆ. ಈ ಮಾಸದಲ್ಲಿ ಗಟ್ಟಿ ಪದಾರ್ಥಗಳು ಊಟಕ್ಕಿಂತಲೂ ದ್ರವಹಾರಗಳೇ ಹೆಚ್ಚು ಜೀರ್ಣಕಾರಿ. ಕರಿದ ಮತ್ತು ಮಸಾಲೆಯುಕ್ತ ಆಹಾರಗಳಿಂದ ದೂರ ಇರುವುದು ಕ್ಷೇಮ. ನಿತ್ಯ ಸ್ನಾನಾದಿಗಳ ನಂತರ ತುಳಸಿ ಮತ್ತು ಕಿಚಡಿ, ಎಳ್ಳಿನ ಪಂಚಕಜ್ಜಾಯ ಅಥವಾ ಎಳ್ಳು ಬೆರೆಸಿದ ಸಿಹಿ ತಿಂಡಿಗಳನ್ನು ದೇವರಿಗೆ ನೈವೇದ್ಯ ಮಾಡಿ ಬಳಿಕ ಪ್ರಸಾದವಾಗಿ ಸೇವನೆ ಮಾಡಬೇಕು.

ಈ ಮಾಸದಲ್ಲಿ ಹೇಗಾದರೂ ಎಳ್ಳಿನ ಉಪಯೋಗ ಮಾಡಬೇಕು ಇದು ಆರೋಗ್ಯವನ್ನು ಸ್ಥಿರವಾಗಿ ಇಡುತ್ತದೆ. ಮುಂಜಾನೆಯ ತಣ್ಣೀರು ಸ್ನಾನವನ್ನು ಆಯುರ್ವೇದವೂ ಪುಷ್ಟೀಕರಿಸುತ್ತದೆ. ಒಂದು ಹೊತ್ತು ಭೋಜನ, ಇನ್ನೊಂದು ಹೊತ್ತು ಹಣ್ಣು, ಪಾನೀಯ ಸೇವನೆ ಮಾಡಿ ಚಾಪೆಯ ಮೇಲೆ ಮಲಗುವುದು ಬಹಳ ವಿಹಿತ. ವರ್ಷಪೂರ್ಣ ಕುರುಕರು ತಿನಿಸುಗಳಿಗೆ ಬೇಕಾಗುವ ಹಪ್ಪಳ-ಸಂಡಿಗೆ ಬಾಳಕ, ಶ್ಯಾವಿಗೆ, ಮಾವಿನ ಬತ್ತಲು ಇತ್ಯಾದಿ ಮಾಡಲು ವೈಶಾಖದ ಬಿಸಿಲು ಪೂರಕವಾಗಿದೆ.

ವೈಶಾಖ ಮಾಸದಲ್ಲಿ ಬರುವ ಅಕ್ಷಯ ತೃತೀಯವು ಶುಭ ದಿನವಾಗಿದೆ. ಈ ದಿನ ಪಂಚಾಂಗದಲ್ಲಿ ಮುಹೂರ್ತವನ್ನೇ ನೋಡುವ ಅಗತ್ಯವಿಲ್ಲ. ಇಡೀ ದಿನ ಶುಭ ಕಾರ್ಯಗಳನ್ನು ಮಾಡುವುದು ಹೊಸ ಕೆಲಸವನ್ನು ಪ್ರಾರಂಭಿಸುವುದು ಚಿನ್ನ, ಬೆಳ್ಳಿ, ವಾಹನ, ಭೂಮಿ ಮುಂತಾದ ವಸ್ತುಗಳನ್ನು ಖರೀದಿಸುವುದರಿಂದ ಲಕ್ಷ್ಮೀ ದೇವಿಯ ಕೃಪಾಕಟಾಕ್ಷ ವರ್ಷ ಪೂರ್ತಿ ಲಭಿಸುತ್ತದೆ ಎಂಬುದು ಭಾರತೀಯರ ನಂಬಿಕೆ.

### ಮಹಾವಿಷ್ಣುವನ್ನು ಅಖಂಡವಾಗಿ ಪೂಜಿಸಿ

ವೈಶಾಖ ಮಾಸದಲ್ಲಿ ಮಹಾವಿಷ್ಣುವಿನ ಪೂಜೆ ಮಾಡಬೇಕು ಎಂದಿವೆ ಪುರಾಣಗಳು. ಇದಕ್ಕೆ ಕಾರಣ ಮತ್ತು ನಿದರ್ಶನಗಳೂ ಖಚಿತವಾಗಿಯೇ ಇವೆ. ಧಾರ್ಮಿಕ ನಂಬಿಕೆಯ ಪ್ರಕಾರ ಈ ತಿಂಗಳಲ್ಲಿ ವಿಷ್ಣು ನರ-ನಾರಾಯಣ, ನರಸಿಂಹ ಮತ್ತು ಪರಶುರಾಮರಂತಹ ಅನೇಕ ಅವತಾರಗಳನ್ನು ತೆಗೆದುಕೊಂಡನು.

ಇದರೊಂದಿಗೆ ವೈಶಾಖ ಮಾಸದಲ್ಲಿ ವಿಷ್ಣುವಿನ ಜೊತೆಗೆ ಅವನದ್ದೇ ರೂಪಗಳಾದ ಕೃಷ್ಣ, ಪರಶುರಾಮ ಮತ್ತು ತಾಯಿ ಸೀತೆಯನ್ನು ಪೂಜಿಸುವುದರಿಂದ ಶುಭ ಫಲ ಪ್ರಾಪ್ತವಾಗುತ್ತದೆ ಮತ್ತು ಯಶಸ್ಸು ಸಿಗುತ್ತದೆ ಎನ್ನುವ ನಂಬಿಕೆಯಿದೆ. ಈ ಸಮಯದಲ್ಲಿ ವಿಷ್ಣುವಿನ ಮಾಧವ ರೂಪವನ್ನು ತುಳಸಿ ಎಲೆಗಳಿಂದ ಪೂಜಿಸಲಾಗುತ್ತದೆ. ವಿಷ್ಣುವಿಗೆ ಪಂಚಾಮೃತವನ್ನು ಅರ್ಪಿಸಿ ಮತ್ತು ಆ ಪಂಚಾಮೃತದಲ್ಲಿ ತುಳಸಿ ಎಲೆಗಳನ್ನು ಹಾಕಬೇಕು. ದೇವರಿಗೆ ಪರಿಮಳಭರಿತವಾದ ಹೂವುಗಳನ್ನೇ ಅರ್ಪಿಸಬೇಕು.

ಈ ಮಾಸದಲ್ಲಿ "ಓಂ ಮಾಧವಾಯ ನಮಃ" ಮಂತ್ರವನ್ನು ದಿನಕ್ಕೆ ಕನಿಷ್ಠ 11 ಬಾರಿ ಪಠಿಸಿದರೆ ಅನಂತ ಫಲ. ವಿಷ್ಣುವಿನ ಸಹಸ್ರ ನಾಮಗಳಾದ ಕೇಶವ, ನಾರಾಯಣ, ಶ್ರೀಹರಿ, ಗೋವಿಂದ, ತ್ರಿವಿಕ್ರಮ, ಪದ್ಮನಾಭ, ಮಧುಸೂದನ, ಅಚ್ಯುತ, ಅನಂತ ಮತ್ತು ಹೃಷಿಕೇಶ ಎಂಬಿತ್ಯಾದಿ ನಾಮಗಳನ್ನು (ವಿಷ್ಣು ಸಹಸ್ರನಾಮ)ಪಠಿಸಿದರೆ ಅನಂತ ಪುಣ್ಯ. ವಿಷ್ಣು ಸಾಯುಜ್ಯ ಸುಲಭ ಎಂದಿದ್ದಾರೆ ಋಷಿ ಮುನಿಗಳು, ವೈಶಾಖ ಮಾಸದಲ್ಲಿ ಅಮಾವಾಸ್ಯೆ ಮತ್ತು ಪೂರ್ಣಿಮೆ ದಿನ ಪೂರ್ವಜರಿಗೆ ತರ್ಪಣ ಮತ್ತು ಪಿಂಡದಾನ ಮಾಡಬೇಕು. ಇದರ ಮಹತ್ವವನ್ನು ವೈಶಾಖಮಾಸದ ಚರಿತೆಯಲ್ಲಿ ಸೋದಾಹರಣವಾಗಿ ವಿವರಿಸಲಾಗಿದೆ.

ಶನಿ ದೋಷ ಮತ್ತು ಕಾಳ ಸರ್ಪ ದೋಷವನ್ನು ಕಳೆದುಕೊಳ್ಳಲೂ ಈ ಮಾಸವು ಸೂಕ್ತವಾಗಿದೆ ಎಂದು ಜ್ಯೋತಿಷ್ಯ ಶಾಸ್ತ್ರ ಹೇಳುತ್ತದೆ. ಧರ್ಮ ಸಾಧನೆ ಮಾಡಬೇಕೆನ್ನುವವರಿಗೆ ವೈಶಾಖಮಾಸದ ಒಂದೊಂದು ದಿನವೂ ಮಹತ್ತರವಾದ ಮೈಲಿಗಲ್ಲುಗಳೇ ಆಗಿವೆ ಎಂದು ಹೇಳಿದೆ ಸ್ಕಂದಪುರಾಣ.

**ಖಗೋಳ - ಭೂಗೋಳದ ವಿಸ್ಮಯಗಳು**

ವಸಂತ ಮಾಸವು ಹಲವು ಮಹತ್ತರ ಬದಲಾವಣೆಗಳು ಸಮಯ. ಧಾರ್ಮಿಕ, ಸಂಪ್ರದಾಯ ಆಚರಣೆಗಳ ಆಗರ ಒಂದೆಡೆಯಾದರೆ ಇದರೊಂದಿಗೆ ಅವಿನಾ ಸಂಬಂಧ ಹೊಂದಿರುವ ನೈಸರ್ಗಿಕ ಕೌತುಕಗಳಿಗೂ ಈ ಮಾಸ ಕನ್ನಡಿ ಹಿಡಿದಿದೆ. ವೈಶಾಖ ಮಾಸದಲ್ಲಿ ಭೂಮಿಯ ಅಕ್ಷವು ಸೂರ್ಯನ ಕಡೆ ವಾಲಲು ಪ್ರಾರಂಭಿಸುತ್ತದೆ. ಹಾಗಾಗಿಯೇ ಪ್ರಖರವಾದ ಸೂರ್ಯನಿಂದ ದಿನಗಳು (ಹಗಲು) ದೀರ್ಘವಾಗಲು ಪ್ರಾರಂಭಿಸುತ್ತವೆ. ಇದಕ್ಕೆ ಪೂರಕ ಆಚರಣೆಗಳನ್ನು ದಿನಚರಿಗಳನ್ನು ನಮ್ಮ ಪ್ರಾಚೀನರು ಆಚರಣೆಗೆ ತಂದಿದ್ದಾರೆ.

ಹವಾಮಾನದಲ್ಲಿ ಉಷ್ಣಾಂಶದ ತೀವ್ರ ಏರಿಕೆ ಈ ಮಾಸದಲ್ಲಿ ಕಂಡು ಬರುತ್ತದೆ. ಪರ್ವತಗಳ ಹಿಮ ಕರಗಿ ನೀರಾಗಿ ಹರಿಯುತ್ತದೆ. ಆಗಾಗ್ಗೆ ಸುರಿಯುವ ಗುಡುಗು, ಬಿರುಗಾಳಿ ಸಹಿತ ಮಳೆ ಆರ್ಭಟ ತಂಪೆರೆಯು ತ್ತದೆ. ಸಸ್ಯಗಳು ಹುಲುಸಾಗಿ ಬೆಳೆಯುತ್ತವೆ. ಪ್ರಾಣಿಗಳು ಶಿಶಿರ ಸುಪ್ತಿಯಿಂದ (ಹೈಬರ್‌ನೇಷನ್) ಎಚ್ಚರಗೊಂಡಿರುವ ಸಮಯವಿದು. ಉತ್ತರ ಮತ್ತು ದಕ್ಷಿಣ ಗೋಳಾರ್ಧದಲ್ಲಿ ಹಳದಿ ಹೂವು ಬಿಡುವ ಡ್ಯಾಫೋಡ್ರಾಲ್‌ಗಳನ್ನು ಸಮೃದ್ಧವಾಗಿ ಈ ಮಾಸದಲ್ಲಿ ಕಾಣಬಹುದು. ಹೂಬಿಡುವ ಸಸ್ಯಗಳಿಂದ ಪರಾಗ ಮತ್ತು ಮಕರಂದವನ್ನು ಜೇನುಗಳು ಹೆಚ್ಚಾಗಿ ಸಂಗ್ರಹಿಸುವ ಸಂದರ್ಭವಿದು.

ವಿದೇಶಗಳಿಂದ ಭರತಖಂಡಕ್ಕೆ ಅತಿ ಹೆಚ್ಚು ಹಕ್ಕಿಗಳು ವಲಸೆ ಬರುವುದೇ ವೈಶಾಖದ ಸೊಬಗಿನ ಸೂಚಕವಾಗಿದೆ. ಜಲಾಶಯ ತಾಣಗಳು, ಪಕ್ಷಿಧಾಮಗಳು, ಗಿರಿ ಪರ್ವತಗಳು ಮತ್ತು ಕೊಳ್ಳ, ಕಣಿವೆಗಳಲ್ಲಿ ಖಗ ಕಲರವ ಆಲಿಸುವುದೇ ಒಂದು ಸುಕೃತ.

ಇವೆಲ್ಲವೂ ಸಾವಿರಾರು ವರ್ಷಗಳಷ್ಟು ಹಳೆಯ ನೈಸರ್ಗಿಕ ಪ್ರವೃತ್ತಿಗಳು. ಆದರೂ ಪ್ರತಿವರ್ಷ ಕವಿ ಹೃದಯಿಗಳಿಗೆ ಹೊಸ ನೋಟಗಳನ್ನೇ ನೀಡುವ ವೈಶಾಖ ಕಲ್ಪನಾ ವಿಲಾಸಕ್ಕೆ ಹೊಸ ಭಾಷ್ಯವನ್ನೇ ಬರೆಯುತ್ತದೆ. ಮಾಸದ ಅಂತಿಮ ಚರಣಗಳಲ್ಲಿ ಜ್ಯೇಷ್ಠ ಮಾಸದ ಜಡಿ ಮಳೆಗೆ ಸ್ವಾಗತ ಕೋರುತ್ತದೆ.




**ಲೇಖಕರು : ಬೇಲೂರು ರಾಮಮೂರ್ತಿ**

**ಪ್ರಕಾಶಕರು : ಸಪ್ನ ಬುಕ್ ಹೌಸ್**

**ಗಾಂಧಿನಗರ ಬೆಂಗಳೂರು**

**ಪ್ರಥಮ ಮುದ್ರಣ 2005**

**ಬೆಲೆ . ರೂ. 200/-**

## ಪುರಾಣದ ಪುಣ್ಯ ಕಥೆಗಳು

### (ಪುರಾಣಗಳಿಂದ ಆಯ್ದ ವೈವಿಧ್ಯಮಯ ಕಥೆಗಳು)

ನಮ್ಮ ಆಧ್ಯಾತ್ಮಿಕ ಗ್ರಂಥಗಳಲ್ಲಿ ಮತ್ತು ಅಷ್ಟಾದಶ ಪುರಾಣಗಳಲ್ಲಿ ನಮ್ಮ ಬದುಕನ್ನು ತಿದ್ದಿಕೊಳ್ಳುವಂಥಾ ಅನೇಕ ಕಥಾನಕಗಳಿವೆ. ಇವುಗಳು ಗ್ರಂಥಗಳಲ್ಲಿ ಅಲ್ಲಲ್ಲಿ ಅಡಗಿರುತ್ತವೆ. ಅಂಥವುಗಳನ್ನು ಲೇಖಕರಾದ ಬೇಲೂರುರಾಮಮೂರ್ತಿ ಅವರು ಹೆಕ್ಕಿ ಸರಳವಾದ ಭಾಷೆಯಲ್ಲಿ ಸಾಮಾನ್ಯ ಓದುಗರಿಗೂ ಮನಮುಟ್ಟುವಂತೆ ಬರೆದಿದ್ದಾರೆ. ಕೆಲವು ಕಥಾನಕಗಳನ್ನು ಉದಾಹರಿಸುವುದಾದರೆ ಗಂಡಕಿ ನದಿಯಲ್ಲಿ ದೊರೆಯುವ ಸಾಲಿಗ್ರಾಮ ಶಿಲೆ, ಗಾಯತ್ರಿ ಮಂತ್ರದ ಪ್ರಭಾವ, ಸರಸ್ವತಿ ನದಿಯ ವೃತ್ತಾಂತ, ತುಳಸಿಯ ಮಹತ್ವ, ಶುಕ್ಲ ಮತ್ತು ಕೃಷ್ಣ ಯಜುರ್ವೇದದ ವಿಶೇಷ ಮುಂತಾದ 45 ಲೇಖನಗಳಿವೆ. ಪ್ರತಿಯೊಬ್ಬರೂ ಓದಲೇ ಬೇಕಾದ ಮತ್ತು ಪ್ರತಿಯೊಬ್ಬರ ಮನೆಯಲ್ಲೂ ಇರಬೇಕಾದ ಗ್ರಂಥ ಪುರಾಣದ ಪುಣ್ಯ ಕಥೆಗಳು.

# ಶಂಕರ ಜಯಂತಿ

ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621



ಭಾರತೀಯ ತತ್ವ ಶಾಸ್ತ್ರ, ಪರಂಪರೆಯಲ್ಲಿ ಆದಿ ಶಂಕರಾಚಾರ್ಯರು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದ್ದಾರೆ. ಅವರು ವೇದಾಂತದ ಅದ್ವೈತ ದರ್ಶನವನ್ನು ಸೈದ್ಧಾಂತಿಕವಾಗಿ ಸ್ಪಷ್ಟಪಡಿಸಿ, ಕ್ಷೀಣಿಸುತ್ತಿದ್ದ ವೈದಿಕ ಧರ್ಮಕ್ಕೆ ನವಚೈತನ್ಯವನ್ನು ನೀಡಿದರು. ಶಂಕರಾಚಾರ್ಯರು ಕೇವಲ ಧರ್ಮ ಗುರು ಮಾತ್ರವಲ್ಲ ಧಾರ್ಮಿಕ, ತಾತ್ವಿಕ ಮತ್ತು ಸಾಮಾಜಿಕ ಸಮನ್ವಯದ ಪ್ರತಿನಿಧಿಯಾಗಿದ್ದರು.

## ಐತಿಹಾಸಿಕ ಹಿನ್ನಲೆ

ಶಂಕರಾಚಾರ್ಯರು ಬದುಕಿದ್ದ ಕಾಲದಲ್ಲಿ ಬೌದ್ಧ ಹಾಗೂ ಜೈನ ದರ್ಶನಗಳು ವೇದ ಪ್ರಮಾಣವನ್ನು ಪ್ರಶ್ನಿಸುತ್ತಿದ್ದವು. ವೈದಿಕಯಜ್ಞ-ಕರ್ಮ ಪದ್ಧತಿಗಳು ಜನ ಸಾಮಾನ್ಯರಿಂದ ದೂರವಾಗುತ್ತಿದ್ದು, ಧರ್ಮವು ಕೇವಲ ಆಚರಣೆಯ ಮಟ್ಟಕ್ಕೆ ಸೀಮಿತವಾಗುವ ಭೀತಿ ಉಂಟಾಗಿತ್ತು. ಈ ಸಂದರ್ಭದಲ್ಲೇ ಶ್ರುತಿ-ಸ್ಮೃತಿಗಳ ಯಥಾರ್ಥ ಅರ್ಥವನ್ನು ಪುನಃ ಪ್ರತಿಷ್ಠಾಪಿಸುವ ಅಗತ್ಯ ಉಂಟಾಯಿತು.

## ಜನನ ಮತ್ತು ಬಾಲ್ಯ


ಕ್ರಿ.ಶ. 788 ರಲ್ಲಿ ಕೇರಳ ರಾಜ್ಯದ ಕಾಲಡಿ ಗ್ರಾಮದಲ್ಲಿ, ನಂಬೂದರಿ ವೈದಿಕ ಪರಂಪರೆಯ ಶಿವಗುರು ಮತ್ತು ಆರ್ಯಾಂಬೆ ದಂಪತಿಗಳ ಸುಪುತ್ರನಾಗಿ ಶಂಕರರ ಜನನವಾಯಿತು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ಅವರು ತಾಯಿಯ ಮಾರ್ಗದರ್ಶನದಲ್ಲೇ ಬೆಳೆದರು. ಐದನೇ ವಯಸ್ಸಿನಲ್ಲಿ ಉಪನಯನ ಸಂಸ್ಕಾರವನ್ನು ನೆರವೇರಿಸಿಕೊಂಡು ವೇದಾಭ್ಯಾಸದಲ್ಲಿ ತೊಡಗಿದರು.

## ಗುರುಪರಂಪರೆ ಮತ್ತು ವಿದ್ಯಾಭ್ಯಾಸ

ಯೋಗ್ಯ ಗುರುವನ್ನು ಹುಡುಕುತ್ತಾ ಶಂಕರರು ನರ್ಮದಾ ತೀರಕ್ಕೆ ತೆರಳಿ ಗೋವಿಂದ ಭಗವತ್ಪಾದರನ್ನು ಗುರುಗಳಾಗಿ ಸ್ವೀಕರಿಸಿದರು. ವೇದ, ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಗೀತೆಯ ಆಳವಾದ ಅಧ್ಯಯನವನ್ನು ಅವರು ಇಲ್ಲಿ ನೆರವೇರಿಸಿದರು. ಈ ಅವಧಿಯಲ್ಲಿಯೇ ಅವರ ಅಪೂರ್ವ ಧೀಶಕ್ತಿ ಮತ್ತು ತಾರ್ಕಿಕ ಸಾಮರ್ಥ್ಯ ಸ್ಪಷ್ಟವಾಯಿತು.

## ಶಂಕರರ ಜೀವನದಲ್ಲಿನ ಪ್ರಸಿದ್ಧ ಘಟನೆಗಳು

ಶಂಕರರ ಜೀವನದಲ್ಲಿ ಕಾಣಿಸುವ ಕೆಲವು ಘಟನೆಗಳು ಪೌರಾಣಿಕ ಸ್ವರೂಪ ಹೊಂದಿದ್ದರೂ, ಅವು ಅವರ ಆತ್ಮಶಕ್ತಿ ಮತ್ತು ಮಾನವೀಯ ದೃಷ್ಟಿ ಕೋನವನ್ನು ಪ್ರತಿ ಬಿಂಬಿಸುತ್ತವೆ. ಕನಕಧಾರಾಸ್ತುತಿಯ ಮೂಲಕ ದೀನರಿಗೆ ಸಹಾಯ ಮಾಡಿದ್ದು, ಉಗ್ರಕಾಳಿ ದೇವಾಲಯದಲ್ಲಿ ವೈದಿಕ ಪದ್ಧತಿಯನ್ನು ಪುನಃ ಸ್ಥಾಪಿಸಿದ್ದು, ಚಂಡಾಲನ ಘಟನೆಯ ಮೂಲಕ ಆತ್ಮ ತತ್ವದ ಸಮಾನತೆಯನ್ನು ಸಾರಿದ್ದು-ಇವೆಲ್ಲವೂ ಅವರ ತಾತ್ವಿಕ ನಿಲುವಿನ ಉದಾಹರಣೆಗಳಾಗಿವೆ.



## ಅದ್ವೈತ ವೇದಾಂತದ ತತ್ತ್ವ

ಶಂಕರಾಚಾರ್ಯರ ಪ್ರಮುಖ ಕೊಡುಗೆ ಅದ್ವೈತ ವೇದಾಂತದ

ಸೃಷ್ಟೀಕರಣವಾಗಿದೆ. ಅದ್ವೈತ ಎಂದರೆ ಪ್ರಪಂಚದಲ್ಲಿ ಎರಡಿಲ್ಲ. ಜೀವ, ಜಗತ್ತು ಮತ್ತು ಈಶ್ವರ ಆತ್ಮ ಮತ್ತು ಬ್ರಹ್ಮ ಒಂದೇ ಎಂಬುದೇ ಇದರ ಮೂಲ ತತ್ತ್ವ.

ಪಾರಮಾರ್ಥಿಕ ದೃಷ್ಟಿಯಿಂದ ಮೇಲು-ಕೀಳು-ಜಾತಿ-ಭೇದಗಳಿಲ್ಲ ವೆಂದು ಶಂಕರರು ಬೋಧಿಸಿದರು. ಆದರೆ ವ್ಯವಹಾರಿಕ ಜೀವನದಲ್ಲಿ ಕರ್ಮ, ಉಪಾಸನೆ ಮತ್ತು ಭಕ್ತಿಯ ಅಗತ್ಯವನ್ನೂ ಒಪ್ಪಿಕೊಂಡರು.

**ಸಗುಣೋಪಾಸನೆ ಮತ್ತು ಸಮನ್ವಯದ ದೃಷ್ಟಿ**

ಶಂಕರರು ನಿರ್ಗುಣ ಬ್ರಹ್ಮತತ್ತ್ವವನ್ನು ಪರಮ ಸತ್ಯವೆಂದು ಪ್ರತಿ ಪಾದಿಸಿದರೂ, ಸಾಧಕರಿಗೆ ಸಗುಣೋಪಾಸನೆಯ ಅಗತ್ಯವಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಪಂಚಾಯತನ ಪೂಜಾ ಪದ್ಧತಿಯನ್ನು ಪರಿಚಯಿಸಿ, ಶಿವ, ವಿಷ್ಣು, ಶಕ್ತಿ, ಗಣಪತಿ,ಸೂರ್ಯ- ಎಂಬ ಸಮನ್ವಯದ ದೃಷ್ಟಿಯನ್ನು ನೀಡಿದರು.

**ಸಾಮಾಜಿಕ ಮತ್ತು ಧಾರ್ಮಿಕ ಪರಿಣಾಮ**

ಶಂಕರಾಚಾರ್ಯರ ಚಿಂತನೆಯಿಂದ ವೈದಿಕ ಧರ್ಮವು ಪುನಃ ಸಂಘಟಿತವಾಯಿತು. ವಿವಿಧ ಮತಪಂಥಗಳ ನಡುವಿನ ಸಂಘರ್ಷ ಕಡಿಮೆ ಯಾಗಿ, ವೇದಾಂತದ ಏಕ ಸಿದ್ಧಾಂತ ಸಮಾಜದಲ್ಲಿ ಸ್ವೀಕೃತಿಯಾಯಿತು. ಅವರು ಯಾವುದೇ ಹೊಸ ಮತವನ್ನು ಸ್ಥಾಪಿಸದೆ, ವೇದ ಪ್ರಮಾಣವನ್ನು ಬಲಪಡಿಸಿದರು.

**ಕೃತಿಗಳು ಮತ್ತು ಭಾಷ್ಯಗಳು**

ಶಂಕರಾಚಾರ್ಯರು ಬ್ರಹ್ಮಸೂತ್ರ, ಪ್ರಮುಖ ಉಪನಿಷತ್ತುಗಳು ಮತ್ತು ಭಗವದ್ಗೀತೆಗೆ ಭಾಷ್ಯಗಳನ್ನು ರಚಿಸಿದರು. "ಅಹಂಬ್ರಹ್ಮಾಸ್ಮಿ", "ತತ್ತ್ವಮಸಿ", "ಪ್ರಜ್ಞಾನಂ ಬ್ರಹ್ಮ", "ಅಯಮಾತ್ಮಾ ಬ್ರಹ್ಮ" ಎಂಬ ಮಹಾ ವಾಕ್ಯಗಳ ತಾತ್ವಿಕ ಅರ್ಥವನ್ನು ಸರಳವಾಗಿ ವಿವರಿಸಿದರು.

ಮೂವತ್ತೆರಡು ವರ್ಷಗಳ ಅಲ್ಪ ಆಯುಷ್ಯದಲ್ಲಿಯೇ ಆದಿ ಶಂಕರಾಚಾರ್ಯರು ಭಾರತೀಯ ತತ್ವಶಾಸ್ತ್ರಕ್ಕೆ ಶಾಶ್ವತವಾದ ಕೊಡುಗೆಯನ್ನು ನೀಡಿದರು. ಅವರ ಅದ್ವೈತ ದರ್ಶನವು ಧರ್ಮ,ತತ್ವ ಮತ್ತು ಜೀವನದ ನಡುವೆ ಸೇತುವೆಯಾಗಿದ್ದು, ಮಾನವ ಚೇತನವನ್ನು ಏಕತ್ವದ ದರ್ಶನದತ್ತ ಕರೆದೊಯ್ಯುತ್ತದೆ.





**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

# ಹರಿಕಥಾಮೃತ ಸಾರ ಮಹಿಮೆ ಅಪಾರ

- ಶ್ರೀಮತಿ. ಪ್ರಿಯ ಪ್ರಾಣೇಶ ಹರಿದಾಸ
80504 36752



**ಹಿಂದಿನ ಸಂಚಿಕೆಯಿಂದ**

**ಪಿತೃಗಣ ಸಂಧಿ :**

ಮೊದಲು ಶ್ರಾದ್ಧದ ಹಿನ್ನಲೆ ತಿಳಿದು ಕೊಳ್ಳೋಣ. ಬ್ರಹ್ಮವೈವರ್ತ ಪುರಾಣ, ಹರಿವಂಶ ಪುರಾಣ, ಗರುಡಪುರಾಣ, ವಾಯುಪುರಾಣ, ನಾರದೀಯ ಪುರಾಣ, ಸ್ಕಂದಪುರಾಣ, ಪದ್ಮ ಪುರಾಣ ಇವುಗಳನ್ನೆಲ್ಲಾ ಅಧ್ಯಯನ ಮತ್ತು ವಿಶ್ಲೇಷಣೆ, ಶ್ರೇಷ್ಠದಾಸರಾದ ಜಗನ್ನಾಥದಾಸರು ಹರಿಕಥಾಮೃತ ಸಾರದಲ್ಲಿನ 14 ನೇ ಸಂಧಿಯಾದ ಪಿತೃಗಣ ಸಂಧಿಯಲ್ಲಿ ಬರೆದಿದ್ದಾರೆ.

ಇದರ ಮೂಲ ಪ್ರಾರಂಭವಾದದ್ದು ಮಹಾಭಾರತದಲ್ಲಿ ವೇದವ್ಯಾಸರು ಇದರ ವಿವರಣೆಯನ್ನು ಹರಿವಂಶ ಪುರಾಣದ ವಿಷ್ಣು ಪರ್ವದಲ್ಲಿ 16 ರಿಂದ 24 ಅಧ್ಯಾಯದವರೆಗೆ ಹೇಳಿದ್ದಾರೆ.

**ಶ್ರಾದ್ಧದ ಎಂದರೇನು?**

ಪಿತೃದೇವತೆಗಳು, ಮೂಲ ಚತುರ್ಮುಖ ಬ್ರಹ್ಮದೇವರ ಮಕ್ಕಳು. ದೇವ ಲೋಕದ ದೇವತೆಗಳು, ಗಂಧರ್ವರು, ಯಕ್ಷಕರು, ಕಿನ್ನರರು ಶ್ರದ್ಧೆಯಿಂದ ಮಾಡುವ ಅರ್ಚನೆಯನ್ನು ಪಿತೃಗಳ ಅಂತರ್ಯಾಮಿಯಾದ ಪರಮಾತ್ಮನನ್ನು ಪೂಜಿಸುವುದೇ ಶ್ರಾದ್ಧ' ಎನ್ನುವರು. ಮಾನವರು ಮಾಡಿದಂತಹ ಶ್ರಾದ್ಧದಲ್ಲಿ ಅವರು ಕೊಡತಕ್ಕಂತಹ ಸ್ವಾಧ್ವಾವನ್ನು ತೆಗೆದುಕೊಂಡು ಹೋಗಿ, ತಂದೆ, ತಾತ, ಮುತ್ತಾತ, ಅಜ್ಜಿ, ಮುತ್ತಜ್ಜಿ ಇವರಿಗೆ ತೆಗೆದು ಕೊಂಡು ಹೋಗಿ ಮುಟ್ಟಿಸುತ್ತಾರೆ.

ಅವರು ಯಾವುದೇ ಯೋನಿಗಳಲ್ಲಿ ಹುಟ್ಟಿದರು. ಅವರು ಹುಟ್ಟಿದ ಯೋನಿಗೆ ಅನುಸಾರವಾಗಿ ಮಾರ್ಪಡಿಸಿ ಅನ್ನವನ್ನು ಮುಟ್ಟಿಸುವ ಕಾರ್ಯ ಈ ಪಿತೃ ದೇವತೆಗಳ ಕೆಲಸ. ಇದೆ ಶ್ರಾದ್ಧದ ಅರ್ಥ ಮತ್ತು ಉದ್ದೇಶ.

**ಪಕ್ಷಮಾಸ ನಿಯಮ :**

ಈ ನೈಮಿತ್ತಿಕ ಶ್ರಾದ್ಧದಲ್ಲಿ ಬರುವ ಪಕ್ಷಮಾಸದಲ್ಲಿ ಮಾಡುವ ಶ್ರಾದ್ಧವೆ "ಪಿತೃಪಕ್ಷ" ಅನ್ನುತ್ತಾರೆ. ಇಲ್ಲಿ ಸರ್ವ ಪಿತೃಗಳನ್ನು ಸ್ಮರಿಸಿ ತರ್ಪಣ ಬಿಡುತ್ತಾರೆ. ಇದರ ದೇವತೆ ಧೂರಿ ಮತ್ತು ವಿಲೋಚನ. ಇಲ್ಲಿ ಮೂರು ತಲೆಮಾರಿನವರು ಪಿತೃಗಳ ಸ್ಮರಣೆ ಮಾಡಿ ಸಾಮೂಹಿಕವಾಗಿ ತಿಲ್, ಜಲ್, ತರ್ಪಣ, ಪಿಂಡ ಬಿಡುವುದೇ ಪಿತೃಪಕ್ಷ ಅಥವಾ ಮಹಾಲಯ ಪಕ್ಷ ಎನ್ನುತ್ತಾರೆ. ಈ ಮೂರು ತಲೆಮಾರಿನವರು ಆತ್ಮಗಳು ಇದು ಸೂಕ್ಷ್ಮ ಶರೀರ ಇರುವುದರಿಂದ ಭೂಮಿ ಮತ್ತು ಸ್ವರ್ಗದ ಮಧ್ಯದಲ್ಲಿ ಇರುತ್ತಾರೆ. ಈ ಶ್ರಾದ್ಧ ಕಾಲದಲ್ಲಿ ಜನಾರ್ಧನ ರೂಪಿಯಾದ ಪರಮಾತ್ಮನು 3555 ರೂಪಗಳಲ್ಲಿ ಇರುತ್ತಾನೆ. ಹಾಗೆ ಪರಮಾತ್ಮನ ಪಂಚರೂಪಗಳಾದ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ಹೀಗೆ ಐದು ರೂಪಗಳಲ್ಲಿ ಇರುತ್ತಾನೆ. ಮನುಷ್ಯ ತೀರಿ ಹೋದ ಮೇಲೆ ಅವರ ಸ್ಮರಣೆಯಲ್ಲಿ ಷಣ್ಣವತಿ ಶ್ರಾದ್ಧ ಮಾಡಬೇಕು. ಷಣ್ಣವತಿ ಎಂದರೆ ಸಂಸ್ಕೃತದಲ್ಲಿ 96 ಎಂದರ್ಥ. ಅಂದರೆ ವರ್ಷದಲ್ಲಿ 96 ಶಾದ್ಧಗಳನ್ನು ಮಾಡಬೇಕು.

**ಷಣ್ಣವತಿ ಶ್ರಾದ್ಧಗಳು :**

1. ಮನ್ವಾದಿಗಳಲ್ಲಿ - 14
2. ಮಹಾಲಯ - 16
3. ಯುಗಾದಿಗಳು - 04
4. ಸಂಕ್ರಮಣ - 12
5. ದರ್ಶಗಳು - 12
6. ವ್ಯತೀಪಾತಗಳು - 13
7. ವೈಧೃತಿಗಳು - 13
8. ತ್ರಿಸ್ರೋಷ್ಟಕಗಳು -12

ಒಟ್ಟಾರೆಯಾಗಿ ಇವೆ 96 ಷಣ್ಣವತಿ ಶ್ರಾದ್ಧಗಳು ಆದರೆ ನಾವು ಹಾಗೆ ಮಾಡುವುದಿಲ್ಲ. ಕೇವಲ ವರ್ಷದಲ್ಲಿ ಎರಡು ಶ್ರಾದ್ಧ ಮಾಡುತ್ತೇವೆ

1. ಪ್ರತಿ ಸಂವತ್ಸರದ ತಿಥಿಯಂದು ಮಾಡುವ ಕಾಲ್ ಶ್ರಾದ್ಧ
2. ಇನ್ನು ಪಕ್ಷಮಾಸದಲ್ಲಿ ಮಾಡುವ ಪಿತೃಪಕ್ಷ

ಇನ್ನು ಪಿತೃಗಣ ಸಂಧಿ ಬಗ್ಗೆ ತಿಳಿಯೋಣ.

ಪ್ರತಿ ಸಂಧಿಯಂತೆ ಈ ಸಂಧಿಯಲ್ಲಿಯೂ
ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ಪಲ್ಲವಿಯನ್ನು ಹೇಳಿ ಮುಂದೆ ಪಿತೃಗಣ ಸಂಧಿಯ ಬಗ್ಗೆ ಹೇಳಿದ್ದಾರೆ.

ಕೃತಿರಮಣ ಪ್ರದ್ಯುಮ್ನ ವಸುದೇವತೆಗಳಹಂಕಾರ ತ್ರಯದೊಳು
ಚತುರವಿಂಶತಿ ರೂಪದಿಂದಲಿ ಭೋಜ್ಯನೆನಿಸುವನು
ಹುತವಹಾಕ್ಷಾಂತರ್ಗತ ಜಯಾಪತಿಯು ತಾನೇ
ಮೂರಧಿಕ ತ್ರಿಂಶತಿ ಸುರೂಪದಿ
ಭೋಕ್ತ್ರ ಎನಿಸುವ ಭೋಕ್ತ್ರುಗಳೊಳಿದ್ದು

ಕೃತಿ ಪತಿಯಾದ ಪ್ರದ್ಯುಮ್ನನನ್ನು ವಸುದೇವತೆಗಳ ಅಹಂಕಾರತ್ರಯ ಗಳಾದ (ವೈಕಾರಿಕ, ತೈಜಸ, ತಾಮಸ ಗುಣಗಳು) 24 ರೂಪದಿಂದ (ವಸುಗಳು 3 ಅಹಂಕಾರ ಗುಣಗಳು ಗುಣಿಸಿದಾಗ 24 ಬರುವುದು ) ಭೋಜ್ಯ (ಎಂದರೆ ಭೋಗ ವಸ್ತುವಿನಲ್ಲಿದ್ದು) ಎನಿಸುವನು. ರುದ್ರಾಂತ ರ್ಗತನಾದ ಮಾಯಾಪತಿ ವಾಸುದೇವನು 33 ರೂಪದಿಂದ (ರುದ್ರರು 11 ಅಹಂಕಾರ ಗುಣಗಳು 3 ಗುಣಿಸಿದಾಗ 33 ಬರುವುದು) ಭೋಕ್ತ್ರ (ಭೋಗಿಸು ವನಲ್ಲಿದ್ದು) ಎನಿಸುವನು.

ಶ್ರಾದ್ಧ ನಡೆಯ ಬೇಕಾದರೆ ಕರ್ತೃ, ಕರ್ಮ, ಕ್ರಿಯೆ ಎಂಬ ಮೂರು ಕ್ರಿಯೆಗಳಲ್ಲಿ ಇರುವನು. ವಾಸುದೇವನು ಕಾಲ ಎಂಬ ಹೆಸರಿ ನಿಂದ ಸೂರ್ಯನಲ್ಲಿ 39 ರೂಪದಿಂದ ಇದ್ದರೆ ಹರಿಯ ಮೂರು ರೂಪಗಳು ಮೂರು ವಿಧ ಪಿತೃಗಳಾದ ಪಿತೃ, ಪಿತಾಮಹ, ಪ್ರಪಿತಾಮಹಗಳಲ್ಲಿ ವಸು, ರುದ್ರ, ಆದಿತ್ಯನಲ್ಲಿರುವನು. ಅನಿರುದ್ಧನಾಗಿ ಕರ್ತೃ, ಕರ್ಮ, ಕ್ರಿಯೆ ಎನಿಸು ವನು. ನಾರಾಯಣನು ಷಣ್ಣವತಿ (96) ನಾಮದಿಂದ ಕರೆಸಿಕೊಳ್ಳುವನು.

### ಹರಿಯ ಷಣ್ಣವತಿ ರೂಪಗಳು

ವಸುಗಳು 8x3 ಗುಣಗಳು =24
ರುದ್ರರು 11x 3 ಗುಣಗಳು =33
ಆದಿತ್ಯರು 11x3 ಗುಣಗಳು =33

ಕರ್ತೃ, ಕರ್ಮ , ಕ್ರಿಯೆ (ಅನಿರುದ್ಧ) =03 ಒಟ್ಟಾರೆ ಇವೆಲ್ಲ ಕೂಡಿಸಿ ದಾಗ 96 ಹರಿಯ ರೂಪಗಳು ಬರುವುದು. ಅಂಶಿ, ಅಂಶ, ಅಂತರ್ಗತ ಎಂಬ ಮೂರು ರೂಪದಿಂದ 3555 ರೂಪದ ಜನಾರ್ದನನು ಈ ಕಾರ್ಯ ದಳ್ಳಿದ್ದು ನಿರ್ವಿಘ್ನ ರೂಪದಿಂದ ನಡೆಸುವನು.

ದ್ರುಹಿಣ ಮೊದಲಾದ ಅಮರರಿಗೆ ಸನ್ಮಹಿತ ಮಾಯಾರಮಣ
ತಾನೇ ಸ್ವಹನೆನಿಸಿ ಸಂತೃಪ್ತಿಪಡಿಸುವ ಸರ್ವ ಕಾಲದಲಿ
ಪ್ರಹಿತ ಸಂಕರುಷಣನು ಪಿತೃಗಳಿಗೆ ಅಹರನೆನಿಪ ಸ್ವಧಾಖ್ಯ ರೂಪದಿ
ಮಹಿಜ ಫಲ ತೃಣ ಪೆಸರಿನಲಿ ಪ್ರದ್ಯುಮ್ನ ಅನಿರುದ್ಧ

ಬ್ರಹ್ಮಾದಿ ದೇವತೆಗಳಲ್ಲಿದ್ದು ಮಾಯಾಪತಿ ವಾಸುದೇವನು ಸರ್ವ ಕಾಲದಲ್ಲಿ ಸ್ವಾಹಾ ಎನಿಸಿ ತೃಪ್ತಿಪಡಿಸುವನು. ಜಯಾಪತಿ ಸಂಕರ್ಷಣವಾಗಿ ಪಿತೃಗಳಲ್ಲಿ ಸ್ವಧಾ ನಾಮದಿಂದ ಆಹಾರನಾಗಿರುತ್ತಾನೆ. ಭೂಮಿಯಲ್ಲಿ ಹುಟ್ಟುವ ಹಣ್ಣು, ಹುಲ್ಲು, ಕಾಯಿಪಲ್ಲೇಯಲ್ಲಿ ಪ್ರದ್ಯುಮ್ನ ಮತ್ತು ಅನಿ ರುದ್ಧನಾಗಿ ಇರುತ್ತಾನೆ.

ಅನ್ನದನಾಗಿ ನಾರಾಯಣನು ಮನುಷ್ಯ ಹಾಗೂ ಪಶುಗಳಿಗೆ ಅನ್ನ ರೂಪದಲ್ಲಿರುತ್ತಾನೆ. ಹೀಗೆ ನಾಲ್ಕು ವಿಧವಾದ ಸ್ವಾಹ, ಸ್ವಧಾ, ಫಲ, ತೃಣ ದಲ್ಲಿದ್ದು ಉಪಾಸನೆ ಮಾಡುವವರಿಗೆ ಸುಖ ಕೊಡುತ್ತಾನೆ. ಇನ್ನು ಮನಸ್ಸು, ಮಾತು, ದೇಹ ಮೂಲಕ ನಿತ್ಯದಲ್ಲಿ ವಾಯು ಅಂತರ್ಗತನಾದ ನಾರಾ ಯಣನಿಗೆ ಅನ್ನವೆಂದು ಕೃಷ್ಣಾರ್ಪಣ ಅಂದರೆ ಸದಾ ನಮ್ಮನ್ನು ಸಂತೈಸುವನು.

ಕೈಯಲ್ಲಿ ಸೂಜಿ ಹಿಡಿದು ಯುದ್ಧ ಗೆಲ್ಲುವನೆಂಬ ಅಹಂಕಾರದಲ್ಲಿ ಹೊರ ಟರೆ ಬಳಲುವನು. ಭಗವಂತನು ಪ್ರತಿಯುಗದಲ್ಲಿ ಸಾಮಾನ್ಯ ಮನುಷ್ಯನಂತೆ ಅವತರಿಸಿ ತನ್ನ ಲೀಲೆಗಳನ್ನು ತೋರಿಸಿ ದೈತ್ಯರನ್ನು ಸಂಹರಿಸುವನು. 24 ತತ್ವಗಳಲ್ಲಿ ಸಹಜ ಅಹಿತ ಅಚಲಗಳಲ್ಲಿ ಆ ರೂಪಗಳು ಮತ್ತು ನಾಮಗಳಿಂದ ಇರುವನು.

ಜೀವರಂತರ್ಯಾಮಿ ಅಂಶಿ ಕಳೇವರಗಳೊಳಗಿಂದ್ರಿಯಗಳಲಿ
ತಾ ವಿಹಾರವಗೈಯುತನುದಿನವಂಶನಾಮದಲಿ
ಈ ವಿಷಯಗಳನುಂಡು ಸುಖಿಮಯ
ಈವ ಸುಖ ಸಂಸಾರ ದುಃಖವ
ದೇವ ಮಾನವದಾನವರಿಗವಿರತ ಸಾಧಾಮ ಸುಖ

### ಭಗವಂತನು "ಅಂಶಿ" ರೂಪದಿಂದ (ಮೂಲರೂಪ)

ಎಲ್ಲರ ದೇಹದಲ್ಲಿರುವ ಇಂದ್ರೀಯ ಮುಖಾಂತರ ಕ್ರೀಡೆಯಾಡುತ್ತಾ "ಅಂಶ" ನಾಮದಿಂದ (ಶ್ರೀಹರಿಯ ಅವತಾರಗಳ ರೂಪ) ವಿಷಯ ಭೋಗ ಮಾಡಿ ಸುಖಿಸಿ ದೇವ, ಮಾನವ ದಾನವ ಹೀಗೆ ಎಲ್ಲರಿಗೂ ಸಂಸಾರ ಸುಖ ದುಃಖ ಕೊಡುವನು.

ಜಗತ್ತಿನಲ್ಲಿ ಎರಡು ತರಹ ಜೀವಿಗಳಾದಕ್ಷರ ಅಕ್ಷರ ಇದ್ದಾರೆ ಅವರಲ್ಲಿಯೂ ಇದ್ದು ಮತ್ತು ಜಡಪ್ರಕೃತಿಯಲ್ಲಿ ಪ್ರಣವದಲ್ಲಿ ಅಕ್ಷರದಲ್ಲಿ ಮಹಾಕಾಲ ಹಾಗೂ ಅಣುಕಾಲ ಹರಿಯು ಬೇರೆ ಬೇರೆ ನಾಮಗಳಿಂದ ಇದ್ದಾನೆ. ಪಂಚ ಭೇದಗಳಲ್ಲಿಯೂ ಸತತ ಹರಿಯನ್ನು ಸ್ಮರಿಸುತ್ತಾ ಅಚ್ಯುತನ ಪದ ಹೊಂದು ಎಂದಿದ್ದಾರೆ.

ದೀಪದಿಂದ ಕತ್ತಲೆಯನ್ನು ಕಳೆದು ಅಲ್ಲಿರುವ ಪದಾರ್ಥ ತೋರಿಸುವಂತೆ ಹರಿಯು ಅನೇಕ ರೂಪ ಮತ್ತು ಹೆಸರಿನಿಂದ ಎಲ್ಲೆಡೆಯಿದ್ದು ತನ್ನ ಮಹಿಮೆ ತಿಳಿಸುವನು.

ಕರುಣಾಮಯಿ ಭಗವಂತ ಹೇಗ್ ಇದ್ದಾನೆಂದರೆ ಸೂರ್ಯನಿಗೆ ಕಾಮನ ಬಿಲ್ಲುವಿನಂತೆ ಮೂರು ಲೋಕಗಳು (ಶ್ವೇತ ದ್ವೀಪ, ಅನಂತಾಸನ, ವೈಕುಂಠ) ಹರಿಗೆ ಪ್ರತಿಬಿಂಬ ರೂಪದಿಂದ ಇರುವನು. ತ್ರಿಗುಣ ಮಾನಿಯಾದ ರಮೆಯಸಹಿತನಾಗಿ ಸರ್ವಕಾಲದಲ್ಲೂ ಹರಿಯು ತೋರುವನು.

ಚೇತನಾಚೇತನಗಳಲಿ ಗುರು ಮಾತರಿ ಶ್ವಾಂತರ್ಗತ
ಜಗನ್ನಾಥ ವಿಠಲ ನಿರಂತರದಿ ವ್ಯಾಪಿಸಿ ತಿಳಿಸಿದಲೆ
ಕಾತರವ ಪುಟ್ಟಿಸಿ ವಿಷಯದಲಿ ಯಾತುಧಾನರ ಮೋಹಿಸುವ
ನಿರ್ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ

ಜೀವಜಡಗಳಲ್ಲಿ ವಾಯುದೇವರ ಅಂತರ್ಗತನಾದ ದೋಷ ರಹಿತನಾದ ಜಗನ್ನಾಥವಿಠ್ಠಲನು ಯಾರಿಗೂ ತಿಳಿಯದಂತೆ ಎಲ್ಲಡೆ ಇದ್ದು ಪಕ್ಷಪಾತವಿಲ್ಲದೆ ಅವರವರ ಕರ್ಮಾನುಸಾರ ಸುಖವ ದುಃಖ ಕೊಡುವನು.

ಹೀಗೆ ಶ್ರೀಜಗನ್ನಾಥದಾಸರು ಈ ಪಿತೃಗಣ ಸಂಧಿಯಲ್ಲಿ ಭಗವಂತನ ಅನುಗ್ರಹ ಪಡೆಯಬೇಕಾದರೆ ಹಿರಿಯರ ಕಾರ್ಯವಾದ ಶ್ರಾದ್ಧ ಪಕ್ಷ ಮಾಡಬೇಕು ಎಂದು ತಿಳಿಸುತ್ತಾ ಮಹತ್ವ ಹೇಳುತ್ತಾ ನಮ್ಮನ್ನು ಉದ್ಧರಿಸಿದ್ದಾರೆ.

ಹೀಗೆ ಸರ್ವಾಂತರ್ಯಾಮಿಯಾದ ಪರಮಾತ್ಮನು ಎಲ್ಲದರಲ್ಲೂ ಇದ್ದು ಕಾರ್ಯ ಮಾಡಿಸುವನು. ಅವರವರ ಸುಕರ್ಮವನ್ನು ಸ್ವೀಕರಿಸಿ ಸಕಲ ಜೀವರಾಶಿಗಳಿಗೂ ಮತ್ತು ಪಿತೃಗಳಿಗೆ ಸುಖವನಿತ್ತು ಎಲ್ಲ ಕಾಲದಲ್ಲಿಯೂ ಕಾರುಣ್ಯ ಸಾಗರನಾದ ಪರಮಾತ್ಮ ಕಾಯುತ್ತಿರುವನು.

## ತಿರುಮಲೆ ತಿರುಪತಿ ದೇವಸ್ಥಾನಗಳು

# ಭಕ್ತರಿಗೆ ವಿಜ್ಞಪ್ತಿ

**ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸ ಲಾಗಿದೆ.**

**1. 60 ವರ್ಷ ವಯಸ್ಸಿನವರು ಮತ್ತು ಮಧುಮೇಹ,ಅಧಿಕ ರಕ್ತದೊತ್ತಡ, ಅಸ್ತಮಾ, ಫಿಟ್ಸ್ ಮತ್ತು ಸಂಧಿವಾತದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.**

**2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತಬಾರದು.**

**3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲಜನಕದ ಸಾಂದ್ರತೆಯಿಂದ ಹೃದಯದ ತೊಂದರೆಗಳು ಮತ್ತು ಆಸ್ತಮಾ ಹೆಚ್ಚಾಗಬಹುದು.**

**4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.**

**5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯವಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದು ಕೊಳ್ಳಿ. ಅಲಿಪಿರಿ ನಡೆದು ಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.**

**6.ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರುಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.**

**7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರುಪತಿಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯಲಭ್ಯವಿದೆ.**

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯವರ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ಸೇವೆ ಸಮಯ | ಟಿಕೆಟ್ಟು ಬೆಲೆ | ಪ್ರವೇಶ |
|---|---|---|---|---|
| | **ನಿತ್ಯ ಸೇವೆ** | | | |
| 1. | ಸುಪ್ರಭಾತ | ಬೆ. 3.00 ಗಂ॥ | 120.00 | 01 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಬೆ. 3.30 ಗಂ॥ | 220.00 | 01 |
| 3. | ಅರ್ಚನೆ (ಮಂಗಳ, ಬುಧ, ಗುರು) | ಬೆ. 4.30 ಗಂ॥ | 220.00 | 01 |
| | **ನಿತ್ಯ ಉತ್ಸವಗಳು** | | | |
| 4. | ಕಲ್ಯಾಣೋತ್ಸವ | ಮ. 12.00 ಗಂ॥ | 1,000.00 | 02 |
| 5. | ಊಂಜಲ್ ಸೇವೆ | ಮ. 2.00 ಗಂ॥ | 500.00 | 01 |
| 6. | ಆರ್ಜಿತ ಬ್ರಹ್ಮೋತ್ಸವ | ಮ. 3.00 ಗಂ॥ | 500.00 | 01 |
| 7. | ಸಹಸ್ರದೀಪಾಲಂಕರಣ ಸೇವೆ | ಸಾ. 5.00 ಗಂ॥ | 500.00 | 01 |
| | **ವಾರದ ಸೇವೆಗಳು** | | | |
| 8. | ಅಷ್ಟದಳ ಪಾದಪದ್ಮಾರಾಧನೆ ಸೇವೆ (ಮಂಗಳವಾರ) | ಬೆ. 9.30 ಗಂ॥ | 1,250.00 | 01 |
| 9. | ತಿರುಪ್ಪಾವಡ ಸೇವೆ (ಗುರುವಾರ) | ಬೆ. 7.00 ಗಂ॥ | 850.00 | 01 |
| 10. | ಅಭಿಷೇಕ ಸೇವೆ (ಶುಕ್ರವಾರ) | ಬೆ. 4.30 ಗಂ॥ | 750.00 | 01 |
| | **ವಾರ್ಷಿಕ ಸೇವೆಗಳು** | | | |
| 11. | ತೆಪ್ಪೋತ್ಸವ (ಫೆಬ್ರವರಿ/ ಮಾರ್ಚ್) | ರಾ. 7.00 ಗಂ॥ | 500.00 | 01 |
| 12. | ವಸಂತೋತ್ಸವ ( ಮಾರ್ಚ್/ ಏಪ್ರಿಲ್) | ಮ. 2.00 ಗಂ॥ | 300.00 | 01 |
| 13. | ಜ್ಯೇಷ್ಠಾಭಿಷೇಕ (ಅಭಿದೇಯಕ ಅಭಿಷೇಕ) (ಜೂನ್) | ಬೆ. 9.00 ಗಂ॥ | 400.00 | 01 |
| 14. | ಪವಿತ್ರೋತ್ಸವಗಳು (ಆಗಸ್ಟ್) | ಬೆ. 9.00 ಗಂ॥ | 2,500.00 | 01 |
| 15. | ಪುಷ್ಪಯಾಗ (ನವೆಂಬರ್) | ಬೆ. 9.00 ಗಂ॥ | 700.00 | 01 |

Toll free : 155257

whatsapp feedback : 9399399399

e-mail :helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಟಿಕೆಟ್‌ಗಳನ್ನು ಆನ್‌ಲೈನ್ ನಲ್ಲಿ ಮಾತ್ರವೇ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ :
ttdevasthanams.ap.gov.in
ನು ಸಂಪ್ರದಿಸಬೇಕು.

**ಗಮನಿಸಿ :** ಸೇವೆಗಳು ಮತ್ತು ಬೆಲೆಗಳು ಯಾವುದೇ ಸಂದರ್ಭದಲ್ಲಿಯಾದರೂ ಬದಲಾವಣೆಗಳು ಆಗುವ ಸಾಧ್ಯತೆ ಇದೆ.



ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಾ|| ಬಿ.ಎನ್.ಶ್ರೀನಿವಾಸನ್

**ಕಳೆದ ಸಂಚಿಕೆಯಿಂದ**

**ಸರ್ವದರ್ಶನ:**

ಈ ಸಮಯದಲ್ಲಿ ಸ್ವಾಮಿಯನ್ನು ಎಲ್ಲರೂ ದರ್ಶನ ಮಾಡಬಹುದಾಗಿದೆ. ಈ ದಿನಗಳಲ್ಲಿ ಸ್ವಾಮಿಯ ದರ್ಶನ ಭಾಗ್ಯದ ಸಂದಣಿ ಎಷ್ಟು ಹೆಚ್ಚಾಗಿದೆಯೆಂದರೆ ಯಾವಾಗಲೂ ಚಲಿಸುತ್ತಿರುವ ಸಾಲಿನಲ್ಲಿಯೇ ಸ್ವಾಮಿಯನ್ನು ಒಂದೆರಡು ಕ್ಷಣಕಾಲ ನೋಡುವಂತಾಗಿದೆ.

**ಅಪರಾಹ್ನ ಪೂಜೆ:**

(ಎರಡನೇ ಗಂಟೆ) ಎರಡನೇ ಬಾರಿಯ ನಿವೇದನೆಯು ಮಧ್ಯಾಹ್ನದ ಎರಡನೇ ಅರ್ಚನೆ. 108 ನಾಮಾರ್ಚನೆಯ ಬಳಿಕ ನಡೆಯುವುದು. ಇದು ಪೂರ್ಣವಾಗಿ ದೇವಸ್ಥಾನಕ್ಕೆ ಸಂಬಂಧಿಸಿದ್ದು. ವರಾಹ ಪುರಾಣದಲ್ಲಿನ ಅಷ್ಟೋತ್ತರ ಶತನಾಮವನ್ನು ಈಗ ಬಳಸುವರು.

ಈ ನಿವೇದನೆಯ ಸಮಯದಲ್ಲಿ ಗೃಹಸ್ಥರು ದೇವರ ನೈವೇದ್ಯಕ್ಕಾಗಿ ನೀಡಿದ ಚೆರುಪುಗಳನ್ನು-ಅನ್ನ ಪ್ರಸಾದಗಳು, ಪಣ್ಯಾರಗಳು-ದೇವರಿಗೆ ನಿವೇದಿಸಲಾಗುವುದು. ಇದೊಂದು ಆರ್ಜಿತ ಸೇವೆಯಾಗಿದ್ದು, ಗೃಹಸ್ಥರು ನಿವೇದನೆಗಾಗಿ ಶುಲ್ಕವನ್ನು ಸಲ್ಲಿಸುವರು. ಆಲಯದವರು ಪ್ರಸಾದಗಳನ್ನು ನಿವೇದಿಸಿ, ಆಲಯದಲ್ಲಿ ವಿತರಣೆಗಾಗಿ ಸ್ವಲ್ಪಪ್ರಸಾದವನ್ನು ಇಟ್ಟುಕೊಂಡು ಮಿಕ್ಕದನ್ನು ಗೃಹಸ್ಥರಿಗೇ ನೀಡುವರು.

ಎರಡನೇ ಗಂಟೆಯ ನಂತರ ಆಲಯದ ನಿತ್ಯಕಾರ್ಯಕ್ರಮದಲ್ಲಿ ಮೊದಲ ಅರ್ಧಕಾರ್ಯಕ್ರಮ ಮುಗಿದಂತಾಗಿ, ಆಲಯದ ಒಳಗಡೆ ಭಕ್ತಾದಿಗಳು ನೀಡಿದ ಸಮರ್ಪಣೆಗಳನ್ನು ಪಾರುಪತ್ಯದಾರರ (ಆಲಯದ ಕೋಶಾಧಿಕಾರಿ) ಬಳಿಗೆ ತರಲಾಗುವುದು. ನಂತರ ಆಲಯದ ಬಾಗಿಲನ್ನು ಮುಚ್ಚುವರು.

**ಸರ್ವದರ್ಶನ:**

ಹೆಚ್ಚಿನ ಜನ ಸಂದಣಿಯಿಂದಾಗಿ ಎರಡನೇ ನಿವೇದನೆಯಾದ ಕೂಡಲೇ ಸರ್ವದರ್ಶನವನ್ನು ಅನುಮತಿಸಲಾಗುತ್ತದೆ.

**ರಾತ್ರಿ ಪೂಜೆ:**

ರಾತ್ರಿಯಲ್ಲಿ ದೇವರಿಗೆ ಮಾಡುವ ಪೂಜೆ. ಬೆಳಗಿನ ತೋಮಾಲ ಸೇವೆಯಂತೆಯೇ ಇರುವುದು. ಇದು ಖಚಿತವಾಗಿ ಆಲಯದ ಅಂತರ್ಭಾಗವಾಗಿದ್ದು,ಧಾರ್ಮಿಕ ಕ್ರಿಯಾ ಕಲಾಪವಿಲ್ಲದೆ-ಸಂಬಂಧಿಸದ-ವ್ಯಕ್ತಿಗಳಿಗೆ ಪ್ರವೇಶವಿರದು.

ಅರ್ಧಯಾಮ ಪೂಜೆ ಅಥವಾ ರಾತ್ರಿಪೂಜೆಯನ್ನು ನಿಶಿಪೂಜೆಯೆನ್ನುವರು. ಇದು ಆಲಯದ ಪೂಜೆಯಾಗಿದ್ದು ಪಾಯಸ, ಸಿಹಿಗಳ ನಿವೇದನೆಯುಂಟು.

**ನಂತರ ರಾತ್ರಿಯ ಸರ್ವದರ್ಶನವುಂಟು.**

**ಏಕಾಂತಸೇವೆ; (ಪವಳಿಂಪು ಸೇವೆ):**

ಇದೊಂದು ಆರ್ಜಿತ ಸೇವೆಯಾಗಿದ್ದು, ಶುಲ್ಕ ಸಹಿತವಾದ (ಆಲಯದ ಅನುಕೂಲವನ್ನು ಅವಲಂಬಿಸಿ) ದರ್ಶನಾವಕಾಶವಿರುವುದು. ಮಾರ್ಗಶಿರ ಮಾಸದ ಹೊರತು ಮಿಕ್ಕ ಮಾಸಗಳಲ್ಲಿ ಭೋಗಶ್ರೀನಿವಾಸನನ್ನು ಸಾಯಣ ಮಂಟಪವೆನ್ನುವ ಮುಖಮಂಟಪದ ರಜತ (ಈಗ ಚಿನ್ನದ ಉಯ್ಯಾಲೆ-214) ಉಯ್ಯಾಲೆಯಲ್ಲಿ ಮಲಗಿಸಿ ತೂಗಲಾಗುವುದು. ಇದನ್ನೇ ಏಕಾಂತ ಸೇವೆಯೆನ್ನುವರು. ಈ ಸಮಯದಲ್ಲಿ ಹಾಲು, ಹಣ್ಣುಗಳನ್ನು ದೇವರಿಗೆ

ಅರ್ಪಿಸಿ ಒಂದು ಭಾಗವನ್ನು ಪ್ರಸಾದವಾಗಿ ಭಕ್ತರಿಗೆ ನೀಡಲಾಗುವುದು. ಮೂಲಮೂರ್ತಿಯ ಪಾದಗಳಿಗಿರುವ ಕವಚವನ್ನು ತೆಗೆದು ಎರಡು ಚಂದನದ ಬಿಲ್ಲೆಗಳನ್ನು ದೇವರ ಪಾದದ ಬಳಿಯಿಡಲಾಗುವುದು. ಭೋಗಶ್ರೀನಿವಾಸ ದೇವರ ವಕ್ಷದ ಮೇಲೆ ಚಂದನದ ಬಿಲ್ಲೆಯ ಅರ್ಧ ಇಡಲಾಗುವುದು. ಧ್ರುವ ಮೂರ್ತಿಯ ವಕ್ಷಃಸ್ಥಳದಲ್ಲಿರುವ ಅಲರ್‌ಮೇಲ್‌ಮಂಗೈಗೆ ನಾಲ್ಕನೇ ಒಂದು ಭಾಗದ ಚಂದನದ ಬಿಲ್ಲೆಯನ್ನು ಇಟ್ಟು ಬಿಟ್ಟು, ರಾತ್ರಿ ಪೂಜೆ ಮಾಡಲೆಂದು ಬ್ರಹ್ಮನಿಗಾಗಿ ಮತ್ತೊಂದು ಕಾಲುಭಾಗದ ಬಿಲ್ಲೆಯನ್ನು ಬಿಡಲಾಗುವುದು. ದೇವರಿಗೆ ಹಾಲು, ಗೋಡಂಬಿಗಳ ನಿವೇದನೆಯಾದ ನಂತರ ತರಿಗೊಂಡವೆಂಗಮಾಂಬ ವಂಶಸ್ಥರು ತರುವ ಮುತ್ತಿನ ದಶಾವತಾರ ಚಿತ್ರದ ಆರತಿ ತಟ್ಟೆಯಲ್ಲಿ ಆರತಿ ಮಾಡಲಾಗುವುದು. ತಾಳ್ಳಪಾಕ ಅನ್ನಮಾಚಾರ್ಯರ ವಂಶದವರು ಇಲ್ಲಿ ಸಂಕೀರ್ತನವನ್ನು ಸಮರ್ಪಿಸುವರು.

ವರ್ಷದ ಹನ್ನೊಂದು ತಿಂಗಳಿನಲ್ಲಿ ಈ ಸೇವೆಯನ್ನು ಭೋಗ ಶ್ರೀನಿವಾಸಮೂರ್ತಿಗೆ ಮಾಡಿದರೆ ಮಿಕ್ಕ ಒಂದು ತಿಂಗಳು -ಧನುರ್ಮಾಸದಲ್ಲಿ-ಶ್ರೀಕೃಷ್ಣಸ್ವಾಮಿಗೆ ಈ ಸೇವೆ ನಡೆಯುವುದು.

ಈ ಸೇವೆಯ ಹೊತ್ತಿನಲ್ಲಿಯೇ ನೀರು ತುಂಬಿದ ಬೆಳ್ಳಿಯ ಬಟ್ಟಲುಗಳನ್ನು ಬ್ರಹ್ಮನು ಪೂಜೆ ಮಾಡಲಿಕ್ಕೆಂದು ಇಡಲಾಗುತ್ತದೆ. ಚಂದನ, ಅರ್ಘ್ಯಫಲ ಇಡಲಾಗುತ್ತದೆ.

ಕ್ರಿ.ಶ.1513 ಒಂದು ಶಾಸನವು ಶ್ರೀಕೃಷ್ಣದೇವರಾಯನ ಪತ್ನಿಯರಾದ ಚಿನ್ನಾಜಿದೇವಿ,ತಿರುಮಲ ದೇವಿಯರಿಬ್ಬರೂ ಈ ಸೇವೆಯಲ್ಲಿ ಹಾಲಿನ ಬಳಕೆಗಾಗಿ 374 ತೂಕದ ಎರಡು ಚಿನ್ನದ ಬಟ್ಟಲುಗಳನ್ನು ನೀಡಿದರೆಂದು ತಿಳಿಸುವುದು. ಇನ್ನೊಂದು ಶಾಸನದ ಪ್ರಕಾರ ಅರ್ಧಯಾಮ ಸೇವೆಯಲ್ಲಿ ಪಾಲೇಡು ಕುಳಂಬು-ಕಾಯಿಸಿ ಗಟ್ಟಿ ಗೊಳಿಸಿದ ಸುಗಂಧಭರಿತ ಹಾಲು-ಸಿದ್ಧ ಪಡಿಸಲು ಕೃಷ್ಣದೇವರಾಯನ ಸೇನಾಪತಿ ಓಬುಲನಾಯಕ ರಾಮನಾಯಕ 200 ಹಸುಗಳನ್ನು ಕ್ರಿ.ಶ. 1514 ರಲ್ಲಿ ನೀಡಿದನು.

ಆಲಯದಲ್ಲಿ ನಿತ್ಯವೂ ನಡೆಯುವ ಸಾಮಾನ್ಯವಾದ ಪೂಜೆ ಎಂದರೆ ಇಷ್ಟೆ. ಆದರೆ ಗುರು ಶುಕ್ರವಾರಗಳಲ್ಲಿ ಆಯಾ ದಿನಗಳ ವಿಶೇಷ ಪೂಜೆಗಾಗಿ ಎಡೆ ಮಾಡಿಕೊಡಲಾಗಿದೆ. (ಈಗ 2015 ರಲ್ಲಿ -ವಾರದುದ್ದಕ್ಕೂ ಪ್ರತಿವಾರವೂ ಒಂದೊಂದು ವಿಶೇಷ ಪೂಜೆಯುಂಟು. ಶನಿ,ಭಾನುವಾರಗಳ ಹೊರತು. ಅದರ ಪಟ್ಟಿ.)

**ಪೂಲಂಗಿಸೇವೆ:**

ಗುರುವಾರಗಳಲ್ಲಿ ಮಧ್ಯಾಹ್ನ ಪೂಜೆಯಾದ ಮೇಲೆ ದೇವರು ಪಂಚೆ ಉತ್ತರೀಯಗಳಲ್ಲಿ ಅಲಂಕಾರಗೊಂಡು ಇರುವರು. ಕಸ್ತೂರಿಯನ್ನೂ ಅತಿ ತೆಳುವಾದ ಗೆರೆಯಂತೆ ಇಟ್ಟು ಹೆಚ್ಚಿನದನ್ನು ತೆಗೆಯಲಾಗುವುದು. ಸಂಜೆಯಲ್ಲಿ ಶುದ್ಧಿಯಾದ ನಂತರ ಅಲಂಕಾರಕ್ಕಾಗಿ ಹೂಗಳನ್ನೂ ತರಲಾಗುವುದು. ಈಗ ದೇವರಿಗೆ ಸಾಧಾರಣ ಧೋತಿಯಲ್ಲಿ ಅಲಂಕಾರ. ಇದನ್ನು ಎಂದರೆ ಇತರೆಲ್ಲ ಆಭರಣಗಳನ್ನು ತೆಗೆಯುವ ಕ್ರಿಯೆಯೇ ಸಳ್ಳಿಂಪು ಅಥವಾ ಸಡಲಿಂಪು.

ಸಂಜೆಯ ಪೂಜೆ,ನೈವೇದ್ಯಗಳಾದ-ಪಾನಕ,ಹೆಸರು ಬೇಳೆಯ ಕೋಸಂಬರಿ ನೀಡಿದ ಬಳಿಕ ಸ್ವಾಮಿಯನ್ನು ಕಸೂತಿ ಹಾಕಿದ ವೆಲ್ವೆಟ್‌ನಿಂದ ಅಲಂಕರಿಸಿ,ಕಿರೀಟದಿಂದ ಪಾದದ ವರೆಗೆ ಉದ್ದವಾದ ಹಾರಗಳಿಂದ ಅಲಂಕರಿಸುವರು. ಹೂವುಗಳಿಂದಲೇ ಆದ ಈ ಅಲಂಕಾರವನ್ನು ಪೂಲಂಗಿ ಸೇವೆಯೆಂದು ಕರೆಯುವರು. ಇದು ಮೊದಲಿಗೆ ಈ ಆರ್ಜಿತ ಸೇವೆಯಾಗಿದ್ದರೂ ಈಗ ಎಲ್ಲರಿಗೂ ದರ್ಶನಾವಕಾಶವಿದ್ದು ಪೂಲಂಗಿ ಸರ್ವದರ್ಶನವೆನ್ನುವರು. ಇದಾದ ನಂತರ ದಿನ ನಿತ್ಯದಂತೆ ಏಕಾಂತಸೇವೆ ನಡೆಯುವುದು.

ಈ ಪದ್ಧತಿಯು ಯಾವಾಗ ಯಾರಿಂದ ಏಕೆ ಉಂಟಾಯಿತೆಂಬ ಬಗ್ಗೆ ಶಾಸನಗಳಿಂದ ಏನೂ ತಿಳಿದು ಬರುವುದಿಲ್ಲ. ಪ್ರಾಚೀನ ತಮಿಳು ಕಾವ್ಯ ಶಿಲಪ್ಪದಿಕಾರದಲ್ಲಿ -ಪೂವಾಡೈಯಿಲ್ ಪೊಳಿಂದು ತೋನ್ರಿಯ- ಎಂಬ ಮಾತಿದೆ. ತಮಿಳು ಪದ ಪೂವಾಡೈ ಎಂಬುದು ತೆಲುಗಿನ ಪೂಲಂಗಿ- ಕನ್ನಡದ ಹೂವಿನಂಗಿ ಎಂಬುದರ ಅನುವಾದವಷ್ಟೆ. ಹೀಗಾಗಿ ಕ್ರಿ.ಶ.ಎರಡನೆಯ ಶತಮಾನದಲ್ಲಿಯೇ ಪೂಲಂಗಿಸೇವೆ ಇದ್ದಿತು ಎಂದು ನಿರ್ಧರಿಸಬಹುದು.

ಶುಕ್ರವಾರದಲ್ಲಿ ನಡೆಯುವ ಅಭಿಷೇಕಕ್ಕೆ ಮೊದಲು ಸ್ವಾಮಿಯ ಅಲಂಕಾರಗಳನ್ನು ಬಿಚ್ಚುವಲ್ಲಿನ ಕಷ್ಟವೇ ಪ್ರಾಯಶಃ ಗುರುವಾರ ಸಂಜೆಯ ಈ ಪೂಲಂಗಿಸೇವೆಗೆ ಕಾರಣವಾಗಿರಬೇಕು.

**ಅಭಿಷೇಕ:**

ಸ್ವಾಮಿಗೆ ಶುಕ್ರವಾರಗಳಲ್ಲಿ ಮಾತ್ರ ಅಭಿಷೇಕ ಮಾಡಲಾಗುತ್ತದೆ. ಶುಕ್ರವಾರ ಬೆಳಗ್ಗೆ ಸುಪ್ರಭಾತದ ನಂತರ ತೋಮಾಲ ಸೇವೆ, ಅರ್ಚನೆಗಳು ಏಕಾಂತದಲ್ಲಿ ನಡೆಯುತ್ತಿರುವಾಗ ಅಭಿಷೇಕದ ಏರ್ಪಾಡುಗಳು-ಪಚ್ಚ ಕರ್ಪೂರವನ್ನು ಪುಡಿ ಮಾಡುವುದು, ಕೇಸರಿಯನ್ನು ಕಲೆಸುವುದು, ಪುನುಗೆಣ್ಣೆಯಿಂದ ಕಲೆಸಿದ ಚಂದನವನ್ನು ಲೇಪಿಸುವುದು, ಪುನುಗು ಸಂಗ್ರಹಿಸುವುದು-ನಡೆಯುತ್ತವೆ. ಇವುಗಳನ್ನು ತೆಗೆದುಕೊಂಡು ವಿಮಾನ ಪ್ರದಕ್ಷಿಣೆಯಲ್ಲಿ ಗರ್ಭಗೃಹದ ಪ್ರದಕ್ಷಿಣೆ ಮಾಡಲಾಗುವುದು.

ಸ್ವಾಮಿಯ ಪಾದದ ಬಳಿ ಕರ್ಪೂರ ಪುನುಗು ಬೆರೆಸಿದ ಉಂಡೆಯನ್ನು ಇರಿಸಲಾಗುವುದು. ಈ ಕಾರ್ಯಕ್ರಮ 60 ರಿಂದ 90 ನಿಮಿಷದ ಮಂತ್ರ ಸಹಿತವಾದ ಕಾರ್ಯಕ್ರಮ. ಪುರುಷಸೂಕ್ತ, ನಾರಾಯಣಸೂಕ್ತ, ಶ್ರೀಸೂಕ್ತ, ಭೂಸೂಕ್ತ, ನೀಳಾಸೂಕ್ತ ಹಾಗೂ ಪ್ರಬಂಧಗಳನ್ನು ಹಾಡಲಾಗುವುದು. ಅಭಿಷೇಕವು ಮೊದಲಿಗೆ ಶುದ್ಧೋದಕದಿಂದ ಆರಂಭವಾಗಿ ನಂತರ ಅನುಕ್ರಮವಾಗಿ, ಕ್ಷೀರ, ಚಂದನಾಭಿಷೇಕ ಮೊದಲಾದವು ನಡೆಯುವವು. ದೇವರ ವಿಗ್ರಹವನ್ನು ಶುದ್ಧಗೊಳಿಸಿದ ಕೆಂಪು ಬಣ್ಣದ ಕೇಸರಿ ಜಲವನ್ನು ದೊಡ್ಡ ದೊಡ್ಡ ಬೆಳ್ಳಿಯ ಪಾತ್ರೆಗಳಲ್ಲಿ ಸಂಗ್ರಹಿಸಲಾಗುವುದು. ನಂತರ ದೇವರ ದೇಹವನ್ನು ಒರೆಸಿ ದೇಹಾದ್ಯಂತ ಪುನುಗು ಎಣ್ಣೆಯ ಲಘು ಲೇಪನವಾಗುವುದು.

ಶುದ್ಧವಾದ ಕರ್ಪೂರದ ಸ್ವಲ್ಪ ಬಿಳಿಯ ನಾಮವನ್ನೂ ಊರ್ಧ್ವಪುಂಡ್ರವನ್ನೂ ತಿದ್ದಲು ಶ್ರೀಗಂಧದೊಡನೆಯೇ ಇಡಲಾಗುವುದು. ನಂತರ ಶ್ರೀಸೂಕ್ತ ಪಠನ ಮಾಡುತ್ತಿರುವಂತೆ ಸ್ವಾಮಿಯ ಹೃದ್ದೇಶದಲ್ಲಿ ಇರುವಂತಹ ಶ್ರೀಲಕ್ಷ್ಮಿಯ ಅಭಿಷೇಕ ಮಾಡಲಾಗುವುದು. ಈ ಆರತಿಯನ್ನು ಮುಗಿಸಿದಾಗ ಬಿಳಿಯ ನಾಮವನ್ನು ದೊಡ್ಡದೂ ಆಳವೂ ಆಗಿರುವಂತೆ ಮಾಡಲಾಗುವುದು ಮತ್ತು ದೇವರು ಪೀತಾಂಬರವನ್ನುಟ್ಟು, ಬೆಲೆಬಾಳುವ ವಜ್ರ, ವೈಡೂರ್ಯಗಳ ಆಭರಣಗಳನ್ನು ಪಡೆಯುವನು. ಭೋಗ ಶ್ರೀನಿವಾಸಮೂರ್ತಿಯು ತಿರುಮಲೆಯ ಆಲಯವನ್ನು ಸೇರಿದ ಮೇಲೆ ಅದರ ಮೊದಲ ಅಭಿಷೇಕ-ಭೋಗ ಶ್ರೀನಿವಾಸನಿಗೆ-ಶುಕ್ರವಾರವಾಗಿರಬೇಕೆಂದು ಊಹಿಸಬಹುದು. ನಂತರ ಅದೇ ಸಂಪ್ರದಾಯವಾಗಿರಬಹುದು.

ಕ್ರಿ.ಶ.1429ರಲ್ಲಿ ದೇವರಾಯನ ಕಾಲಕ್ಕೆ ಪ್ರಥಮ ಬಾರಿಗೆ ಪುನುಗು ಬೆಕ್ಕಿನ ಉಲ್ಲೇಖವಿರುವ ಶಾಸನವುಂಟು. ಕ್ರಿ.ಶ.1496 ರಂದು ಶಾಸನದ ಪ್ರಕಾರ-ಕಂದಾಡೈ ಅಪ್ಪಚ್ಚಿ ಅಣ್ಣ ಅಯ್ಯಂಗಾರ ಹೇಳುವಂತೆ ಪ್ರತಿ ಪಕ್ಷದ ಶುಕ್ರವಾರದಲ್ಲಿ ಸಹ ಪುನುಗು ಕಾಪ್ಪುವಿನ ರಕ್ಷೆಯನ್ನಿಕ್ಕಿದ. ಕ್ರಿ.ಶ.1506 ರ ಒಂದು ಶಾಸನದಂತೆ ಪುನುಗು ಕಾಪ್ಪು ಹಚ್ಚುತ್ತಿದ್ದದ್ದು ಮೂಲ ಮೂರ್ತಿಯ ಅಭಿಷೇಕದಲ್ಲಿ ಮಾತ್ರ. ಅಲರ್‌ಮೇಲ್‌ಮಂಗೈಗೆ ಅಭಿಷೇಕ ಮಾತ್ರವೇ ಆಗುತ್ತಿದ್ದಿತು. ಈಗಲೂ ಹೀಗೆಯೇ ನಡೆದಿದೆ.

ಕ್ರಿ.ಶ.1517 ರಲ್ಲಿನ ಕೃಷ್ಣದೇವರಾಯನ ಒಂದು ಶಾಸನದಿಂದ ಶುಕ್ರವಾರದ ಅಭಿಷೇಕವು ಪ್ರತಿವಾರ ಸೇವೆಯ ಒಂದು ಸಾಧಾರಣ ಅಂಶವಾಯಿತು ಎಂದು ತಿಳಿದು ಬರುತ್ತದೆ. ಈ ಶಾಸನವು ಪ್ರತಿ ಎಂಟನೇ ದಿನದಂದು ಪುನುಗು ಕಾಪ್‌ಗಾಗಿ 1000 ವರಹಗಳ ಶುಲ್ಕವನ್ನು ವಿಧಿಸುತ್ತದೆ. ಇದರಿಂದಾಗಿ ತಿರುಮಂಜನವು ವಾರಕ್ಕೆ ಒಮ್ಮೆ ಶುಕ್ರವಾರಗಳಲ್ಲಿ ನಡೆದಿತ್ತು ಎಂಬುದು ಸ್ಪಷ್ಟ.

(ಮುಂದುವರೆಯುತ್ತದೆ)

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**

**ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆ ಮಾಡುವಾಗ "ಗೋವಿಂದಾ" ಎಂದು ಸಂಬೋಧನೆ ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿಯೇ ಇರಬಹುದು.**

# ಶ್ರೀ ರಾಮಾನುಜ ಚತುಃಶ್ಲೋಕಿ

ಶ್ರೀ ರಾಮಾನುಜರ ಪರಮಾಪ್ತ ಶಿಷ್ಯರಾದ ಶ್ರೀ ಅನಂತಾಳ್ವಾರ್ ವಿರಚಿತ

ಆಂಗ್ಲ ಮೂಲ : ಪ್ರೇಮಾ ನಂದಕುಮಾರ್
ಅನುವಾದ : ಎಸ್. ವಾದಿರಾಜ



ಶ್ರೀನಿವಾಸನು ನೆಲೆಸಿರುವ ತಿರುಮಲೆಯು **"ಪುಷ್ಪವನ"** ಎಂದು ಕರೆಯಲ್ಪಡುತ್ತಿದೆ. ಇದಕ್ಕೆ ಪ್ರಮುಖ ಕಾರಣ, ಶ್ರೀರಾಮಾನುಜಾಚಾರ್ಯರ ಪರಮಾಪ್ತ ಶಿಷ್ಯರಾದ ಅನಂತಾಳ್ವಾರರು. ಸಾವಿರಾರು ವರ್ಷಗಳ ಹಿಂದೆ, ಒಮ್ಮೆ ಶ್ರೀರಾಮಾನುಜರು ತಮ್ಮ ಶಿಷ್ಯರಿಗೆ ನಮ್ಮಾಳ್ವಾರರ ಶ್ಲೋಕಗಳನ್ನು ವಿವರಿಸುತ್ತಿದ್ದ ಸಂದರ್ಭದಲ್ಲಿ, ತಮ್ಮ ಶಿಷ್ಯರನ್ನು ಕುರಿತು, ತಿರುಮಲೆಯಲ್ಲಿ ಒಂದು ಹೂದೋಟವನ್ನು ಬೆಳಸಬೇಕೆಂದೂ ಅದಕ್ಕೆ ಯಾರು ಸಿದ್ಧರಿದ್ದೀರಿ ಎಂದು ಕೇಳಿದರು. ಆಗ ಅನಂತಾಳ್ವಾರರೆಂಬ ಶಿಷ್ಯರು ಎದ್ದು ನಿಂತು ತಾವು ಆ ಕೆಲಸ ಮಾಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದರು. ಅವರ ಉತ್ತರದಿಂದ ಸಂತೋಷಗೊಂಡ ಶ್ರೀರಾಮಾನುಜರು ಅನಂತಾಳ್ವಾರರನ್ನು ಅಪ್ಪಿಕೊಂಡು ನೀನೇ ನನ್ನ ನಿಜವಾದ ಶಿಷ್ಯ ಎಂದು ಹೇಳಿ ತಮಿಳಿನಲ್ಲಿ **'ಆನ್ವಿಳ್ಳೈ'** ಎಂದರೆ ಅಂತಹಾ ಕ್ಲಿಷ್ಟವಾದ ಕೆಲಸವನ್ನು ಮಾಡುವುದಕ್ಕೆ ಸಿದ್ಧನಿರುವ ಶಿಷ್ಯನೆಂದು ಹೊಗಳಿದರು. ಗುರುಗಳಿಂದ ಅಪ್ಪಣೆ ಪಡೆದುಕೊಂಡು ತಿರುಮಲೆಗೆ ಬಂದ ಅನಂತಾಳ್ವಾರರು ಶ್ರೀನಿವಾಸನನ್ನು ಹೂಗಳಿಂದ ಅರ್ಚಿಸಿದರು. ಅಂದಿನಿಂದ ಪುಷ್ಪ ಕೈಂಕರ್ಯ ಪ್ರಾರಂಭವಾಯಿತು.





ಅನಂತಾಳ್ವಾರರು ಶ್ರೀರಂಗಪಟ್ಟಣದಲ್ಲಿ (ಆದಿರಂಗ) ಜನಿಸಿದರು. ಆವರು ಶ್ರೀರಾಮಾನುಜರಿಂದ ಎಷ್ಟು ಪ್ರಭಾವಿತರಾಗಿದ್ದರೆಂದರೆ ಶ್ರೀರಂಗ (ಅಂತ್ಯರಂಗ) ಕ್ಕೆ ಹೋದರೂ ಅವರ ತಮ್ಮ ಜೀವನದ ಬಹುಕಾಲವನ್ನು ತಿರುಮಲೆಯಲ್ಲೇ ಕಳೆದರು.

ಅವರು **'ವೆಂಕಟಾಚಲ ಇತಿಹಾಸ ಮಾಲ'** ಎಂಬ ಗ್ರಂಥವನ್ನು ಬರೆದರು. ಆ ಗ್ರಂಥದಲ್ಲಿ ತಿರುಮಲೆಯಲ್ಲಿ ನಡೆಯುವ ವಿಶೇಷ ಸೇವೆಗಳು, ಸ್ವಾಮಿಯ ಪೂಜೆಗಳು ಎಲ್ಲವನ್ನೂ ವಿವರಿಸಿದ್ದಾರೆ. ಹಾಗೇ **'ಗೋದ ಚತುಃಶ್ಲೋಕಿ'**ಯನ್ನೂ ರಚಿಸಿದರು. ಆದರೆ ಅವರಿಗೆ ರಾಮಾನುಜಾಚಾರ್ಯರ ಮೇಲಿದ್ದ ಅಪಾರವಾದ ಗುರುಭಕ್ತಿಯಿಂದಾಗಿ ಅವರು ಶ್ರೀರಾಮಾನುಜ ಚತುಃಶ್ಲೋಕಿಯನ್ನು ರಚಿಸಿದರು.

**ಆ ಶ್ಲೋಕಗಳು ಹೀಗಿವೆ.**

**ಅಖಿಲಾತ್ಮ ಗುಣಾವಾಸಂ ಮಜ್ಞಾನ ತಿಮಿರಾಪಹಂ।**
**ಅಶ್ರಿತಾನಾಂ ಸುಶರಣಂ ವಂದೇ ಅನಂತಾರ್ಯ ದೇಶಿಕಂ॥**
**ಶ್ರೀಮದ್ ರಾಮಾನುಜಾಚಾರ್ಯ ಶ್ರೀಪಾದಾಂಭೋರುಹದ್ವಯಂ।**
**ಸದುತ್ತಮಾಂಗ ಸಂದಾರ್ಯಂ ಅನಂತಾರ್ಯಾಮಹಂ ಭಜೇ॥**





ನಾನು ಶ್ರೀಅನಂತಾಚಾರ್ಯರ ಪಾದ ಕಮಲಗಳಿಗೆ ನಮಸ್ಕರಿಸುತ್ತೇನೆ. ಏಕೆಂದರೆ ಮನಸ್ಸಿನಲ್ಲಿ ಕವಿದಿರುವ ಕತ್ತಲನ್ನು, ಅಜ್ಞಾನವನ್ನು ತೊಲಗಿಸಿ ಜ್ಞಾನವನ್ನು ಕರುಣಿಸುತ್ತಾರೆ.

ನಾನು ಶ್ರೀಅನಂತಾಚಾರ್ಯರ ಚರಣಗಳಿಗೆ ನಮಸ್ಕರಿಸುತ್ತೇನೆ ಏಕೆಂದರೆ ಅವರು ಶ್ರೀರಾಮಾನುಜಾಚಾರ್ಯರ ಪಾದಾರವಿಂದಗಳಲ್ಲಿ ನಮಿಸಿ ಅವರ ಪ್ರಿಯ ಶಿಷ್ಯರಾಗಿದ್ದಾರೆ. ಅಂತಹಾ ಚರಣಗಳಿಗೆ ಎಲ್ಲಾ ಭಕ್ತರೂ ವಂದಿಸುತ್ತಿದ್ದಾರೆ. ಕೆಳಗಿನ ಶ್ಲೋಕಗಳು ಚತುಃಶ್ಲೋಕಿಯಿಂದ ತೆಗೆದುಕೊಳ್ಳಲಾಗಿದೆ. ಪ್ರತಿಯೊಂದು ಶ್ಲೋಕದಲ್ಲೂ ಅನಂತಾಳ್ವಾರರು ಮತ್ತು ಶ್ರೀರಾಮಾನುಜಾಚಾರ್ಯ ಗುರುಶಿಷ್ಯರ ಅನುಬಂಧವನ್ನು ತೋರುವ ಕೈಗನ್ನಡಿಯಾಗಿದೆ.

**ಅನಿಶಂ ಭಜತಾಂ ಅನನ್ಯಭಾಜಾಂ**
**ಚರಣಾಂಭೋರುಹಮಾದರೇಣ ಪುಂಸಾಂ।**
**ವಿತರನ್ ನಿಯತಂ ವಿಭೂತಿಮಿಷ್ಟಾಂ**
**ಜಯ ರಾಮಾನುಜ ರಂಗಧಾಮ್ನಿ ನಿತ್ಯಂ॥**



ಶ್ರೀರಂಗ ಎನ್ನುವ ಭೂಲೋಕ ವೈಕುಂಠವು ಶ್ರೀವೈಷ್ಣವರಿಗೆ ಅತ್ಯಂತ ಪ್ರಮುಖವಾದ, ಪವಿತ್ರವಾದ ಸ್ಥಳವಾಗಿದೆ. ಅಂತಹಾ ಶ್ರೀರಂಗಂನಲ್ಲಿ ನೆಲೆಸಿರುವ ಶ್ರೀರಾಮಾನುಜರು ತಮ್ಮ ಪಾದಗಳಿಗೆ ಶರಣಾದವರನ್ನು ಸದಾ ವಾತ್ಸಲ್ಯದಿಂದ ಸಲಹುತ್ತಾರೆ. ಅಂತಹಾ ಶ್ರೀರಾಮಾನುಜರಿಗೆ ಜಯ ಜಯ!

**ಭುವಿನೋವಿಮತಾನ್ತ್ವದೀಯ ಸೂಕ್ತಿಃ ।**
**ಕುಲಿಶೀಭೂಯ ಕುದೃಷ್ಟಿಭಿಸ್ಸಮೇತಾನ್।**
**ಶಕಲೀಕುರುತೇ ವಿಪಕ್ಷದೀಡ್ಯಾ**
**ಜಯ ರಾಮಾನುಜ। ಶೇಷಶೈಲ ಶೃಂಗೇ॥**



**'ಶೇಷ ಶೈಲ ಶೃಂಗೇ'** ಎಂದರೆ ತಿರುಮಲೆ. ಶ್ರೀರಾಮಾನುಜರು ತಿರುಮಲೆಯಲ್ಲಿ ನೆಲೆಸಿ ತಮ್ಮ ಬುದ್ಧಿ ಕುಶಲತೆಯಿಂದ ಅನೇಕರ ಅಜ್ಞಾನಾಂಧಕಾರವನ್ನು ತೊಲಗಿಸಿ ಜ್ಞಾನಜ್ಯೋತಿಯನ್ನು ಬೆಳಗಿಸಿದಂತಹಾ ಗುರುಗಳಿಗೆ ಜಯ ಜಯ.





ಶ್ರುತಿಷು ಸ್ಮೃತಿಷು ಪ್ರಮಾಣತತ್ತ್ವಂ
ಕೃಪಯಾಲೋಕ್ಯ ವಿಶುದ್ಧಯಾ ಹಿ ಬುದ್ಧ್ಯಾ।
ಅಕೃಥಾಸ್ಸ್ವತ ಏವ ಭಾಷ್ಯ ರತ್ನಂ
ಜಯ ರಾಮಾನುಜ। ಹಸ್ತಿಧಾಮ್ನಿ ನಿತ್ಯಂ॥

**'ಹಸ್ತಿಗಿರಿ'** ಎಂದು ಕರೆಯಲ್ಪಡುವ, ಶ್ರೀವರದರಾಜ ಸ್ವಾಮಿಯು ನೆಲೆಗೊಂಡಿರುವ ಕಾಂಚಿಪುರವು ಶ್ರೀರಾಮಾನುಜಾಚಾರ್ಯರ ಜನ್ಮಸ್ಥಳಕ್ಕೆ ಬಹಳ ಸಮೀಪದಲ್ಲಿದೆ. ಅಂತಹಾ ಪವಿತ್ರ ಕ್ಷೇತ್ರವಾದ ಕಾಂಚೀಪುರದಲ್ಲಿ ನೆಲೆಸಿ ಶೃತಿ, ಸ್ಮೃತಿಗಳನ್ನು ಮೊಸರಿನಿಂದ ಬೆಣ್ಣೆಯನ್ನು ಕಡೆಯುವಂತೆ ಕಡೆದು ಅವುಗಳ ಸಾರವನ್ನು ನಮಗೆಲ್ಲಾ ಉಣಬಡಿಸಿ "ಭಾಷ್ಯರತ್ನ" ರೆಂದೇ ಖ್ಯಾತಿ ಗಳಿಸಿದ ಶ್ರೀರಾಮಾನುಜರಿಗೆ ಜಯ ಜಯ.



ಜಯ ಮಾಯಿಮತಾಂಧಕಾರಭಾನೋ
ಜಯ ಬಾಹ್ಯಪ್ರಮುಖಾಟವೀಕೃಶಾನೋ।
ಜಯ ಸಂಶ್ರಿತ ಸಿಂಧುಶೀತಭಾನೋ
ಜಯ ರಾಮಾನುಜ। ಯಾದವಾದ್ರಿ ಶೃಂಗೇ॥

**'ತಿರುನಾರಾಯಣಪುರಂ'** ಎಂದು ಕರೆಯಲ್ಪಡುವ, ಯಾದಾವಾದ್ರಿ ಪರ್ವತದ ಸಾಣುವಿನಲ್ಲಿರುವ ಮೇಲುಕೋಟೆಯಂತಹಾ ಪವಿತ್ರ ಸ್ಥಳದಲ್ಲಿ ನೆಲೆಸಿ ತಮ್ಮ ಶಿಷ್ಯರ ಮನಸ್ಸಿನಲ್ಲಿ ಕಾಳ್ಗಿಚ್ಚಿನಂತೆ ಸುಳಿಯುವ ಎಲ್ಲಾ ಭಯಗಳನ್ನು ದೂರ ಮಾಡಿ ಅವರ ಮನಸ್ಸಿಗೆ ಹಿತವನ್ನು, ತಂಪನ್ನು ಉಂಟು ಮಾಡುವ ಶ್ರೀರಾಮಾನುಜರಿಗೆ ಜಯ ಜಯ।



**ಫಲಶ್ರುತಿ :**

ರಾಮಾನುಜ ಚತುಃಶ್ಲೋಕೀಂ ಯಃ ಪಠೇನ್ನಿಯತಃ ಸದಾ।
ಪ್ರ್ಯಾಪ್ನುಯಾತ್ ಪರಮಾಂ ಭಕ್ತಿಂ ಯತಿರಾಜಪದಾಬ್ಜಯೋಃ॥

ಯಾರು ಈ ಚತುಃಶ್ಲೋಕಿಯನ್ನು ಪ್ರತಿನಿತ್ಯ ಪಠಿಸುವರೋ ಅವರಿಗೆ ಯತಿವರ್ಯರಾದ ಶ್ರೀರಾಮಾನುಜರು ಜ್ಞಾನ, ಭಕ್ತಿ ವೈರಾಗ್ಯವನ್ನು ಕರುಣಿಸುತ್ತಾರೆ.

ಇತಿ ಶ್ರೀರಾಮಾನುಜ ಚತುಃಶ್ಲೋಕಿ ಸಂಪೂರ್ಣಂ॥



ತಿರುಮಲೆಯಲ್ಲಿ ಶ್ರೀ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಯವರಿಗೆ 26-02-2026 ರಿಂದ 02-03-2026 ರ ವರೆಗೆ ಅತ್ಯಂತ ವೈಭವವಾಗಿ ವಾರ್ಷಿಕ ತೆಪ್ಪೋತ್ಸವಗಳು ನಡೆಯಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು, ರವರು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ರವಿಚಂದ್ರ, ಐ.ಎ.ಎಸ್., ಮತ್ತು ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ಮತ್ತು ಮುಖ್ಯ ಜಾಗೃತ ಮತ್ತು ಭದ್ರತಾಧಿಕಾರಿ ಶ್ರೀ ಕೆ.ವಿ. ಮುರಳೀಕೃಷ್ಣ ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು.



06-03-2026 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ತಿ.ತಿ.ದೇ., ಪೂರ್ಣ ಕಾರ್ಯನಿರ್ವಹಣಾಧಿಕಾರಿಯಾಗಿ ಮತ್ತು ತಿ.ತಿ.ದೇ.,ಆಡಳಿತ ಮಂಡಳಿಯ ಎಕ್ಸ್ ಅಫಿಷಿಯೋ ಸದಸ್ಯರಾಗಿ ಶ್ರೀ ಎಂ. ರವಿಚಂದ್ರ, ಐ.ಎ.ಎಸ್., ರವರಿಗೆ ಪ್ರಮಾಣ ಸ್ವೀಕಾರ ಮಾಡಿಸುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯಚೌದರಿ ಐ.ಆರ್.ಎಸ್., ರವರು



01-03-2026 ರಂದು ತಿರುಮಲೆ ದರ್ಶನಾರ್ಥ ತಿರುಮಲೆಗೆ ಆಗಮಿಸಿದ ಭಾರತದ ಸುಪ್ರಿಂಕೋರ್ಟ್ ಪ್ರಧಾನ ನ್ಯಾಯಮೂರ್ತಿ ಶ್ರೀ. ಸೂರ್ಯಕಾಂತ್ ಮತ್ತು ಆಂಧ್ರಪ್ರದೇಶದ ಹೈಕೋರ್ಟ್ ಪ್ರಧಾನ ನ್ಯಾಯ ಮೂರ್ತಿ ಶ್ರೀ. ಧೀರಜ್ ಸಿಂಗ್ ಠಾಕೂರ್ ರವರಿಗೆ ರಂಗನಾಯಕ ಮಂಟಪದಲ್ಲಿ ಸ್ವಾಮಿಯವರ ಚಿತ್ರಪಟ ಮತ್ತು ತೀರ್ಥ ಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ರವಿಚಂದ್ರ ಐ.ಎ.ಎಸ್., ಮತ್ತು ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್.ವೆಂಕಯ್ಯಚೌದರಿ ಐ.ಆರ್.ಎಸ್., ರವರು



28-02-2026 ರಂದು ತಿರುಮಲೆ ಅನ್ನಮಯ್ಯ ಭವನದಲ್ಲಿ ತಿ.ತಿ.ದೇ., ಶ್ರೀ ಪರಾಭವ ನಾಮ ಸಂವತ್ಸರ (2026-27) ಪಂಚಾಂಗವನ್ನು ಆವಿಷ್ಕರಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ರವಿಚಂದ್ರ, ಐ.ಎ.ಎಸ್., ಮತ್ತು ಇತರ ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು ಪಾಲ್ಗೊಂಡರು.



22-02-2026 ರಂದು ತಿರುಮಲೆಯಲ್ಲಿರುವ ಅನಂತಾಳ್ವಾರ್ ತೋಟ (ಪುರಿಶೈವಾರಿ ತೋಟ) ದಲ್ಲಿ ನಡೆದ ಶ್ರೀ ಅನಂತಾಳ್ವಾರ್ 972 ನೇ ಅವತಾರ ಮಹೋತ್ಸವ ಸಂದರ್ಭವಾಗಿ ಪ್ರಸಂಗ ನೀಡುತ್ತಿರುವ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಡಾ|| ಎ. ಶರತ್, ನಿವೃತ್ತ ಐ.ಎ.ಎಸ್., (ವಿದ್ಯೆ ಮತ್ತು ವೈದ್ಯ) ರವರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಶ್ರೀ ಶ್ರೀ ಶ್ರೀ ಪೆದ್ದಜೀಯರ್ ಮತ್ತು ಶ್ರೀ ಶ್ರೀ ಶ್ರೀ ಚಿನ್ನ ಜೀಯರ್ ಸ್ವಾಮಿಗಳು ಮತ್ತು ಇತರ ಅರ್ಚಕರು.

# ಸಿಂಹಾಚಲ

ವಿ. ನಾಗೇಂದ್ರ ಪ್ರಸಾದ್
98454 00816

ವಿಶಾಖಪಟ್ಟಣದ ಮಹಾನಗರದಿಂದ 17 ಕಿ.ಮೀ ದೂರದಲ್ಲಿ ವರಾಹನರಸಿಂಹ ಲಿಂಗರೂಪದಲ್ಲಿ ಸ್ಥಿತನಾಗಿದ್ದಾನೆ. ಆಂಧ್ರಪ್ರದೇಶದಲ್ಲಿ 32 ನರಸಿಂಹ ದೇವಾಲಯಗಳಿದ್ದು ಅವುಗಳಲ್ಲಿ ಅಹೋಬಿಲ ಹಾಗೂ ಸಿಂಹಾಚಲ ಅತ್ಯಂತ ಪ್ರಸಿದ್ಧವಾದವುಗಳು. ಕೃತಯುಗದಲ್ಲಿ ಪ್ರಹ್ಲಾದ ಸಮುದ್ರದಲ್ಲಿ ಮುಳುಗಿದ್ದ ಲಿಂಗರೂಪಿ ವರಾಹ ನರಸಿಂಹನನ್ನು ಪ್ರತಿಷ್ಠಾಪಿಸಿದನು. (ನರಸಿಂಹ ಪುರಾಣ ಇದನ್ನು ನಿರೂಪಿಸುತ್ತದೆ) ತ್ರೇತಾಯುಗದಲ್ಲಿ ಚಂದ್ರವಂಶದಲ್ಲಿ ಬಂದ ಪುರೂರವ ಹಾಗೂ ಊರ್ವಶಿ ಗಗನ ಮಾರ್ಗದಲ್ಲಿ ಸಿಂಹಾಚಲವನ್ನು ಹಾದು ಹೋಗುತ್ತಿದ್ದಾಗ, ರಥ ಕೆಳಗೆ ಜಗ್ಗಿದ ಹಾಗೆ ಆಗಿ ರಥ ಬಲವಂತವಾಗಿ ಸಿಂಹಾಚಲದಲ್ಲಿ ಇಳಿಯಿತು. ಏನೆಂದು ನೋಡಿದಾಗ ದೇವಸ್ಥಾನವೆಲ್ಲವೂ ಶಿಥಿಲವಾಗಿ ಲಿಂಗವು ಮಣ್ಣಿನಲ್ಲಿ ಹುಗಿದು ಹೋಗಿತ್ತು. ಪುರೂರವ ಮಣ್ಣೆಲ್ಲಾ ತೆಗೆದು ಸ್ವಚ್ಛ ಮಾಡಿದಾಗ ಲಿಂಗ ಕಾಣಿಸಿತು, ಆದರೆ ಎಷ್ಟು ಹುಡುಕಿದರೂ ಪಾದ ಸಿಗಲಿಲ್ಲ, ನನ್ನನ್ನು ಇದೇ ರೂಪದಲ್ಲಿ ಆರಾಧನೆ ಮಾಡು ಎಂದು ಅಶರೀರವಾಣಿಯಾಯಿತು. "ನನ್ನ ಲಿಂಗ ರೂಪವನ್ನು ಗಂಧದಿಂದ ಮುಚ್ಚಬೇಕೆಂದು ಅದನ್ನು ಪ್ರತಿ ಅಕ್ಷಯ ತೃತೀಯದಂದು ನಿರ್ಮಾಲ್ಯ ಗಂಧ ತೆಗೆದು ಬೇರೆ ಗಂಧ ಹಚ್ಚಬೇಕೆಂದು" ಊರ್ವಶಿಗೆ ಸ್ವಪ್ನವಾಯಿತು. (ಇಂದಿಗೂ ಕೂಡ ಈ ಪದ್ಧತಿ ಅಕ್ಷರಶಃ ನಡೆದುಕೊಂಡು ಬರುತ್ತಿದೆ) ಕೂಡಲೆ ರಾಜ ಪುರೂರವ ಮಂದಿರವನ್ನು ಪುನರ್ನಿರ್ಮಾಣ ಮಾಡಿದನು ಅಕ್ಷಯ ತೃತೀಯದಂದು ಗಂಧಾನುಲೇಪನವನ್ನು ಮಾಡಿ ಪೂಜಿಸಿದನು. ದ್ವಾಪರಯುಗದಲ್ಲಿ ಬಲರಾಮ ದೇವರು ಈ ಕ್ಷೇತ್ರಕ್ಕೆ ಬಂದಿದ್ದರೆಂದು ಭಾಗವತದಲ್ಲಿ ನಿರೂಪಿತವಾಗಿದೆ.

ಲಿಂಗರೂಪದಲ್ಲಿರುವ ಪರಮಾತ್ಮನ ಗರ್ಭಗುಡಿಗೆ 'ಪ್ರಹ್ಲಾದ ಮಂಟಪ' ಎಂದು ಹೆಸರು. ವರಾಹನರಸಿಂಹ ಎಂಬ ಹೆಸರು ಬರಲು ಕಾರಣ, ಲಿಂಗವು ನಾಲ್ಕು ಅಡಿ ಎತ್ತರವಿದ್ದು ಮೇಲಿನ ಭಾಗ ವರಾಹ ತಲೆಯ ಆಕಾರ ಹೋಲುತ್ತಿದ್ದು ಮಧ್ಯಭಾಗ ಮನುಷ್ಯನ ಎದೆಯ ಆಕಾರ ಹೋಲಿದರೆ, ಕೆಳಗಿನ ಭಾಗ ಸಿಂಹದ ಬಾಲದ ಆಕಾರದಲ್ಲಿ ತೋರುತ್ತದೆ. ಇದಕ್ಕೆ ಸ್ಥಳೀಯರು ತ್ರಿಭಂಗಿ ಆಕೃತಿ (ಮೂರು ಕಡೆ ಬಾಗಿರುವುದು) ಎನ್ನುತ್ತಾರೆ. ಪರಮಾತ್ಮ ಶ್ರೀ ಭೂಸಮೇತನಾಗಿ ಇದ್ದಾನೆ. ಪರಮಾತ್ಮನ ಶಿರಕ್ಕೆ ಬಂಗಾರದ ಕಿರೀಟ, ನೊಸಲಿಗೆ ರತ್ನ ಖಚಿತ ನಾಮ, ಹಾಗೂ ಕೈಗಳಿಗೆ 100 ತೊಲೆ ಭಾರದ ಬಂಗಾರದ ಕಡಗ ಧರಿಸಿದ್ದಾನೆ.

ಸ್ಥಳೀಯ ಅರ್ಚಕರ ಪ್ರಕಾರ ನರಸಿಂಹಪುರಾಣದಲ್ಲಿ ನರಸಿಂಹ ಸಮುದ್ರದಲ್ಲಿ ಮುಳುಗಿದ್ದ, ಸಮುದ್ರದಿಂದ ಮೇಲೆತ್ತಿ ಪ್ರತಿಷ್ಠಾಪಿಸಲು ಸೂಚಿಸಿದಾಗ, ಅದರಂತೆ ಪ್ರಹ್ಲಾದ ಸಮುದ್ರದಲ್ಲಿ ಮುಳುಗಿದ್ದ ಲಿಂಗರೂಪದಲ್ಲಿರುವ ವರಾಹನರಸಿಂಹವನ್ನು ಪ್ರತಿಷ್ಠಾಪಿಸಿದನು ಎಂದು ಹೇಳುತ್ತಾರೆ. ವಿಶೇಷವೇನೆಂದರೆ ಲಿಂಗ ರೂಪದ ವಿಗ್ರಹವನ್ನು ಚಂದನದಿಂದ ಮುಚ್ಚಿರುತ್ತಾರೆ ಅಕ್ಷಯ ತೃತೀಯ ದಿನದಂದು ಮಾತ್ರ ಚಂದನವನ್ನು ತೆಗೆದು ವಿಶ್ವರೂಪ ದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾರೆ. ಅಂದು ಸಾಗರೋಪೇತವಾಗಿ ಭಕ್ತರು ಬಂದು ಅಪರೂಪದ ದರ್ಶನವನ್ನು ಪಡೆಯುತ್ತಾರೆ.

ದೇವಸ್ಥಾನದ ವಾಸ್ತುವಿನ ಬಗ್ಗೆ ಹೇಳುವುದಾದರೆ, ಕಳಿಂಗ ಚೋಳ ಹಾಗೂ ಚಾಲುಕ್ಯರ ಶೈಲಿಯಲ್ಲಿದೆ. ರಾಜಗೋಪುರ 5 ಅಂತಸ್ತಿನಿಂದ ಕೂಡಿದೆ. ಗೋಪುರದ ಸುತ್ತ ಅಸಂಖ್ಯಾತ ನರಸಿಂಹ ವಿಗ್ರಹಗಳಿವೆ. ಆದರೆ ಅದರ ಮುಖ ಭಿನ್ನ





ವಾಗಿದೆ (ದೇವಸ್ಥಾನ ಆಕ್ರಮಣಕ್ಕೆ ಒಳಗಾಗಿದೆ ಎಂಬುದರ ಸೂಚನೆ) ಗೋಪುರದ ಮೂರು ಕಡೆಗಳ ಸ್ವಲ್ಪ ಎತ್ತರದಲ್ಲಿ ವರಾಹ, ನರಸಿಂಹ ಹಾಗೂ ತ್ರಿವಿಕ್ರಮ ದೇವರಿದ್ದಾರೆ. ಇವುಗಳಿಗೆ ಯಾವುದೇ ಹಾನಿಯಾಗಿಲ್ಲ. ನಾವು ಪುರಿಯ ಜಗನ್ನಾಥನ ಗೋಪುರದ ಸುತ್ತಲೂ ಇದೇ ರೀತಿಯಾದ ವಿಗ್ರಹಗಳನ್ನು ನೋಡಬಹುದು. ದೇವಸ್ಥಾನವನ್ನು ತಲುಪಲು ಬೆಟ್ಟವನ್ನು ಕಾಲು ನಡಿಗೆಯಿಂದ ಏರಬಹುದು (1000 ಮೆಟ್ಟಲು) ಅಥವಾ ವಾಹನದ ಮೂಲಕವೂ ಬರಬಹುದು. ದೇವಸ್ಥಾನದ ಒಳಗೆ ಹಾಗೂ ಹೊರಗೆ ಏನೇನು ಮಂದಿರಗಳಿವೆ ಎಂಬುದನ್ನು ತಿಳಿಯೋಣ.

### ಕಪ್ಪಸ್ಥಂಬನಂ

ವರಾಹನರಸಿಂಹರೂಪಿ ಲಿಂಗವಿಗ್ರಹವನ್ನು ದರ್ಶನ ಮಾಡುವ ಮೊದಲು ಬಲಕ್ಕೆ ಒಂದು ಕಂಭವಿದೆ ಇದಕ್ಕೆ **'ಕಪ್ಪಸ್ಥಂಭ'** ಎನ್ನುತ್ತಾರೆ. ಈ ಕಂಭದ ಕೆಳಗೆ ದಶಾವತಾರದ ಕೆತ್ತನೆ ಹಾಗೂ ಸಂತಾನಗೋಪಾಲಕೃಷ್ಣನ ಕೆತ್ತನೆಗಳು ಇವೆ. ಈ ಕಂಭವನ್ನು ಆಲಿಂಗಿಸಿಕೊಂಡು ನಮ್ಮ ಇಷ್ಟಾರ್ಥಗಳನ್ನು ಪಡೆಯಬಹುದು. ವಿಶೇಷವಾಗಿ ಸಂತಾನ ಬಯಸುವವರು ಹೆಚ್ಚು ಇಲ್ಲಿ ಬಂದು ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ.

ಹೊರ ಆವರಣದಲ್ಲಿ 2 ಸಿಂಹವಲ್ಲಿ ತಾಯಾರ್ (ಮಹಾಲಕ್ಷ್ಮೀ ) ಗುಡಿಯಿದೆ. ಗುಡಿಯ ಹೊರ ಪ್ರಾಕಾರದಲ್ಲಿ ಕಾಶಿ ವಿಶ್ವೇಶ್ವರನ ಸನ್ನಿಧಿಯಿದೆ. ಇಲ್ಲಿನ ಲಿಂಗ ಕಾಶಿಯ ಪಡಿಯಚ್ಚು, ಕಾಶಿಗೆ ಹೋಗಿ ರುದ್ರಾಭಿಷೇಕ ಮಾಡಲಾಗದವರು ಇಲ್ಲಿ ಯಾವುದೇ ಗಲಾಟೆಯಿಲ್ಲದೆ ಭಕ್ತಿಯಿಂದ ರುದ್ರಾಭಿಷೇಕ ತಾವೇ ಮಾಡಬಹುದು.

### ಶಿಲಾಶಾಸನಗಳು

ಮೂಲವಿಗ್ರಹಗಳನ್ನು ದರ್ಶನ ಮಾಡಿ ಹೊರಬರುತ್ತಿದ್ದಂತೆ ಮಹಾಲಕ್ಷ್ಮಿ ಗುಡಿಯಿದೆ. ಅದರ ಎದುರುಗಡೆ ಕಂಭಗಳಿವೆ ಅವುಗಳಲ್ಲಿ ಮೂರುಕಂಭದ ಕೆಳ ಭಾಗದ ಶಿಲೆಗಳಲ್ಲಿ ಶಿಲಾಶಾಸನಗಳಿವೆ. ಇವು ಶ್ರೀಶಂಕರಾಚಾರ್ಯರಿಗೆ, ಶ್ರೀ ರಾಮಾನುಜಾಚಾರ್ಯರಿಗೆ ಹಾಗೂ ಶ್ರೀನರಹರಿತೀರ್ಥರಿಗೆ, ಸಂಬಂಧಪಟ್ಟಂತೆ ಶಿಲಾಶಾಸನಗಳು ತೆಲುಗು ಲಿಪಿಯಲ್ಲಿದೆ. ಇವುಗಳಲ್ಲಿ ಯಾವ ಕಂಭದಲ್ಲಿ ಯಾವ ಆಚಾರ್ಯರ ಶಾಸನವಿದೆ ಎನ್ನುವುದನ್ನು ಅಲ್ಲಿನ ಅರ್ಚಕರನ್ನು ಕೇಳಿ ತಿಳಿದುಕೊಳ್ಳಬಹುದು.

### ವೀರಹನುಮಂತ ದೇವರು

ಸಿಂಹಾಚಲವನ್ನು ಮೆಟ್ಟಿಲಿನ ಮೂಲಕ ಏರಿಕೊಂಡು ಸುಮಾರು 750 ಮೆಟ್ಟಿಲು ಹತ್ತಿದಾಗ ಸಿಗುವುದೇ ವೀರ ಹನುಮಂತ ದೇವರು. ಎಡಗೈಲಿ ಕತ್ತಿ ಹಿಡಿದಿರುವುದು ಈ ವಿಗ್ರಹದ ವಿಶೇಷ.

ಪರಮಾತ್ಮನನ್ನು ದರ್ಶನ ಮಾಡುವವರು ವೀರಹನುಮನನ್ನು ದರ್ಶನ ಮಾಡಿಕೊಂಡೇ ಹೋಗುತ್ತಾರೆ. ಈ ವಿಗ್ರಹವನ್ನು ಶ್ರೀಮಧ್ವಾಚಾರ್ಯರ ಶಿಷ್ಯರಾದ ಶ್ರೀನರಹರಿತೀರ್ಥರು ಪ್ರತಿಷ್ಠಾಪಿಸಿದರು ಎಂದು ದಾಖಲೆಗಳು ತಿಳಿಸುತ್ತವೆ. ಈ ದೇವಸ್ಥಾನ ಉತ್ತರಾದಿ ಮಠದ ಆಡಳಿತಕ್ಕೆ ಒಳಪಟ್ಟು ಪೂಜಾ ಕೈಂಕರ್ಯಗಳು ತಂತ್ರಸಾರಾಗಮ ಪ್ರಕಾರ ಪೂಜೆ ನಡೆಯುತ್ತದೆ.

### ಕಾಶಿ ವಿಶ್ವೇಶ್ವರನ ಸನ್ನಿಧಿ

ದೇವಸ್ಥಾನದ ಹೊರ ಆವರಣದಲ್ಲಿ ರುದ್ರದೇವರ ಗುಡಿಯಿದೆ. ಇದರ ವಿಶೇಷವೇನೆಂದರೆ, ಕಾಶಿಯಲ್ಲಿ ಲಿಂಗ ಹೇಗಿದೆಯೋ ಅದೇ ರೀತಿಯಲ್ಲಿ ಇದೆ ಹಾಗೂ ಅಲ್ಲಿಗೆ ಹೋಗಿ ರುದ್ರಾಭಿಷೇಕ ಅಶಕ್ತರಾದವರು ಇಲ್ಲಿ ಅಭಿಷೇಕ ತಾವೇ ಸ್ವತಃ ಮಾಡಬಹುದು. ಈ ಕಾರಣದಿಂದ ಹರಿಹರ ಕ್ಷೇತ್ರ ಎನಿಸಿದೆ.

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

| | |
|---|---|
| ಶ್ರೀ ಶ್ರೀನಿವಾಸ | ಗೋವಿಂದಾ |
| ಶ್ರೀ ವೆಂಕಟೇಶ | ಗೋವಿಂದಾ |
| ಭಕ್ತವತ್ಸಲ | ಗೋವಿಂದಾ |
| ಭಾಗವತಪ್ರಿಯ | ಗೋವಿಂದಾ |
| ನಿತ್ಯನಿರ್ಮಲ | ಗೋವಿಂದಾ |
| ನೀಲಮೇಘಶ್ಯಾಮ | ಗೋವಿಂದಾ |
| ಪುರಾಣಪುರುಷ | ಗೋವಿಂದಾ |
| ಪುಂಡರೀಕಾಕ್ಷ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ನಂದನಂದನ | ಗೋವಿಂದಾ |
| ನವನೀತಚೋರ | ಗೋವಿಂದಾ |
| ಪಶುಪಾಲಕ ಶ್ರೀ | ಗೋವಿಂದಾ |
| ಪಾಪವಿಮೋಚನ | ಗೋವಿಂದಾ |
| ದುಷ್ಟಸಂಹಾರ | ಗೋವಿಂದಾ |
| ದುರಿತನಿವಾರಣ | ಗೋವಿಂದಾ |
| ಶಿಷ್ಟಪರಿಪಾಲಕ | ಗೋವಿಂದಾ |
| ಕಷ್ಟನಿವಾರಣ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಜ್ರಮಕುಟಧರ | ಗೋವಿಂದಾ |
| ವರಾಹಮೂರ್ತಿ | ಗೋವಿಂದಾ |
| ಗೋಪೀಜನಲೋಲ | ಗೋವಿಂದಾ |
| ಗೋವರ್ಧನೋದ್ಧಾರ | ಗೋವಿಂದಾ |
| ದಶರಥನಂದನ | ಗೋವಿಂದಾ |
| ದಶಮುಖಮರ್ದನ | ಗೋವಿಂದಾ |
| ಪಕ್ಷಿವಾಹನ | ಗೋವಿಂದಾ |
| ಪಾಂಡವಪ್ರಿಯ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಮತ್ಸ್ಯಕೂರ್ಮ | ಗೋವಿಂದಾ |
| ಮಧುಸೂದನ ಹರಿ | ಗೋವಿಂದಾ |
| ವರಾಹ ನರಸಿಂಹ | ಗೋವಿಂದಾ |
| ವಾಮನ ಭೃಗುರಾಮ | ಗೋವಿಂದಾ |
| ಬಲರಾಮಾನುಜ | ಗೋವಿಂದಾ |
| ಬೌದ್ಧಕಲ್ಕಿಧರ | ಗೋವಿಂದಾ |
| ವೇಣುಗಾನಪ್ರಿಯ | ಗೋವಿಂದಾ |
| ವೆಂಕಟರಮಣ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಸೀತಾನಾಯಕ | ಗೋವಿಂದಾ |
| ಶ್ರಿತಪರಿಪಾಲಕ | ಗೋವಿಂದಾ |
| ದರಿದ್ರಜನಪೋಷಕ | ಗೋವಿಂದಾ |
| ಧರ್ಮಸಂಸ್ಥಾಪಕ | ಗೋವಿಂದಾ |
| ಅನಾಥರಕ್ಷಕ | ಗೋವಿಂದಾ |
| ಆಪತ್‌ಬಾಂಧವ | ಗೋವಿಂದಾ |

| | |
|---|---|
| ಶರಣಾಗತವತ್ಸಲ | ಗೋವಿಂದಾ |
| ಕರುಣಾಸಾಗರ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಕಮಲದಳಾಕ್ಷ | ಗೋವಿಂದಾ |
| ಕಾಮಿತಫಲದಾ | ಗೋವಿಂದಾ |
| ಪಾಪವಿನಾಶಕ | ಗೋವಿಂದಾ |
| ಪಾಹಿಮುರಾರೆ | ಗೋವಿಂದಾ |
| ಶ್ರೀಮುದ್ರಾಂಕಿತ | ಗೋವಿಂದಾ |
| ಶ್ರೀವತ್ಸಾಂಕಿತ | ಗೋವಿಂದಾ |
| ಧರಣೀನಾಯಕ | ಗೋವಿಂದಾ |
| ದಿನಕರತೇಜ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಪದ್ಮಾವತಿಪ್ರಿಯ | ಗೋವಿಂದಾ |
| ಪ್ರಸನ್ನಮೂರ್ತಿ | ಗೋವಿಂದಾ |
| ಅಭಯಹಸ್ತಪ್ರದರ್ಶನ | ಗೋವಿಂದಾ |
| ಮತ್ಸ್ಯಾವತಾರ | ಗೋವಿಂದಾ |
| ಶಂಖಚಕ್ರಧರ | ಗೋವಿಂದಾ |
| ಶಾರ್ಙ್ಗಗದಾಧರ | ಗೋವಿಂದಾ |
| ವಿರಜಾತೀರ್ಥಸ್ಥ | ಗೋವಿಂದಾ |
| ವಿರೋಧಿಮರ್ದನ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಸಾಲಗ್ರಾಮಧರ | ಗೋವಿಂದಾ |
| ಸಹಸ್ರನಾಮ | ಗೋವಿಂದಾ |
| ಲಕ್ಷ್ಮೀವಲ್ಲಭ | ಗೋವಿಂದಾ |
| ಲಕ್ಷ್ಮಣಾಗ್ರಜ | ಗೋವಿಂದಾ |
| ಕಸ್ತೂರಿ ತಿಲಕ | ಗೋವಿಂದಾ |
| ಕಾಂಚನಾಂಬರಧರ | ಗೋವಿಂದಾ |
| ಗರುಡವಾಹನ | ಗೋವಿಂದಾ |
| ಗಜರಾಜರಕ್ಷಕ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಾನರಸೇವಿತ | ಗೋವಿಂದಾ |
| ವಾರಧಿಬಂಧನ | ಗೋವಿಂದಾ |
| ಎಳುಬೆಟ್ಟದ ಒಡೆಯ | ಗೋವಿಂದಾ |
| ಏಕಸ್ವರೂಪ | ಗೋವಿಂದಾ |
| ಶ್ರೀರಾಮಕೃಷ್ಣ | ಗೋವಿಂದಾ |
| ರಘುಕುಲನಂದನ | ಗೋವಿಂದಾ |
| ಪ್ರತ್ಯಕ್ಷದೇವ | ಗೋವಿಂದಾ |
| ಪರಮದಯಾಕರ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಜ್ರಕವಚಧರ | ಗೋವಿಂದಾ |
| ವೈಜಯಂತಿಮಾಲ | ಗೋವಿಂದಾ |

| | |
|---|---|
| ಬಡ್ಡಿಯಕಾಸಿನ | ಗೋವಿಂದಾ |
| ವಸುದೇವತನಯ | ಗೋವಿಂದಾ |
| ಬಿಲ್ವಪತ್ರಾರ್ಚಿತ | ಗೋವಿಂದಾ |
| ಭಿಕ್ಷುಕ ಸಂಸ್ತುತ | ಗೋವಿಂದಾ |
| ಸ್ತ್ರೀಪುಂರೂಪ | ಗೋವಿಂದಾ |
| ಶಿವಕೇಶವಮೂರ್ತಿ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಬ್ರಹ್ಮಾಂಡರೂಪ | ಗೋವಿಂದಾ |
| ಭಕ್ತ ರಕ್ಷಕ | ಗೋವಿಂದಾ |
| ನಿತ್ಯಕಲ್ಯಾಣ | ಗೋವಿಂದಾ |
| ನೀರಜನಾಭ | ಗೋವಿಂದಾ |
| ಹಾಥೀರಾಮಪ್ರಿಯ | ಗೋವಿಂದಾ |
| ಹರಿಸರ್ವೋತ್ತಮ | ಗೋವಿಂದಾ |
| ಜನಾರ್ದನಮೂರ್ತಿ | ಗೋವಿಂದಾ |
| ಜಗತ್ಸಾಕ್ಷಿರೂಪ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಅಭಿಷೇಕಪ್ರಿಯ | ಗೋವಿಂದಾ |
| ಆಪನ್ನಿವಾರಣ | ಗೋವಿಂದಾ |
| ರತ್ನಕಿರೀಟ | ಗೋವಿಂದಾ |
| ರಾಮಾನುಜನುತ | ಗೋವಿಂದಾ |
| ಸ್ವಯಂಪ್ರಕಾಶ | ಗೋವಿಂದಾ |
| ಆಶ್ರಿತಪಕ್ಷ | ಗೋವಿಂದಾ |
| ನಿತ್ಯಶುಭಪ್ರದ | ಗೋವಿಂದಾ |
| ನಿಖಿಲಲೋಕೇಶ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಆನಂದರೂಪ | ಗೋವಿಂದಾ |
| ಆದ್ಯಂತರಹಿತ | ಗೋವಿಂದಾ |
| ಇಹಪರದಾಯಕ | ಗೋವಿಂದಾ |
| ಇಭರಾಜರಕ್ಷಕ | ಗೋವಿಂದಾ |
| ಪರಮದಯಾಳೋ | ಗೋವಿಂದಾ |
| ಪದ್ಮನಾಭ ಹರಿ | ಗೋವಿಂದಾ |
| ತಿರುಮಲೆವಾಸ | ಗೋವಿಂದಾ |
| ತುಲಸೀವನಮಾಲ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಶೇಷಾದ್ರಿನಿಲಯ | ಗೋವಿಂದಾ |
| ಶೇಷಶಾಯಿಯೆ | ಗೋವಿಂದಾ |
| ಶ್ರೀ ಶ್ರೀನಿವಾಸ | ಗೋವಿಂದಾ |
| ಶ್ರೀ ವೆಂಕಟೇಶ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |

**ಸರ್ವೇ ಜನಾ ಸುಖಿನೋಭವಂತು**



# ಪಾವಗಡದ ಪ್ರಾಚೀನ ದೇವಾಲಯಗಳು

– ಕೆಂಗೇರಿ ಚಕ್ರಪಾಣಿ
94483 86886

ತುಮಕೂರು ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿರುವ ನೆರೆಯ ಆಂಧ್ರಪ್ರದೇಶದ ಗಡಿಯಂಚಿನಲ್ಲಿರುವ ತಾಲ್ಲೂಕು ಕೇಂದ್ರ ಪಾವಗಡ. ಪಾವಗಡದ ಊರಿನ ಹೆಸರು ಇಲ್ಲಿ ಸಿಕ್ಕಿದ ಒಂದು ನಾಗರಕಲ್ಲಿನಿಂದ (ಪಾಮು-ಗೊಂಡ) ಬಂದಿದೆ ಎನ್ನಲಾಗಿದೆ.

ಪಾವಗಡದಲ್ಲಿ ಪಾವಗಡನಾಯಕರು ಎಂದು ಕರೆಯುವ ವಿಜಯನಗರದ ಅರಸರ ಕಾಲದಲ್ಲಿ ಆಡಳಿತ ನಡೆಸಿದ್ದ ಒಂದು ಪಾಳೆಪಟ್ಟು. ಇಲ್ಲಿ ಸಾ.ಶ.1585 ರಿಂದ ಸಾ.ಶ.1790 ರ ವರೆಗೂ ಸುಮಾರು ಇನ್ನೂರು ವರ್ಷಗಳ ಕಾಲ ಆಡಳಿತ ನಡೆಸಿದ್ದರು. ಇವರಲ್ಲಿ ಮೊದಲನೆಯವನು ಬಾಳಪ್ಪನಾಯಕ.

ಪಾವಗಡದಲ್ಲಿರುವ ಬೆಟ್ಟದ ಮೇಲಿನ ಕೋಟೆಯು ಚಿತ್ರ ದುರ್ಗದ ಕೋಟೆಯ ರೀತಿಯಲ್ಲಿಯೇ ಪ್ರಸಿದ್ಧಿ. ಇಲ್ಲಿ ಕೋಟೆ ಕೊತ್ತಲಿನ ಅವಶೇಷಗಳು ಈಗಲೂ ನೋಡಲು ಲಭ್ಯವಿವೆ. ಬೆಟ್ಟದಲ್ಲಿರುವ ಕೋಟೆಯ ಗೋಡೆಗಳು ಹತ್ತು ಹೆಬ್ಬಾಗಿಲುಗಳು, ದೊಣ್ಣೆಗಳು, ಆಂಜನೇಯನ ದೇವಾಲಯ, ಸುಲ್ತಾನ ಬತೇರಿ, ಸುಬ್ಬರಾಯನ ಬತೇರಿ ಮುಂತಾದ ಸ್ಮಾರಕಗಳಿದ್ದು ಒಂದು ದಿನದ ಚಾರಣಕ್ಕೆ ಹೇಳಿ ಮಾಡಿಸಿದ ಸ್ಥಳವಾಗಿದೆ.

ಪಾವಗಡ ನಗರದ ಬೆಟ್ಟದ ತಪ್ಪಲಿನಲ್ಲಿ ಅನೇಕ ಪ್ರಾಚೀನ ದೇವಾಲಯಗಳಿವೆ. ಶ್ರೀ ಶ್ರೀನಿವಾಸ ದೇವಾಲಯ, ಸಿದ್ಧೇಶ್ವರ ದೇವಾಲಯ, ವೇಣುಗೋಪಾಲ ದೇವಾಲಯ, ಕೋಟೆ ಮಾರುತಿ ದೇವಾಲಯ, ಕಣಿವೆ ನರಸಿಂಹ ದೇವಾಲಯ ಹಾಗೂ ಸುಪ್ರಸಿದ್ಧ ಶನೇಶ್ವರ ದೇವಾಲಯಗಳಿವೆ.

ಪಾವಗಡದಲ್ಲಿರುವ ಶನಿದೇವಾಲಯವು ನಮ್ಮ ನಾಡಿನ ಪ್ರಸಿದ್ಧ ದೇವಾಲಯವಾಗಿರುವುದು.

## ಕೋಟೆ ಆಂಜನೇಯ ದೇವಾಲಯ

ಪಾವಗಡದ ಕೋಟೆಯನ್ನು ಪ್ರವೇಶಿಸುವ ಸಮೀಪ ದಲ್ಲಿಯೇ ಆಂಜನೇಯ ದೇವಾಲಯವಿದೆ. ದೇವಾಲಯದಲ್ಲಿ ವಿಜಯನಗರದ ಅರಸರ ಕಾಲದ ಸುಮಾರು 13 ಅಡಿಗಳಷ್ಟು ಎತ್ತರವಿರುವ ಮಾರುತಿಯ ದಿವ್ಯ ಮೂರ್ತಿಯಿದೆ. ಮಾರುತಿಯ ದೇವಾಲಯವನ್ನು ನೂತನವಾಗಿ ನಿರ್ಮಿಸಿರುವರು.

ಒಂದು ಶಿಲಾಫಲಕದ ಮೇಲೆ ಉಬ್ಬು ಶಿಲ್ಪವಾಗಿ ಮೂಡಿ ಬಂದಿರುವ ಮಾರುತಿಯ ಮೂರ್ತಿಯು ಬಹಳ ಶಕ್ತಿ ಪೂರ್ಣ ವಾಗಿದೆ. ಮಾರುತಿಯ ಮುಖಾರವಿಂದವು ಪಾರ್ಶ್ವಕ್ಕೆ ತಿರುಗಿದೆ. ಆಂಜನೇಯನ ಬಲಗೈ ಎತ್ತಿದ ಅಭಯ ಹಸ್ತದಲ್ಲಿದ್ದು ಸೊಂಟದ ಮೇಲಿನ ಎಡಗೈಯಲ್ಲಿ ಮಾವಿನ ಗೊಂಚಲಿದೆ. ಮಾರುತಿಯ ಕೊರಳಿಗೆ ಧರಿಸಿರುವ ಹಾರ ಮೊಣಕಾಲಿನವರಿಗೂ ಬಂದಿದೆ. ವೀರಗಚ್ಚೆಯನ್ನು ಹಾಕಿರುವ ಮಾರುತಿಯು ಗಂಟು ಹಾಕಿರುವ

ಶಿಖೆಯನ್ನು ಹೊಂದಿದ್ದು ಪಾದದ ಬಳಿ ರಾವಣಕುಮಾರನಾದ ಅಕ್ಷಕುಮಾರನಿರುವನು. ಮಾರುತಿಯು ವಿಶೇಷ ಪುಷ್ಪಾಲಂಕಾರ, ಬೆಣ್ಣೆಯ ಅಲಂಕಾರಗಳಲ್ಲಿ ನೋಡಲು ಸೊಗಸಾಗಿರುತ್ತದೆ.

ದೇವಾಲಯದಲ್ಲಿ ಪ್ರತಿ ಹುಣ್ಣಿಮೆಯಲ್ಲಿ ಸತ್ಯ ನಾರಾಯಣ ಪೂಜೆ, ಹನುಮ ಜಯಂತಿಗಳಲ್ಲಿ ವಿಶೇಷ ಸೇವೆಗಳು ಜರುಗುತ್ತವೆ. ಪಾವಗಡದ ಶನೇಶ್ವರ ಸ್ವಾಮಿಯ ದರ್ಶನಕ್ಕೆ ಬಂದವರು ತಪ್ಪದೆ ಕೋಟೆಯ ಆಂಜನೇಯನನ್ನು ದರ್ಶಿಸಬೇಕೆಂಬ ಧಾರ್ಮಿಕ ನಂಬಿಕೆಯಿದೆ.

## ವೇಣುಗೋಪಾಲ ದೇವಾಲಯ

ಪಾವಗಡ ಊರಿನಲ್ಲಿ ವೇಣುಗೋಪಾಲ ದೇವಾಲಯವಿದೆ. ಗರ್ಭಗುಡಿಯಲ್ಲಿ ರುಕ್ಮಿಣೀ, ಸತ್ಯಭಾಮ ಸಹಿತನಾದ ಅಂದದ ವೇಣುಗೋಪಾಲನ ಮೂರ್ತಿಯಿದೆ. ದೇವಾಲಯವು ವಿಶಾಲವಾದ ಪ್ರಾಕಾರದಲ್ಲಿದ್ದು ಗರುಡಗಂಬ, ಬಲಿಪೀಠ, ಮುಖ ಮಂಟಪ, ನವರಂಗ ಅಂತರಾಳ,ಗರ್ಭಗೃಹಗಳನ್ನು ಹೊಂದಿವೆ.

ನವರಂಗದಲ್ಲಿ ನಾಲ್ಕು ಸ್ತಂಭಗಳಿವೆ. ದೇವಾಲಯಕ್ಕೆ ಪ್ರವೇಶ ಮಂಟಪವಿದ್ದು ಮೇಲೆ ಗಾರೆಯಿಂದ ಮಾಡಿದ ಗೋಪುರವಿದೆ. ದೇವಾಲಯದ ಆವರಣದಿಂದ ಪಾವಗಡದ ಬೆಟ್ಟ ಮತ್ತು ಕೋಟೆಯು ಅಂದವಾಗಿ ಕಾಣುತ್ತದೆ.

ವೇಣುಗೋಪಾಲ ದೇವಾಲಯವು. ಶಿಥಿಲ ಹಂತವನ್ನು ತಲುಪುತಿದ್ದು ತುರ್ತಾಗಿ ದೇವಾಲಯದ ಜೀರ್ಣೋದ್ಧಾರ ಕಾರ್ಯ ಮಾಡಿ ಪುರಾತನ ದೇವಾಲಯವನ್ನು ರಕ್ಷಿಸಬೇಕಾಗಿದೆ. ವಾಸ್ತವವಾಗಿ ವೇಣುಗೋಪಾಲ ವಿಗ್ರಹವು ಬೆಟ್ಟದ ಮೇಲೆ ಸಾ.ಶ. 1586 ರಲ್ಲಿ ಬಾಳಪ್ಪ ನಾಯಕನಿಂದ ಸ್ಥಾಪಿಸಲ್ಪಟ್ಟಿದ್ದು, ನಂತರದ ಕಾಲದಲ್ಲಿ ಗ್ರಾಮಕ್ಕೆ ಸ್ಥಳಾಂತರಿಸಲಾಗಿದೆ. ಸಾ.ಶ. 1777 ರಲ್ಲಿ ತಿಮ್ಮಪ್ಪ ನಾಯಕನಿಂದ ಪ್ರಸ್ತುತ ದೇವಾಲಯವು ನಿರ್ಮಾಣವಾಗಿದೆ. ಈ ದೇವಾಲಯಕ್ಕೆ ಅತೀ ಸಮೀಪದಲ್ಲಿ ಸಿದ್ಧೇಶ್ವರ ದೇವಾಲಯವಿದೆ.

## ಉದ್ಭವ ಕಣಿವೆ ನರಸಿಂಹ ದೇವಾಲಯ

ಪಾವಗಡದ ಪ್ರಮುಖ ದೇವಾಲಯ ಕಣಿವೆ ನರಸಿಂಹ ದೇವಾಲಯವಾಗಿರುವುದು. ಪಾವಗಡ ಗ್ರಾಮದಿಂದ ಒಂದು ಕಿ.ಮೀ. ದೂರದಲ್ಲಿ ಮಧುಗಿರಿ ರಸ್ತೆಯಲ್ಲಿ ದೇವಾಲಯವಿದೆ. ನರಸಿಂಹ ಆರಾಧನೆಯಲ್ಲಿ ಮೂರ್ತಿರೂಪ, ಸ್ತಂಭ ರೂಪಗಳಲ್ಲದೆ ನಿರಾಕಾರವಾಗಿಯೂ ಪೂಜಿಸುವ ಪದ್ಧತಿ ಇತ್ತು. ತುಮಕೂರು ಜಿಲ್ಲೆಯ ಸೀಬಿ, ದೊಡ್ಡದಾಳವಟ್ಟ, ಪಾವಗಡದ ಕಣಿವೆ ನರಸಿಂಹನ ದೇವಾಲಯಗಳನ್ನು ಉದಾಹರಿಸಬಹುದು. ಕಣಿವೆ ನರಸಿಂಹ ದೇವಾಲಯವು ಪ್ರವೇಶ ಮಂಟಪ, ಸುತ್ತಲೂ ಪ್ರಕಾರ,ನವರಂಗ, ಅಂತರಾಳ, ಗರ್ಭಗೃಹಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ತ್ರಿಕೋಣಾಕೃತಿಯ ಶಿಲೆಯಲ್ಲಿ ನರಸಿಂಹನ ಸ್ವರೂಪ ಒಡಮೂಡಿದೆ.

ಉದ್ಭವನರಸಿಂಹ ಸ್ವಾಮಿಯು ಬಯಲಿನಲ್ಲಿತ್ತು , ನಂತರ ಮೈಸೂರು ಒಡೆಯರ ಕಾಲದಲ್ಲಿ ಅಮಲ್ದಾರರೊಬ್ಬರು ಚಿಕ್ಕದಾದ ಗುಡಿಯನ್ನು ನಿರ್ಮಿಸಿದರು ನಂತರ 1942 ರಿಂದೀಚೆಗೆ ದೇವಾಲಯವು ವಿಸ್ತರಣೆಯಾಗಿದೆ. ಕಣಿವೆ ನರಸಿಂಹ ದೇವರು ಹಲವಾರು ಕುಟುಂಬಗಳ ಕುಲದೈವವಾಗಿದ್ದು ಅಪಾರ ಸಂಖ್ಯೆ ಭಕ್ತರಿದ್ದಾರೆ.

ಪಾವಗಡದ ಕಣಿವೆ ನರಸಿಂಹ ಸ್ವಾಮಿಗೆ ಪ್ರತಿ ವರ್ಷ ಫಾಲ್ಗುಣ ಮಾಸದಲ್ಲಿ ವೈಭವದ ಬ್ರಹ್ಮ ರಥೋತ್ಸವವು ಜರುಗುತ್ತದೆ. ಐದು ದಿನಗಳ ಕಾಲ ನಡೆಯುವ ಉತ್ಸವಾದಿಗಳು ಫಾಲ್ಗುಣ ಶುದ್ಧ ತ್ರಯೋದಶಿಯಿಂದ ಆರಂಭವಾಗುತ್ತದೆ.

ಮೊದಲನೆಯ ದಿನ ಬೆಳಿಗ್ಗೆ ಸ್ವಸ್ತಿವಾಚನ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ, ದ್ವಿತೀಯ ದಿನ ಅಂದರೆ ಫಾಲ್ಗುಣ ಶುದ್ಧ ಚತುರ್ದಶಿಯಂದು ಧ್ವಜಾರೋಹಣ, ಹಗಲು ಸಂತರ್ಪಣೆ, ಪುಷ್ಪಾಲಂಕಾರ ಸೇವೆಗಳು ಜರುಗುವುದು. ಮೂರನೆಯ ದಿನ ಹುಣ್ಣಿಮೆಯಂದು ಸ್ವಾಮಿಯವರಿಗೆ ಬ್ರಹ್ಮ ರಥೋತ್ಸವ ಮಧ್ಯಾಹ್ನ 12:45 ಗಂಟೆಗೆ ಸಲ್ಲುವ ಶುಭ ಅಭಿಜಿತ್ ಲಗ್ನದಲ್ಲಿ ವೈಭವವಾಗಿ ಜರುಗುತ್ತದೆ. ಮಾರನೆಯ ದಿನ ಧ್ವಜಾವರೋಹಣ, ಮಹಾಮಂಗಳಾರತಿ ಹಾಗೂ ಐದನೆಯ ದಿನ ಸ್ವಾಮಿಗೆ ಶೇಷ ವಾಹನೋತ್ಸವ, ಶಯನೋತ್ಸವದೊಂದಿಗೆ ಅದ್ದೂರಿಯ ಬ್ರಹ್ಮ ರಥೋತ್ಸವವು ಮುಕ್ತಾಯವಾಗುತ್ತದೆ.

## ಹೀಗೆ ಬನ್ನಿ :

ತುಮಕೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಪಾವಗಡವು, ತುಮಕೂರು-ಕಲ್ಯಾಣದುರ್ಗ ರಸ್ತೆಯಲ್ಲಿ ಜಿಲ್ಲಾ ಕೇಂದ್ರದಿಂದ 102 ಕಿ.ಮೀ. ದೂರದಲ್ಲಿದೆ.

ವೈವಿಧ್ಯದಲ್ಲಿಯೇ ಏಕತೆಯನ್ನು ಸಾರಿದ ಮಹಾನ್ ದಾರ್ಶನಿಕರಲ್ಲಿ ಭಗವದ್ರಾಮಾನುಜಾಚಾರ್ಯರು ಅಗ್ರಗಣ್ಯರು. ಸೂರ್ಯ,ಚಂದ್ರರು ಎಲ್ಲ ಕಾಲದಲ್ಲೂ ಪ್ರಸ್ತುತರಿರುವಂತೆ ವೇದಾಂತದ ತತ್ತ್ವಗಳನ್ನು ಭಕ್ತಿ-ಪ್ರಪತ್ತಿಯ ಮೂಲಕ ಜನ ಸಾಮಾನ್ಯರ ಬದುಕಿಗೆ ತಲುಪಿಸಿದ ಆಚಾರ್ಯರ ಸಂದೇಶವೂ ಸರ್ವಕಾಲಕ್ಕೂ ಪ್ರಸ್ತುತವಾಗಿದೆ.

ಸಾವಿರ ವರ್ಷಗಳು ಕಳೆದರೂ ಅಚ್ಚಳಿಯದ ಪ್ರಭಾವವನ್ನು ಉಳಿಸಿಕೊಂಡಿರುವ ಅಪರೂಪದ ಯುಗ ಪುರುಷರು ರಾಮಾನುಜಾಚಾರ್ಯರು. ಭಾರತವು ಧಾರ್ಮಿಕ ಹಾಗೂ ಸಾಮಾಜಿಕ ಗೊಂದಲಗಳಲ್ಲಿದ್ದ ಕಾಲದಲ್ಲಿ, ವಿಶಿಷ್ಟಾದ್ವೈತ ವೇದಾಂತ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿ ತತ್ತ್ವಶಾಸ್ತ್ರದ ದಿಕ್ಕನ್ನೇ ಹೊಸ ಹಾದಿಗೆ ಕರೆತಂದರು. ಶಂಕರ-ರಾಮಾನುಜ-ಮಧ್ವರಾದ ಆಚಾರ್ಯತ್ರಯರಲ್ಲಿ ಮಧ್ಯಸ್ಥಾನ ಪಡೆದ ರಾಮಾನುಜರು, ಮೋಕ್ಷ ಪ್ರಾಪ್ತಿಯ ಅವಕಾಶವನ್ನು ಸರ್ವಜನ ಸಾಮಾನ್ಯರಿಗೆ ಸಮಾನವೆಂದು ಸಾರಿದ ಧೈರ್ಯಶಾಲಿ ಸಮಾಜ ಸುಧಾರಕರಾಗಿದ್ದರು.

ಶೇಷಾವತಾರಿಗಳೆಂದು ಭಕ್ತರು ನಂಬುವ ರಾಮಾನುಜಾಚಾರ್ಯರ ಜೀವನ ಸಂಘರ್ಷಮಯವಾಗಿದ್ದರೂ, ಅವರ ಭಕ್ತಿ ಮಾರ್ಗವು ಇಡೀ ಭಾರತದಲ್ಲಿ ಆಳವಾದ ಪ್ರಭಾವ ಬೀರಿ ಸನಾತನ ಧರ್ಮದ ಮರುಸಂರಕ್ಷಣೆಗೆ ಕಾರಣವಾಯಿತು. ಸುಮಾರು 120 ವರ್ಷಗಳ ದೀರ್ಘ ಆಯುಷ್ಯವನ್ನು ಈ ಭೂಮಿಯಲ್ಲಿ ಕಳೆಯುವ ಮೂಲಕ ದೀನ-ದಲಿತರು, ಸಾಮಾನ್ಯ ಜನ, ಶಿಷ್ಯ ವೃಂದ ಮತ್ತು ಭಕ್ತ ಸಮೂಹಕ್ಕೆ ಅವರು ಆಶ್ರಯವಾಗಿದ್ದರು.




ಲಕ್ಷ್ಮಣ ಮುನಿ, ಎಂಬೆರುಮಾನಾರ್, ಶ್ರೀ ಭಾಷ್ಯಕಾರರೂ, ತಿರುಪ್ಪಾವೈಜೀಯರ್, ಉದಯವರ್ ಮುಂತಾದ ಅನೇಕ ಗೌರವ ನಾಮಗಳಿಂದ ಖ್ಯಾತರಾದ ರಾಮಾನುಜರ ಮಹತ್ವದ ಕೊಡುಗೆ ಎಂದರೆ - ಭಕ್ತಿಯ ನೆಲೆಯಲ್ಲಿ ಸಾಮಾಜಿಕ ಅಸಮಾನತೆಗಳನ್ನು ಸಮಗೊಳಿಸುವ ಕ್ರಾಂತಿಕಾರಿ ದೃಷ್ಟಿ. ಅವರ ಶ್ರೀ ಭಾಷ್ಯ (ಬ್ರಹ್ಮಸೂತ್ರ ಭಾಷ್ಯ) ದ ಮಂಗಳಶ್ಲೋಕವೇ ಭಕ್ತಿಯ ಪ್ರಾಮುಖ್ಯತೆಯನ್ನು ಸಾರುತ್ತದೆ "ಸೃಷ್ಟಿ-ಸ್ಥಿತಿ-ಲಯಗಳ ಲೀಲಾ ವಿನೋದಿಯಾದ ಪರಬ್ರಹ್ಮ ಶ್ರೀನಿವಾಸನಲ್ಲಿ ನನ್ನ ಬುದ್ಧಿಯೆಲ್ಲವೂ ಭಕ್ತಿಯಾಗಿ ಪರಿವರ್ತಿಸಲಿ".

ರಾಮಾನುಜಾಚಾರ್ಯರು ಕೇವಲ ದಾರ್ಶನಿಕರಲ್ಲ, ಅವರು ಅನುಭವಿಸಿದ್ಧ ಭಕ್ತರು. ದೇವಾಲಯವನ್ನು ಸಮಾಜ ಕೇಂದ್ರವಾಗಿಸಿ, ಅವರ್ಣಿಯರಿಗೂ ಭಗವಂತನ ಸೇವೆಯಲ್ಲಿ ಸ್ಥಾನ ಕಲ್ಪಿಸಿದ ಅವರು, ಧರ್ಮವನ್ನು ರಾಜಾಶ್ರಯದಿಂದ ಹೊರ ತಂದು ಜನಾಶ್ರಯದತ್ತ ಕರೆದೊಯ್ದರು. ಈ ಕಾರಣದಿಂದಲೇ ಅವರು ಇಂದಿಗೂ ಸಮಾಜ ಸುಧಾರಕರಾಗಿ, ಮಾನವೀಯತೆಯ ಪ್ರತೀಕವಾಗಿ ಜನಮಾನಸದಲ್ಲಿ ಜೀವಂತವಾಗಿದ್ದಾರೆ.

**ರಾಮಾನುಜಾಚಾರ್ಯರ ಪ್ರಮುಖ ಸಾಮಾಜಿಕ - ಧಾರ್ಮಿಕ ಕೊಡುಗೆಗಳು :-**

- ಭಗವದ್ಭಕ್ತಿಯ ನೆಲೆಯಲ್ಲಿ ವರ್ಣ-ಜಾತಿ ವರ್ಗಗಳ ಅನ್ಯೋನ್ಯತೆ ಬೆಳೆಸಿದರು.
- ಸಂಸ್ಕೃತ ವೇದಗಳ ಜೊತೆಗೆ ದ್ರಾವಿಡ ವೇದಗಳಿಗೂ ದೇವಾಲಯಗಳಲ್ಲಿ ಸಮಾನ ಗೌರವ ದೊರಕುವಂತೆ ಮಾಡಿದರು.
- ಮೇಲುಕೋಟೆ ಚೆಲುವನಾರಾಯಣನ ಸೇವೆಗೆ ಕೆಳಸ್ತರದ ಭಕ್ತರಿಗೂ ಅವಕಾಶ ಕಲ್ಪಿಸಿದರು.
- ಶ್ರೀರಂಗದಲ್ಲಿ ಆರೋಗ್ಯ ಶಾಲೆ ಸ್ಥಾಪಿಸಿ ಉಚಿತ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಿದರು.
- 74 ಸಿಂಹಾಸನಾಧಿಪತಿಗಳಿಗೆ ಪೀಠಗಳನ್ನು ಸ್ಥಾಪಿಸಿ ಸಂಚಾರಿ ಗುರುಗಳ ಮೂಲಕ ಭಕ್ತಿ-ಪ್ರಪತ್ತಿ ವಿಚಾರವನ್ನು ಹರಡಿದರು.
- ವಿವಿಧ ಜಾತಿಗಳಲ್ಲಿ ದಾಸ್ಯರನ್ನು ರೂಪಿಸಿ, ಭಕ್ತಿ ಮಾರ್ಗಕ್ಕೆ ದೀಕ್ಷೆ ನೀಡಿದರು.

**ಶ್ರೀಮತಿ ಕೆ.ವಿ. ಪದ್ಮಾವತಿ**

■ ತೊಣ್ಣೂರು ಮುಂತಾದ ಪ್ರದೇಶಗಳಲ್ಲಿ ಕೆರೆಗಳನ್ನು ನಿರ್ಮಿಸಿ ಕೃಷಿ ಮತ್ತು ತೀರ್ಥಶುದ್ಧಿಗೆ ನೆರವಾಯಿತು.

■ ತಿರುಪತಿ ಸಮೀಪ ಐದು ಅಗ್ರಹಾರಗಳನ್ನು ಸ್ಥಾಪಿಸಿ ಕಾಡನ್ನು ನಾಡಾಗಿಸಿದರು.

■ ಬಿಳಿಗಿರಿರಂಗನಬೆಟ್ಟದ ಸೋಲಿಗ ಸಮುದಾಯಕ್ಕೆ ಭಗವದ್ಭಕ್ತಿಯಲ್ಲಿ ಸ್ಥಾನ ನೀಡಿದರು.


■ ಅಷ್ಟಾಕ್ಷರ ಮಂತ್ರಕ್ಕೆ ವೈದಿಕ-ಅವೈದಿಕ ಭೇದವಿಲ್ಲವೆಂದು ಪ್ರತಿಪಾದಿಸಿ ಸರ್ವರಿಗೂ ಮಂತ್ರೋಪದೇಶ ನೀಡಿದರು.

■ ಸುಮಾರು 36 ವರ್ಷಗಳನ್ನು ಕನ್ನಡನಾಡಿನ ಜನ ಜೀವನದ ಏಳಿಗೆಗೆ ಮೀಸಲಿಟ್ಟರು (ಶಾಸನಾಧಾರ).

■ ಮೇಲುಕೋಟೆಯಲ್ಲಿ 14 ಜಾತಿಗಳಿಗೆ ನಿವಾಸ ವ್ಯವಸ್ಥೆ ಮಾಡಿ ತಿರುನಾರಾಯಣಪುರ ನಗರವನ್ನು ನಿರ್ಮಿಸಿದರು.

■ 700 ಸನ್ಯಾಸಿಗಳು 12,000 ಸ್ವಯಂಸೇವಕರೊಂದಿಗೆ ಭಾರತಾದ್ಯಂತ ಮೂರು ಬಾರಿ ಸಂಚರಿಸಿದರು.

■ ರಾಮಾನುಜರ ಪ್ರಭಾವದಿಂದ ಕನ್ನಡನಾಡಿನಲ್ಲಿ ಸುಮಾರು 26,000 ದೇವಾಲಯಗಳು ಸ್ಥಾಪಿತವಾದವು.





ಭಗವದ್ರಾಮಾನುಜಾಚಾರ್ಯರು ಭಕ್ತಿಯ ಮೂಲಕ ತತ್ವಶಾಸ್ತ್ರವನ್ನು ಬದುಕಿಗೆ ಇಳಿಸಿದ ಮಹಾಮಾನವ. ಅವರ ವಿಶಿಷ್ಟಾದ್ವೈತ ದರ್ಶನವು ಸಮಾನತೆ, ಸಹಾನುಭೂತಿ ಮತ್ತು ಮಾನವೀಯತೆಯ ಶಾಶ್ವತ ಸಂದೇಶವನ್ನು ಹೊತ್ತು ಕೊಂಡಿದೆ. ಸಾವಿರ ವರ್ಷಗಳ ಬಳಿಕವೂ ಅವರು ಜೀವಂತವಾಗಿರುವುದು-ಅವರು ದರ್ಶನದ ಶಕ್ತಿಯೇ ಸರಿ.

## ಮೇ ತಿಂಗಳಲ್ಲಿ ಬರುವ ಹಬ್ಬ ಹರಿ ದಿನಗಳು

**01 ಶ್ರೀ ಕಪಿಲೇಶ್ವರ ಸ್ವಾಮಿಯವರ ಪುಷ್ಪಯಾಗ**

**01 ಕಾರ್ಮಿಕರ ದಿನಾಚರಣೆ, ಕೂರ್ಮ ಜಯಂತಿ**

**07-09 ರ ವರೆಗೆ ಶ್ರೀನಿವಾಸಮಂಗಾಪುರಂ,**

**ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ವಸಂತೋತ್ಸವ**

**12 ತಿರುಪತಿ ಗಂಗಜಾತ್ರೆ, ಹನುಮ ಜಯಂತಿ**

**23-31 ರ ವರೆಗೆ ತಿರುಪತಿ, ಶ್ರೀಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು**

**28 ರಿಂದ ಜೂನ್ 05 ರ ವರೆಗೆ ಹೃಷಿಕೇಶ್, ನಾರಾಯಣವನಂ,**

**ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು**

108 ದಿವ್ಯದೇಶಗಳು

# ತಿರುಮಹೀಂದ್ರಪುರಂ

ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಸೂರ್ಯವಂಶಿ



ಈ ದಿವ್ಯ ದೇಶವು ನಡು ನಾಡು ದಿವ್ಯ ದೇಶಗಳಲ್ಲಿ ಒಂದಾಗಿದೆ. ಬ್ರಹ್ಮಾಂಡ, ಸ್ಕಾಂದ, ನಾರದೀಯ ಪುರಾಣಗಳಲ್ಲಿ ಈ ದಿವ್ಯದೇಶದ ವೈಭವವು ವರ್ಣಿತವಾಗಿದೆ. ಕಡಲೂರಿನಿಂದ ಸುಮಾರು 5 ಕಿ.ಮೀ. ದೂರದಲ್ಲಿದೆ.

**ಈ ದಿವ್ಯದೇಶವು ಐದಾರು ರೀತಿಯ ಸ್ಥಳಪುರಾಣಗಳಿವೆ**

1. ಭಗವಂತನಾದ ವೈಕುಂಠಪತಿಯನ್ನು ಸನಕಸನಂದಾದಿಗಳು ದರ್ಶಿಸಬೇಕೆಂದು ಕ್ಷೀರಸಾಗರಕ್ಕೆ ಹಾಗೆ ವೈಕುಂಠಕ್ಕೆ ಬಂದರು. ಅಲ್ಲಿ ಅವರಿಗೆ ಸ್ವಾಮಿಯು ಎಲ್ಲೂ ಕಂಡು ಬರಲಿಲ್ಲ. ಆಗ ದ್ವಾರಪಾಲಕರು ಅವರಿಗೆ, “ಭೂದೇವಿ, ಮಾರ್ಕಂಡೇಯ ಮಹರ್ಷಿ ತಪಸ್ಸು ಮಾಡುತ್ತಿರುವಂತಹಾ ತಿರುಮಹೀಂದ್ರಪುರಕ್ಕೆ ಹೋಗಿ ಶ್ರೀಯಃಪತಿಯನ್ನು ನೀವು ದರ್ಶಿಸಬಹುದು” ಎಂದು ತಿಳಿಸಿದರು. ಅವರ ಮಾತಿನಂತೆ ಸನಕಸನಂದಾದಿಗಳು ಈ ದಿವ್ಯದೇಶಕ್ಕೆ ಬಂದು ಸ್ವಾಮಿಯನ್ನು ದರ್ಶಿಸಿಕೊಂಡರು. ಅಷ್ಟೇ ಅಲ್ಲ ಈ ದಿವ್ಯ ದೇಶದಲ್ಲೇ ಸ್ಥಿರವಾಗಿದ್ದು ಭಕ್ತರನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು. ಅವರ ಕೋರಿಕೆಯ ಮೇರೆಗೆ ಸ್ವಾಮಿಯವರು ದೇವನಾಥನಾಗಿ ಇಲ್ಲಿ ನೆಲೆಸಿದರು.

2. ನಿತ್ಯಸೂರಿಗಳಾದ ಗರುಡ, ಆದಿಶೇಷರ ವೈಭವವನ್ನು ಲೋಕಕ್ಕೆ ತಿಳಿಯಪಡಿಸಬೇಕೆಂದು ಸ್ವಾಮಿಯು ಸಂಕಲ್ಪಿಸಿ ಅವರಿಬ್ಬರಿಗೂ ಒಂದು ಪರೀಕ್ಷೆಯನ್ನು ಇರಿಸಿದರು. ತನಗೆ ಬಾಯಾರಿಕೆಯಾಗಿದೆ ಎಂದು, ಕುಡಿಯಲು ನೀರನ್ನು ತರಬೇಕೆಂದು ಹೇಳಿದರು. ಆಗ ಗರುಡನು ಅತ್ಯಂತ ವೇಗವಾಗಿ ಎಗರುತ್ತಾ ಒಂದು ಪರ್ವತದ ಮೇಲೆ ತಪಸ್ಸು ಮಾಡುತ್ತಿದ್ದ ಒಬ್ಬ ಮಹರ್ಷಿಯ ಕಮಂಡಲವನ್ನು ತನ್ನ ಕೊಕ್ಕಿನಿಂದ ತರುತ್ತಿರುವ ಸಮಯದಲ್ಲಿ ಆ ನೀರು ಕೆಳಗೆ ಬಿದ್ದು, ಅದು ದೊಡ್ಡ ನದಿಯಾಗಿ ಈ ತಿರುಮಹೀಂದ್ರಪುರಿಯಲ್ಲಿ ಪ್ರವಹಿಸಿತು. ಅದನ್ನೇ ಗರುಡನದಿ ಎಂದು ಕರೆಯುತ್ತಾರೆ.

ಆದಿಶೇಷನು, ಈ ದಿವ್ಯದೇಶದಲ್ಲಿನ ಭೂಮಿಯನ್ನು ಅಗೆದು ಪಾತಾಳಲೋಕದಲ್ಲಿ ಇದ್ದ ನೀರನ್ನು ತಂದು ದೇವದೇವನಿಗೆ ಸಮರ್ಪಿಸಿದನು. ಆ ತೀರ್ಥವನ್ನೇ ಶೇಷತೀರ್ಥವೆಂದು ಕರೆಯುತ್ತಾರೆ.

ಈ ತೀರ್ಥಜಲವನ್ನು ಸ್ವಾಮಿಯ ಪ್ರಸಾದವನ್ನು ತಯಾರಿಸುವುದಕ್ಕೆ ವಿರಜಾನದಿಯ ಸಮಾನವಾದ ಗರುಡನದಿಯ ಜಲವನ್ನು ಸ್ವಾಮಿಯ ಅಭಿಷೇಕಕ್ಕೆ, ಚಕ್ರಸ್ನಾನಕ್ಕೆ ಉಪಯೋಗಿಸಬೇಕೆಂದು ನಿಯಮ ಜಾರಿ ಮಾಡಿದರು. ಆ ಸಂಪ್ರದಾಯವು ಇಂದಿಗೂ ಮುಂದುವರೆಯುತ್ತಿದೆ. ಇಲ್ಲಿ ಭಕ್ತರು ಶೇಷತೀರ್ಥದಲ್ಲಿ ಹಾಲನ್ನು ಸಮರ್ಪಿಸುತ್ತಾರೆ.

3. ಮಾರ್ಕಂಡೇಯ ಮಹರ್ಷಿಯು ಬ್ರಹ್ಮದೇವನನ್ನು ಪ್ರಾರ್ಥಿಸಿ ವಿಶ್ವಕರ್ಮನಿಂದ ಈ ದಿವ್ಯಕ್ಷೇತ್ರವನ್ನು ನಿರ್ಮಿಸುವಂತೆ ಬೇಡಿಕೊಂಡ. ಬ್ರಹ್ಮತೀರ್ಥದ ಸಮೀಪದಲ್ಲಿ ತಪಸ್ಸು ಮಾಡಿ, ದೇವನಾಥಸ್ವಾಮಿಗೆ ಸಮೀಪವಾಗಿ ಇದ್ದು ಬ್ರಹ್ಮೋತ್ಸವವನ್ನು ನಡೆಯಿಸಿ, ಭೂದೇವಿಯನ್ನು ಮತ್ತೊಂದೆಡೆ ಸ್ಥಾಪಿಸಿ, ಈ ಕ್ಷೇತ್ರವನ್ನು ನಿರ್ಮಿಸಿದನು.



4. ದೇವಾಸುರರ ಯುದ್ಧದಲ್ಲಿ ದೇವತೆಗಳು ಈ ದಿವ್ಯದೇಶದ ಸ್ವಾಮಿಯನ್ನು ನಾಯಕನಾಗಿ, ದಾನವರು ಪರಮಶಿವನನ್ನು ನಾಯಕನನ್ನಾಗಿ ನೇಮಿಸಿಕೊಂಡರು.

ಆ ಸಮಯದಲ್ಲಿ ಪರಮಶಿವನು ತನ್ನ ಶೂಲಾಯುಧವನ್ನು ಸ್ವಾಮಿಯ ಮೇಲೆ ಪ್ರಯೋಗಿಸಿದಾಗ ದೇವನಾಥಸ್ವಾಮಿ ತನ್ನ ಚಕ್ರಾಯುಧವನ್ನು ಅದಕ್ಕೆ ಪ್ರತಿಯಾಗಿ ಪ್ರಯೋಗಿಸಿದ. ಸುದರ್ಶನನು ಶೂಲಗರ್ವವನ್ನು ಅಡಗಿಸಿದ. ಆದ್ದರಿಂದ ತ್ರಿಮೂರ್ತಿಗಳಲ್ಲಿ ವಿಷ್ಣು ಸ್ವರೂಪನಾದ ದೇವನಾಥನೇ ಅಗ್ರಗಣ್ಯನೆಂದು ತೀರ್ಮಾನಿಸಿದರು. ಆದ್ದರಿಂದಲೇ ಆತನನ್ನು ದೇವನಾಯಕನೆಂಬ ಹೆಸರು ಸಾರ್ಥಕವಾಯಿತು.

5. ತ್ರೇತಾಯುಗದಲ್ಲಿ ಹನುಮಂತನು ಸಂಜೀವನಿ ಪರ್ವತವನ್ನು ತರುತ್ತಿರುವಾಗ ಅದರಿಂದ ಒಂದು ಕಲ್ಲು ಕೆಳಗೆ ಬಿದ್ದು, ಅದೇ ಔಷಧ ಗಿರಿಯಾಗಿ ಏರ್ಪಟ್ಟಿತೆಂದು ಹೇಳುತ್ತಾರೆ.

ಈ ಔಷಧಗಿರಿಯಲ್ಲಿ ಸೌಗಂಧಿಕ ವನದಲ್ಲಿ ತಪಸ್ಸು ಮಾಡಿದ ಮಾರ್ಕಂಡೇಯನು, ಪದ್ಮದಲ್ಲಿ ದೊರೆತ ಮೂರುವರ್ಷದ ಒಂದು ಹೆಣ್ಣು ಮಗುವನ್ನು ಸಾಕಿ ಬೆಳೆಸಿದನು.

ಆ ಹುಡುಗಿ ಸಮುದ್ರದಲ್ಲಿನ ಅಲೆಗಳನ್ನು ನೋಡುತ್ತಾ ಆನಂದಿಸುತ್ತಿರುತ್ತಿದ್ದಳು. ಆದ್ದರಿಂದ ಆ ಹುಡುಗಿಗೆ ತರಂಗಮುಖನಂದಿನಿ ಎಂಬ ಹೆಸರನ್ನು ಇರಿಸಿದರು. ಈಕೆಯನ್ನು ಮಾರ್ಕಂಡೇಯನು ಶ್ರೀದೇವನಾಥಸ್ವಾಮಿಗೆ ಕನ್ಯಾದಾನ ಮಾಡಿದ್ದರಿಂದ ಇಲ್ಲೇ ನಿತ್ಯ ನಿವಾಸವನ್ನು ಮಾಡುತ್ತಿದ್ದಾರೆಂದು ಮತ್ತೊಂದು ಸ್ಥಳ ಪುರಾಣವು ತಿಳಿಸುತ್ತಿದೆ.




ಹಾಗೇ ಭೃಗು ಮಹರ್ಷಿಯು ಬ್ರಹ್ಮದೇವನ ಅನುಗ್ರಹದಿಂದ ಶ್ರೀಮಹಾಲಕ್ಷ್ಮಿಯನ್ನು ತನ್ನ ಮಗಳಾಗಿ ಪಡೆದನು. ಈಕೆ ಭಾರ್ಗವಿ, ಹೇಮಾಬ್ಜವಲ್ಲಿ ಎಂಬ ಹೆಸರಿನಿಂದ ಬೆಳೆದು ದೇವನಾಥಸ್ವಾಮಿಯ ಪತ್ನಿಯಾದಳೆಂದು ಇತಿಹಾಸವಿದೆ.

ಈ ಸ್ವಾಮಿಯನ್ನು ತಿರುಮಂಗೈ ಆಳ್ವಾರರು ಹತ್ತು ಪಾಶುರಗಳಿಂದ ಅರ್ಚಿಸಿದರು. ಶ್ರೀವೇಂಕಟೇಶ್ವರನ ಘಂಟಾವತಾರವೆಂದು ಭಾವಿಸುವ ಶ್ರೀವೇದಾಂತ ದೇಶಿಕರು ಈ ಕ್ಷೇತ್ರದಲ್ಲಿ ಶ್ರೀ ಹಯಗ್ರೀವಸ್ವಾಮಿಯ ಅನುಗ್ರಹದಿಂದ ಅನೇಕ ವಿದ್ಯೆಗಳನ್ನು ಪಡೆದರು.

ಈ ದಿವ್ಯಕ್ಷೇತ್ರ ಸ್ವಾಮಿಯ ಮೇಲೆ ದೇಶಿಕರು ದೇವನಾಯಕ ಪಂಚಾಶತ್ ಎಂಬ ಗ್ರಂಥವನ್ನು ಅನುಗ್ರಹಿಸಿದರು. ಇನ್ನೂ ಇವರು 120 ಗ್ರಂಥಗಳನ್ನು, ಇಲ್ಲಿ ಗರುಡನನ್ನು ಉಪಾಸಿಸಿ ರಚಿಸಿದರು. ವೇದಾಂತ ದೇಶಿಕರಿಗೆ ಧ್ವಜಸ್ತಂಭದೊಂದಿಗೆ ಇರುವ ದೇವಾಲಯ ಇಲ್ಲಲ್ಲದೇ ಮತ್ತೆಲ್ಲೂ ಕಂಡು ಬರುವುದಿಲ್ಲ.

ಪ್ರತಿವರ್ಷ ಭಾದ್ರಪದ ಮಾಸದಲ್ಲಿ ಹಂಸ ಧ್ವಜಾರೋಹಣದೊಂದಿಗೆ ದೇಶಿಕರಿಗೆ ಹತ್ತು ದಿನಗಳ ಕಾಲ ಇಲ್ಲಿ ಉತ್ಸವವನ್ನು ಮಾಡುತ್ತಾರೆ. ಸುಮಾರು 40 ವರ್ಷಗಳ ಕಾಲ ಶ್ರೀ ವೇದಾಂತ ದೇಶಿಕರು ಇಲ್ಲೇ ನಿವಸಿಸಿದ್ದರು. ಅವರ ದಿವ್ಯ ತಿರುಮಾಳಿಗೈ ಇಲ್ಲೇ ಇದೆ. ಇವರು ತೋಡಿದ ಬಾವಿಯು ಇಂದಿಗೂ ನಮಗೆ ದರ್ಶನವನ್ನು ನೀಡುತ್ತಿದೆ.



# ಆಳ್ವಾರುಗಳು ಕಂಡ ತಿರುವೇಂಗಡ

**ಕಳೆದ ಸಂಚಿಕೆಯಿಂದ**

- ಎಂ. ಆರ್. ನರಸಿಂಹನ್

ತೀಕ್ಷ್ಣದೃಷ್ಟಿಯನ್ನುಳ್ಳ ಗರುಡನ ಮೇಲೆ ಕುಳಿತ ನನ್ನ ಸ್ವಾಮಿ ವೇಂಗಡದೊಡೆಯನನ್ನು ಶರಣಾಗಲು ಪ್ರಯತ್ನಿಸಿ ನನ್ನ ಬಳೆಗಳು ಸಡಿಲವಾಗಿ ಬಿದ್ದು ಹೋದವು. ನನ್ನ ಮೈ ಕಾಂತಿಯೂ ಮಂಕಾಯಿತು. ನನ್ನ ಸ್ತನಗಳೂ ವಿವರ್ಣಗೊಂಡು ಶೈಥಿಲ್ಯ ಹೊಂದಿದುವು.(8-2-1)

ಪಾಪಪುಣ್ಯಗಳೆಂಬ ದ್ವಿವಿಧ ಸ್ವರೂಪದ ಕರ್ಮಗಳನ್ನು ಇಲ್ಲದಂತೆ ನಾಶಪಡಿಸುವ, ಪ್ರಕೃತಿಯೊಡನೆ ಒಂದಾಗಿ ದೇವಾದಿ ಶರೀರದಲ್ಲಿ ಪ್ರವೇಶಿಸದೇ ಇರುವಂತೆ ಮಾಡಿ ನಮಗೆ ಉಜ್ಜೀವನವನ್ನು ಉಂಟು ಮಾಡುವವನು ನಿಂತ ವೇಂಗಡವು ಶ್ಲಾಘ್ಯವಾದ ಪುಣ್ಯ ಭೂಮಿಯೇ ಸರಿ. ಅದನ್ನು ಬಳಿಸಾರ್ದು. ಆಶ್ರಯಿಸಿ ಶರಣಾಗತಿ ಮಾಡುವವರೇ ದೇವತಾ ಸ್ವರೂಪರು (9-3-8) ಆತಸೀ ಕುಸುಮ ಗಾತ್ರನೂ, ಮೇಘಶ್ಯಾಮ ಕೋಮಲನೂ, ಪೂತನಿಯ ವಿಷಸ್ತನ್ಯಗಳನ್ನು ಉಂಡಬಾಯನ್ನುಳ್ಳವನೂ ಆದ ಮಾಧವನು ವೇಂಗಡದಲ್ಲಿ ನೆಲಸಿರುವನು.(10-5-6)

ತಿರುಮಾಲಿರುಂ ಶೋಲೆಮಲೈಯನ್ನೂ, ಕ್ಷೀರಾಬ್ಧಿಯನ್ನೂ, ನನ್ನ ತಲೆಯನ್ನೂ, ಪರಮಪದವನ್ನೂ, ನನ್ನ ಶರೀರವನ್ನೂ ಮಾಯಾತ್ಮಕವಾದ ನನ್ನ ಆತ್ಮವಸ್ತುವನ್ನೂ, ಮನೋವಾಕ್ಕರ್ಮಗಳನ್ನೂ ಅವನು ಒಂದು ಕ್ಷಣವೂ ಬಿಟ್ಟಿರಲಾರನು. ಜಗತ್ಕಾರಣಭೂತನಾದ ಆ ನನ್ನ ಸ್ವಾಮಿಯು ಒಬ್ಬನೇ ಸರ್ವೇಶ್ವರನಾಗಿದ್ದಾನೆ.

ಆವರಣದಲ್ಲಿ ಸೂಚಿಸಿರುವ ಮೂರು ಅಂಕಿಗಳೂ ಆಯಾ ಶತಕ, ದಶಕ ಮತ್ತು ಸ್ತೋತ್ರ ಸಂಖ್ಯೆಗಳು, ಎಂದರೆ 1-8-3 ಎಂದಾಗ ಒಂದನೆಯ ಶತಕದಲ್ಲಿನ 8ನೇ ದಶಕದ ಮೂರನೆಯ ಪಾಶುರ ಎಂದು ಅರ್ಥ. ಆವರಣದ ಸಂಖ್ಯೆಯನ್ನು ಮೇಲ್ಕಂಡಂತೆ ಗುರುತುಪಡಿಸಿಕೊಳ್ಳಬೇಕು.

ಇನ್ನು ತಿರುವಾಯ್ಮೊಳಿಯ ಮೂರು ದಶಕಗಳಲ್ಲಿ ಸತತವಾಗಿ ತಿರುವೇಂಗಡವನ್ನು ಹಾಡಿರುವ ರೀತಿಯನ್ನು ಗಮನಿಸೋಣ. ಈ ಕೆಳಗಿನದು ತೃತೀಯ ಶತಕದ ತೃತೀಯ ದಶಕದ

ಹತ್ತು ಪಾಶುರಗಳ ಮತ್ತು ಹನ್ನೊಂದನೆಯ ಮಂಗಳ ಶ್ಲೋಕದ ಅರ್ಥ ವಿವರಣವು.

ಶ್ರೀ ವೇಂಕಟಾದ್ರಿಯಲ್ಲಿ ವಾಸಮಾಡುವ ದಿವ್ಯ ತೇಜೋಮಯನಾದ ನಮ್ಮ ಕುಲಪರಂಪರೆಗೆ ನಾಥನೆನಿಸುವ ಸ್ವಾಮಿಗೆ ನಾವು ಅವಿಚ್ಛಿನ್ನವಾಗಿ ಸರ್ವದೇಶ, ಸರ್ವಕಾಲ, ಸರ್ವ ವ್ಯವಸ್ಥೆಗಳಲ್ಲೂ ಸರ್ವವಿಧ ಕೈಂಕರ್ಯ ಮಾಡಬೇಕು. ನಮ್ಮ ಪರಂಪರೆಗೆ ಪ್ರಥಮನಾದವನೇ, ನಿತ್ಯ ಸೂರಿಗಳು ಅವರ ಮುಖ್ಯಸ್ಥರಾದ ವಿಷ್ವಕ್ಸೇನರೊಡಗೂಡಿ ಅರ್ಚಿಸಿದ ಪುಷ್ಪಗಳು ಪರಮಾತ್ಮನ ಸ್ಪರ್ಶ ಮಾತ್ರದಿಂದ ವಿಕಸನ ಹೊಂದಿ ಚೆಲ್ಲಾಡಿರುವಂತಹ ತಿರುವೇಂಗಡದಲ್ಲಿ ವಾಸಮಾಡುವುದರಿಂದ ಪರಮ ಪದವನ್ನು ಬಯಸಿ ನಾವು ಹೋಗಬೇಕಾದ ಪ್ರಮೇಯವೇ ಇಲ್ಲ.

ತನ್ನ ಸ್ವಾಮಿತ್ವ ಪ್ರಕಾಶದಿಂದಲೂ, ತದನುಗುಣವಾದ ಆಶ್ಚರ್ಯಗುಣ ಚೇಷ್ಟಿತನೂ, ಸೌಂದರ್ಯಶಾಲಿಯೂ, ಕಮಲ ನೇತ್ರನೂ, ತೊಂಡೆಯ ಹಣ್ಣಿನಂತಹ ಅಧರವುಳ್ಳವನ್ನೂ, ನೀಲ ರತ್ನದ್ಯುತಿ ಪ್ರಕಾಶನೂ, ನಿರ್ಮಲವಾದ ಪ್ರವಾಹ ಜಲದಿಂದ ಕೂಡಿದ ವೇಂಕಟಾದ್ರಿಯಲ್ಲಿ ವಾಸವಾಗಿರುವ ಅಸಂಖ್ಯಾತ ಕಲ್ಯಾಣ ಗುಣಗಳನ್ನುಳ್ಳ ನಿತ್ಯಸೂರಿಗಳಿಗೆ ಸ್ವಾಮಿಯಾದನು.

ಅತ್ಯಂತ ನೀಚನೂ,ಗುಣಹೀನನೂ ಆದ ನನ್ನಲ್ಲಿಯೂ ಅತ್ಯಂತ ಪ್ರೀತಿಯನ್ನು ಇಟ್ಟಿರುವ ಪರಂಜ್ಯೋತಿ ಸ್ವರೂಪನಾದ ತಿರುವೇಂಗಡದೊಡೆಯನನ್ನು ಈತನು ನಿತ್ಯಸೂರಿಗಳಿಗೆ ಅಧಿಪತಿಯೆಂದು ಪ್ರಶಂಸಿಸಿದರೆ ಅದರಲ್ಲಿ ಅತಿಶಯವಿರುತ್ತದೆಯೆ? ವೈದಿಕರ ವೇದಶಾಸ್ತ್ರಾದಿಗಳಲ್ಲಿ ವಿವರಿಸಲ್ಪಟ್ಟ ಭೋಗ್ಯತಾತಿಶಯವೂ ನಿರ್ದೋಷಯುಕ್ತವೂ ಆದ ಕಲ್ಯಾಣ ಗುಣ ಪರಿಪೂರ್ಣನಾದ ತಿರುವೇಂಗಡದೊಡೆಯನನ್ನು **'ಉಜ್ವಲ ವಿಗ್ರಹ ವಿಶಿಷ್ಟ'** ಸಕಲ ಲೋಕ ಸಂಸೇವ್ಯವಾದ ಆದಿ ಮೂರ್ತಿ ಎಂದು ಕರೆದರೆ ಅವನ ಮಹಿಮೆಗೆ ಸಾಕಾಗುವುದೋ? ವೇಂಗಡದಲ್ಲಿ ನಿತ್ಯವಾಸ ಮಾಡುವ ಸ್ವಾಮಿಗೆ ತಕ್ಕಂತೆ ನಮೋ ವಾಚಕವಾದ ಈ ಉಕ್ತಿ ವ್ಯಾಪಾರವನ್ನು ತಮ್ಮ ಶಿರದಲ್ಲಿ ಧರಿಸಿದವರಿಗೆ (ಎಂದರೆ ಅವನನ್ನು ಆಶ್ರಯಿಸಿದವರಿಗೆ) ಋಣ ರೂಪವಾದ ಪೂರ್ವಾರ್ಜಿತ ಪಾಪಗಳೂ, ಉತ್ತರಾಘುಗಳೂ ಕೂಡ ಸಂಪೂರ್ಣವಾಗಿ ದಗ್ಧವಾಗಿ ಬಿಡುವುವು.

ಇದು ನಿಜವು, ಆಶ್ರಿತರಾದವರು ತಮ್ಮ ಸ್ವರೂಪಕ್ಕೆ ಅನುಗುಣವಾದ ಭಗವದನುಭವವನ್ನೇ ಮಾಡಿ ಶುದ್ಧ ವೃತ್ತರಾಗುವರು.

ಶ್ಲಾಘ್ಯವಾದ ಪುಷ್ಪ, ಪರಿಶುದ್ಧವಾದ ಉದಕ, ವಿಲಕ್ಷಣವಾದ ಧೂಪದೀಪಾದಿಗಳನ್ನು ಕೊಂಡು ಬಂದು ನಿತ್ಯ ಸೂರಿಗಳೂ ಕೂಡ ಸೇನಾಧಿಪತಿ ಸಮೇತರಾಗಿ ಅತ್ಯಾದರದೊಡನೆ ಶ್ರೀತಿರುವೇಂಗಡದೊಡೆಯನನ್ನು ಆರಾಧಿಸಿ ಕೃತಾರ್ಥರಾಗುವುದರಿಂದ ವಿಸ್ತೀರ್ಣವಾದ ಈ ಪರ್ವತವೇ ನಮಗೆ ಪರಮ ಸಾಮ್ಯವನ್ನುಂಟು ಮಾಡುವ ಮೋಕ್ಷವನ್ನು ತರುವುದು.

ಶೀತದಿಂದ ಕೂಡಿದ ವರ್ಷಾಘಾತವನ್ನು ತಡೆಯಲು ಗೋವರ್ಧನ ಗಿರಿಯನ್ನು ಎತ್ತಿ ರಕ್ಷಿಸಿದನು. ಆಕ್ರಮಿಸಲ್ಪಟ್ಟ ಭೂಮಿಯನ್ನು ಅಳೆದು ವ್ಯಾಪಿಸಿದನು. ಇಂತಹ ಪರಮ ಶೇಷಿಯಾದ ಭಗವಂತನು ತಿರುವೇಂಗಡದ ಮಲೆಯನ್ನು ಸೇರಿದನು.

ಈ ಮಲೆಯೊಂದನ್ನು ಆಶ್ರಯಿಸುವುದರಿಂದಲೇ ನಮ್ಮ ಪಾಪಗಳು ನಷ್ಟಗೊಳ್ಳುವುವು. ತಿರುವೇಂಗಡದಲ್ಲಿ ನಿಂತಿರುವ ಕೃಷ್ಣ ರೂಪಿಯಾದ ಭಗವಂತನ ಪಾದಾರವಿಂದಗಳನ್ನು ಮನೋವಾಕ್ಕಾಯಗಳಲ್ಲಿ ನಿಲ್ಲಿಸಿಕೊಳ್ಳುವವರಿಗೆ ಜರಾ ಮರಣ ಪುನರ್ಜನ್ಮಾದಿಗಳು ಮತ್ತು ವ್ಯಾಧಿಗಳೂ ನಾಶಗೊಳ್ಳುತ್ತವೆ.

ವಿಸ್ತೃತವಾದ ಫಣಗಳಿಂದ ಕೂಡಿದ ಆದಿಶೇಷನನ್ನು ಶಯನವಾಗುಳ್ಳ ಸರ್ವೇಶ್ವರನು ನಿತ್ಯವಾಸ ಮಾಡುವ ತಿರುವೇಂಗಡದ ಸಾನು ಪ್ರದೇಶವನ್ನು ನಿಮ್ಮ ಆಯುಃ ಪರಿಮಿತಿಯ ಮುಕ್ತಾಯ ಕಾಲವು ಸಮೀಪಿಸಿ, ವೃಕ್ಷಷಂಡ ರಂಜಿತವಾದ ಕುರುಗೂರಿನ ಶಠಗೋಪರು ರಚಿಸಿದ ಅಸದೃಶವಾದ ಸಾವಿರ ಪಾಶುರಗಳಲ್ಲಿನ ಈ ದಶಕವನ್ನು ಅರಿತವರು ಕೈಂಕರ್ಯ ಸಾಮ್ರಾಜ್ಯವನ್ನು ಹೊಂದಿ ಲೋಕದವರೆಲ್ಲಾ ಸ್ತೋತ್ರ ಮಾಡುವಂತೆ ಬಾಳುವರು.

ಇನ್ನು ಷಷ್ಠಮ ಶತಕದ ದಶಮ ದಶಕದಲ್ಲಿ ತಿರುವೇಂಗಡವನ್ನು ಕೀರ್ತಿಸಿ ಧನ್ಯರಾಗೋಣ.

**- ಮುಂದುವರೆಯುತ್ತದೆ.**

ಕಳೆದ ಸಂಚಿಕೆಯಿಂದ

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

ಆರ್ಚಿರಾದಿಗತೇ ರ್ಮಾರ್ಗಚಿಂತಾಧ್ಯಾಯಂ ಶುಭಾವಹಂ
ಪಠೇಯರನಘಂ ವಿಪ್ರಾಶ್ಚಾನ್ಯಾ ಬ್ರಹ್ಮಪರಾಃ ಸ್ತುತಿಃ
ಮಾನುಷಿಂ ಚ ಋಷಿಪ್ರೋಕ್ತಾಂ ಸ್ತುತಿಂ ಚ ಮಹೋದತ್ಸವೇ
ಉಲೂಖತೇ ಚ ಮುಸಲಂ ಕಾಯಮಾನೇ ಮನೋಹರೇ
ಸ್ಥಾಪಯಿತ್ವಾ ಹರಿದ್ರಾಂ ವೈ ದಾಸೀಭಿಃ ಕೇಶವಸ್ಯ ಚ
ಚೂರ್ಣೀಕೃತ್ಯ ತತೋ ಮಂತ್ರೇ ಪರಿಷ್ಕಾರಂ ಚರೇದ್ಬುಧಃ

(ಬೇರೊಂದು ಸಂಹಿತೆಯಲ್ಲಿ- ಬ್ರಾಹ್ಮಣರು ಅರ್ಚನಾವಿಧಿಯಲ್ಲಿ ಅರ್ಚನೆಗೆ ಸಂಬಂಧಿಸಿದ, ಶುಭಕರವಾದ, ಅನಘವಾದುದನ್ನು ಅಧ್ಯಾಯವನ್ನು ಓದತಕ್ಕದ್ದು. ಬ್ರಹ್ಮ ವಿಷಯದಲ್ಲಿನ ಇತರ ಸ್ತೋತ್ರಗಳನ್ನು ಪಠಿಸತಕ್ಕದ್ದು. ಹಿರಿಯರ ಉತ್ಸವಗಳಲ್ಲಿ ಋಷಿಪ್ರೋಕ್ತವಾದ ಮನುಷ್ಯ ಕೃತ ಸ್ತುತಿಯನ್ನು (ದಿವ್ಯಪ್ರಬಂಧಗಳನ್ನು) ಪಾರಾಯಣ ಮಾಡತಕ್ಕದ್ದು. ಪಂಡಿತನಾದವನು ಸುಂದರವಾದ ಹಂದಿರದಲ್ಲಿ ಒರಳು-ಒನಕೆಗಳನ್ನು ಕೇಶವದಾಸಿ ಜನರಿಂದ ಅರಿಶಿನವನ್ನು ಕುಟ್ಟಿಸಿ ಅನಂತರ ಮಂತ್ರಗಳಿಂದ ಶ್ರೀಚೂರ್ಣವನ್ನು ತಯಾರಿಸಿ ಪರಿಷ್ಕಾರವನ್ನು ಮಾಡತಕ್ಕದ್ದು.

**ತಿರುಪತಿಯಲ್ಲಿ ಶ್ರೀ ಗೋವಿಂದರಾಜು ಸ್ವಾಮಿಯ ಆರಾಧನಾ ಕ್ರಮ :**

ಬ್ರಹ್ಮಾಂಡ ಪುರಾಣದ ಹತ್ತನೇ ಅಧ್ಯಾಯವಾದ (10ಅಧ್ಯಾಯವನ್ನೊಳಗೊಂಡು) ಶ್ರೀ ವೇಂಕಟಾಚಲ ಮಹಾತ್ಮೆಯಲ್ಲಿ ನಾರದ ಮಹರ್ಷಿ

ನಾರಾಯಣ ಮಹಾದ್ರಷ್ಟುಂ ಕದಾಚಿತ್ ಕ್ಷೀರಸಾಗರಂ
ಆಗತ ಸ್ತತ್ರಚಾದ್ರಕ್ಷಂ ಶ್ವೇತದ್ವೀಪಂ ಮಹೋಚ್ಛ್ರಿದಂ

(ಒಂದಾನೊಂದು ಕಾಲದಲ್ಲಿ ನಾನು ಶ್ರೀಮನ್ನಾರಾಯಣನನ್ನು ನೋಡಲೆಂದು ಕ್ಷೀರಸಾಗರಕ್ಕೆ ಬಂದು ಅಲ್ಲಿ ಮಹೋನ್ನತವಾದ ಶ್ವೇತ ದ್ವೀಪವನ್ನು ನೋಡಿದನು)ಪವನನೇ ಇತ್ಯಾದಿಗಳಿಂದ ತಾವು ಕ್ಷೀರಸಾಗರಕ್ಕೆ ಪ್ರಸ್ತಾವನೆಗೊಂಡು ಶ್ರೀಮನ್ನಾರಾಯಣನನ್ನು ದರ್ಶಿಸಿ ತೆಗೆದುಕೊಂಡು ಪಾದಾಭಿವಂದನೆ ಮಾಡಲು ಶ್ರೀ ವಿಷ್ಣು,

"ಶ್ರದ್ಧಯಾ ಶ್ರಯಾತಾಂ ವತ್ಸ ತ್ವಯಾ ದೃಷ್ಟಂ ಜಗತ್ರಯಂ
ಬ್ರಹ್ಮಾಂಡೇ ಕುತ್ರ ವಾದೇಶೇ ಮಮ ವಾಸೋ ಭವೇ ದಿಹಾ
ವಿಹಾರ ಯೋಗ್ಯಂ ಚ ತಥಾ ವಿಶ್ರಮಸ್ಥಾನ ಮುತ್ತಮಮಂ
ಕಥಯ ತ್ವಂ ಮಹಾಭಾಗ ಯದ್ಯಸ್ತಿ ಭುವಿ ತಾದೃಶಂ



(ವತ್ಸಾ! ಶ್ರದ್ಧೆಯಿಂದ ಕೇಳು-ನೀನು ಮೂರು ಲೋಕಗಳನ್ನು ನೋಡಿರುವೆ. ಬ್ರಹ್ಮಾಂಡದಲ್ಲಿ ಯಾವ ದೇಶ ನನ್ನ ವಾಸಕ್ಕೆ ಯೋಗ್ಯವಾದುದು? ನನ್ನ ವಿಹಾರಕ್ಕೆ, ವಿಶ್ರಾಂತಿ ಉತ್ತಮವಾದುದು ಯಾವುದು? ಭೂಲೋಕದ ಎಲ್ಲಾ ಪ್ರದೇಶಗಳನ್ನು ಪರಿಶೀಲಿಸಿ ಮಹಾನುಭಾವ ನನಗದನ್ನು ಹೇಳು) ಹೀಗೆ ತಮಗುಚಿತವಾದ ವಾಸಸ್ಥಾನವ್ಯಾವುದೆಂದು ಮೊದಲು ತಿಳಿಸಿದಂತೆ ಪ್ರಶ್ನಿಸಿ ನುಡಿಯಲು ನಾರದ ಮುನಿಗಳು-

ತವ ಪಾದ ಪ್ರಸೂತಾಯಾ ಗಂಗಾಯಶ್ಚೈವ ದಕ್ಷಿಣೇ
ದಿಗ್ಭಾಗೇ ದಂಡಕಾರಣ್ಯೇ ಯೋಜನ್ಯೆ ರ್ದೀರ್ಪ್ಯಶತರ್ಮಿತೇ
ದಕ್ಷಿಣಾಂಬು ನಿಧೇಶ್ಚಾಪಿ ದಕ್ಷಿಣೇತರ ಭಾಗಕೇ
ಪೂರ್ವಾರ್ಬ್ಧೇಃ ಪಶ್ಚಿಮೇ ಭಾಗೇ ಪಂಚಭಿರ್ಯೋಜನೈರಿತೇ
ರಮಣೀಯ ಮಿದಂ ಸ್ಥಾನಂ ಕ್ರೀಡಾ ಯೋಗ್ಯಂ ವಿಭೋಸ್ತವ"

(ಪ್ರಭೂ! ನಿನ್ನ ಪಾದದಿಂದ ಆವಿರ್ಭವಿಸಿದ ಗಂಗಾ ನದಿಯ ದಕ್ಷಿಣ ದಿಗ್ಭಾಗದಲ್ಲಿ ಇನ್ನೂರು ಯೋಜನೆ ಗಡಿ ಹೊಂದಿರುವ ದಂಡ ಕಾರಣ್ಯದಲ್ಲಿ, ದಕ್ಷಿಣ ಸಮುದ್ರದ ಉತ್ತರದಲ್ಲಿ ಪೂರ್ವ ಸಮುದ್ರದ ಪಶ್ಚಿಮ ಭಾಗದಲ್ಲಿ ಐದಂಗುಲ ಪರಿಧಿಯ ಪಶ್ಚಿಮ ಭಾಗದಲ್ಲಿರುವ ಪ್ರದೇಶವು ರಮಣೀಯವಾಗಿಯೂ ನಿನ್ನ ವಾಸಸ್ಥಾನಕ್ಕೆ ವಿಹಾರಕ್ಕೆ ಯೋಗ್ಯವಾಗಿದೆ.)

ಹೀಗೆ ಸಾಕಷ್ಟು ಗುರುತುಗಳೊಂದಿಗೆ ತಿರುಮಲೆ ಬೆಟ್ಟವೇ ನಿತ್ಯ ವಾಸಯೋಗ್ಯವೆಂದು ನುಡಿಯಲು ಶ್ರೀ ಹರಿ ಕೇಳಿ -

**ಫೆಬ್ರವರಿ ತಿಂಗಳ ರಸಪ್ರಶ್ನೆಯ ಉತ್ತರಗಳು**

01. ನಮಃ ಶಿವಾಯ
02. ದುರ್ಯೋಧನ
03. ವ್ರತರಾಜ
04. ಭೃಗು
05. ಚಿದಂಬರಂ
06. ಶ್ರೀಪತಿ
07. ವೆಂಕಟೇಶ್ವರ
08. ತೊಡುತ್ತಮಾಲೆ
09. ದೈವಿಕ ಶಕ್ತಿ ಭರಿತ ಆಧ್ಯಾತ್ಮಿಕ ಮಾಸ
10. ಭಕ್ತಿ
11. ಕೊಡಲ್ ವಳ್ಳೈಚ್ಚು
12. ವೆಂಕಟಾದ್ರಿ
13. ಬ್ರಾಹ್ಮಿ ಮುಹೂರ್ತ
14. ಅಂಗದ
15. ಮರಳಯ್ಯ

"ಅಥಾಽಹಾ ಭಗವಾನ್ ಶೇಷ
ಮಹಾಯ ಪುರತಃ ಸ್ಮಿತಮ್
ಮೇಘ ಗಂಭೀರಯಾ ವಾಚಾ
ಹರ್ಷೋತ್ಫುಲ್ಲ ವಿಲೋಚನಃ

(ನಂತರ ಆನಂದವಿಕಸಿತವದನನಾದ ಭಗವಂತನು ಎದುರಲ್ಲಿದ್ದ ಶೇಷನನ್ನು ಕರೆದು ಮೇಘ ಧ್ವನಿ ಗಂಭೀರವಾದ ನುಡಿಗಳಿಂದ ಹೀಗೆಂದನು)

**ಶ್ರೀ ಭಗವಾನುವಾಚ -**

"ಅನಂತ ಮತ್ಪ್ರಿಯಾ ಲೋಕೇ ನ ತ್ವದೋನ್ಯಸ್ತಿ ಕಶ್ಚನ
ತಸ್ಮಾನ್ಮಮ ಪ್ರಿಯಂ ಕಿಂಚಿತ್ಕರ್ತವ್ಯಂ ಭವತಾ ನವಂ
ಶ್ರೂಯತಾಂ ಭವತಾ ಸರ್ವಂ ನಾರದೇನೇರಿತಂ ವಚಃ
ಕ್ರೀಡಾ ಸಮುಚಿತೇ ದೇಶೇ ವಸ್ತವ್ಯಮಿತಿ ಮೇ ಮತಿಃ
ತತ್ರ ಭೂತ್ವಾ ಗಿರಿವರೋ ಭವಾನ್ ವಸತು ಭೂತಲೇ
ತ್ವತ್ಫಣಾಮಂಡಲಭುವಿ ಸ್ಥಾತವ್ಯಂ ರಮಯಾ ಸಹಾ"

(ಅನಂತಾ! ನಿನ್ನಷ್ಟು ಪ್ರಿಯವಾದವರು ಈ ಇಡೀ ಲೋಕದಲ್ಲಿ ನನಗಿನ್ನೊಬ್ಬರು ಇಲ್ಲ. ಆದ್ದರಿಂದ ನೀನು ನನಗೆ ಪ್ರಿಯವಾದ ಹೊಸದೊಂದು ಕೆಲಸವನ್ನು ಮಾಡಬೇಕು. ನಾರದರು ಹೇಳಿದ್ದನ್ನು ಕೇಳಿಸಿಕೊಂಡಿರುವೆ.

ವಿಹಾರಯೋಗ್ಯವಾದ ಪ್ರದೇಶದಲ್ಲಿ ನಾನಿರಲು ನಿರ್ಣಯಿಸಿರುವುದನ್ನು ಕೇಳಿಕೋ. ವಿಹಾರಯೋಗ್ಯವಾದ ಸ್ಥಳದಲ್ಲಿ ವಾಸಿಸಬೇಕೆಂಬುದು ನನ್ನ ನಿರ್ಣಯವು. ಆದ್ದರಿಂದ ನೀನು ಗಿರಿರಾಜನಾಗಿರು. ನಿನ್ನ ಮೇಲಿರುವ ಕ್ಷಣಾಮಂಡಲ ದೇಶದಲ್ಲಿ ರಮೆಯೊಂದಿಗಿರುವೆ.)

(ಮುಂದುವರೆಯುತ್ತದೆ)

# ಶ್ರೀ ವೇಂಕಟಾಚಲ ಮಹಾತ್ಮ್ಯ


ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್

ಅನುವಾದ – ಶ್ರೀಮತಿ. ಎನ್. ಪಾರ್ವತಿ

**ಕಳೆದ ಸಂಚಿಕೆಯಿಂದ**

‘ನೀನು ಪರಬ್ರಹ್ಮಸ್ವರೂಪನೆಂದು ನಿನ್ನ ವಕ್ಷಸ್ಥಳದಲ್ಲಿ ಸ್ಥಿರವಾಗಿ ನೆಲೆಸಿದ್ದೇನೆ. ಆದರೆ ಇಂದು ಪರಪುರುಷನು ಒದ್ದಾಗ, ಆ ಋಷಿಯನ್ನೇ ತುಂಬಾ ಪ್ರಿಯನೆಂದು ಪರಿಗಣಿಸಿದ್ದೀಯಾ. ಭೃಗುವನ್ನು ಗೌರವಿಸಿದ್ದೀಯಾ. ಇದು ನನಗೆ ಮಾಡಿದ ಅವಮಾನ. ಈ ಅವಮಾನವನ್ನು ನಾನು ಸಹಿಸಲಾರೆ. ನಾನು ದೂರದ ಸ್ಥಳಕ್ಕೆ ಹೋಗಿ ನಿನ್ನನ್ನು ಕುರಿತು ತಪಸ್ಸು ಮಾಡುತ್ತೇನೆ’ ಎಂದಳು.

ಹರಿ ಲಕ್ಷ್ಮಿಯನ್ನು ಸಮಾಧಾನಪಡಿಸಲು ಸಿರಿ! ಆ ಋಷಿಯ ಒದೆತವು ಒಳ್ಳೆಯ ಫಲಿತಾಂಶಗಳನ್ನೇ ನೀಡುತ್ತವೆ ಎನ್ನಲು ಲಕ್ಷ್ಮಿ ಹೇಳಿದಳು. “ಚೆನ್ನಾಗಿ ಹೇಳಿದಿರಿ. ನೀನು ಆತ್ಮಗಳ ಆತ್ಮ. ನೀನು ವಿಶ್ವಕಾರಕನು. ನಿನ್ನನ್ನು ಪೂಜಿಸದೆ ಕೋಪದಿಂದ ಬಂದ ಭೃಗು ನಿನ್ನನ್ನು ಒದ್ದನು. ಆದರೂ ನೀನು ಅವನ ಅಪರಾಧವನ್ನು ಅಂಗೀಕರಿಸುವುದು ಸರಿಯಲ್ಲ. ಅಲ್ಲದೆ, ಸಮರ್ಥಿಸಿಕೊಳ್ಳುತ್ತಿರುವೆ”.



ಲಕ್ಷ್ಮಿಯ ಕೋಪವನ್ನು ಅರ್ಥಮಾಡಿಕೊಂಡ ಹರಿ ಒಂದು ಕ್ಷಣ ಮೌನವಾಗಿದ್ದು “ಸಿರಿ” ಒಮ್ಮೆ ಯೋಚಿಸು. ಬ್ರಹ್ಮ ನಿನ್ನ ಮಗ. ಭೃಗು ವಿಧಾತನ ಮಗ. ಅವನು ಅಂತರಗಳನ್ನು ತಿಳಿಯದವನು. ಅಲ್ಲದೆ ನಾನು ಪರಮಾತ್ಮನೆಂದು ಭೃಗುವಿಗೆ ತಿಳಿದಿಲ್ಲ ಎಂದನು. ಅದಕ್ಕೆ ಲಕ್ಷ್ಮಿಯು “ಋಷಿ ಪಾದಗಳು ಸೋಕಿರುವ ಸ್ಥಳದಲ್ಲಿ ನಾನು ಇರುವುದು ಸರಿಯಲ್ಲ. ನಿನ್ನಿಂದ ದೂರ ಹೋಗಿ ನಿನ್ನನ್ನು ಆರಾಧಿಸುವುದೇ ಸೂಕ್ತ ಎಂದು ತೋರುತ್ತದೆ. ಸರಿಯೆಂದರೆ ಈಗಲೇ ಹೊರಡುತ್ತೇನೆ” ಎನ್ನಲು ಹರಿಯು ಸಿರಿಗೆ ಹೇಳಿದನು.

“ನಿಜ! ವಿರಿಂಚಿ ನನ್ನಮಗ. ಭೃಗು ಮೊಮ್ಮಗ. ಮಗನ ಮಗ. ನಾನು ಆ ಋಷಿಯನ್ನು ಮಗುವಿನಂತೆ ನೋಡುತ್ತೇನೆ. ಗರ್ಭದಲ್ಲಿರುವ ಮಗು ಒದ್ದರೆ, ತಾಯಿ ಮಗುವಿನ ಮೇಲೆ ಕೋಪಗೊಳ್ಳುತ್ತಾಳೆಯೇ? ನನ್ನ ಹೊಟ್ಟೆಯಲ್ಲಿ ಜೀವ ಕೋಟಿಯನ್ನು ತುಂಬಿ ಕೊಂಡಿರುವ ನಾನು ಕೋಪಗೊಳ್ಳಬಹುದೇ ಆದರೂ ಭೃಗು ಸಾಮಾನ್ಯನಲ್ಲ. ಅವನು ಬ್ರಹ್ಮ ಕುಮಾರ ಬ್ರಾಹ್ಮಣ. ತಪಸ್ವಿ ಇದಲ್ಲದೆ, ಅವನು ತತ್ವವೇದಿ. ನನ್ನ ಭಕ್ತ, ನನಗೆ ತುಂಬಾ ಪ್ರಿಯನು ಮತ್ತು ನಾನು ಭಕ್ತನ ಪರ. ಅಂತಹ ವ್ಯಕ್ತಿಯ ಸಣ್ಣ ತಪ್ಪನ್ನು ದೊಡ್ಡದು ಮಾಡುವುದು ನ್ಯಾಯವಲ್ಲ. ಎಲ್ಲವನ್ನೂ ಮರೆತುಬಿಡು, ಯಾವಾಗಲೂ ಶಾಂತವಾಗಿರು” ಎಂದು ಹೇಳಿದ ನಂತರವೂ ಲಕ್ಷ್ಮಿ ಶಾಂತವಾಗಲಿಲ್ಲ.

ಏನೇ ಇರಲಿ, ಭೃಗು ನನ್ನ ದೃಷ್ಟಿಯಲ್ಲಿ ಪರಪುರುಷನೇ. ಪರಪುರುಷನ ಸ್ಪರ್ಶ ನನಗೆ ಕಂಟಕಮಯ. ಆ ಕಾರ್ಯವನ್ನು

ಸಮರ್ಥಿಸಿದರೆ, ನಾನು ಪತಿವ್ರತೆಯೇ ಅಲ್ಲ ಎನ್ನುತ್ತಾ ಪತಿಯು ಭೃಗುವನ್ನು ಬ್ರಾಹ್ಮಣೋತ್ತಮನೆಂದಿದ್ದನ್ನು ಲೆಕ್ಕಿಸದೇ ಬ್ರಾಹ್ಮಣನನ್ನು ಶಪಿಸಿದಳು. ಬ್ರಾಹ್ಮಣರು ದೇವತೆಗಳ ಶತ್ರುಗಳಾದ ರಾಕ್ಷಸರ ಬೇಟೆಯಾಗಲಿ! ಅವರು ದೇವತೆಗಳಿಗೆ ಲಾಭದಾಯಕವಲ್ಲದವರಾಗಲಿ. ಅವರು ತಮ್ಮ ಶಾಶ್ವತ ಕರ್ತವ್ಯಗಳನ್ನು ತ್ಯಜಿಸಿ ದೀನರೊಂದಿಗೆ ಸಹವಾಸ ಮಾಡಲಿ! ಅವರು ಬಡವರಾಗಲಿ! ಅವರು ತಮ್ಮ ಜ್ಞಾನವನ್ನು ಮಾಡಲಿ! ಎಂದು ಶಪಿಸಿದಳು.

ನೀವು ಎಷ್ಟೇ ಸಮರ್ಥನೆ ನೀಡಿದರೂ ನಿಮ್ಮ ತಪ್ಪನ್ನು ಒಪ್ಪಿ ಕೊಳ್ಳಲಾಗುವುದಿಲ್ಲ. ವಿಪ್ರನನ್ನು ಶಿಕ್ಷಿಸದಿರುವುದು ತಪ್ಪು ಎಲ್ಲರೂ ನಿನ್ನನ್ನು ಹೇಡಿ ಎಂದು ಕರೆಯುತ್ತಾರೆ. ಈ ಕಾರಣಕ್ಕಾಗಿ ಒಬ್ಬ ಸಾಮಾನ್ಯ ಅಥವಾ ದರೋಡೆಕೋರ ಕೂಡ ನಿಮ್ಮನ್ನು ಹೊಡೆಯಲು ಧೈರ್ಯ ಮಾಡುತ್ತಾರೆ. ಮಹಿಳೆಯರು ಸಹ ನಿಮ್ಮನ್ನು ಕಲ್ಲಿನಿಂದ ಹೊಡೆಯುತ್ತಾರೆ. ಏನೇ ಆದರೂ ನಿಮಗೆ ಮತ್ತು ನನಗೆ ಶಾಂತಿ ಇಲ್ಲ.

ನಾನು ಸದಾ ನಿನ್ನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತೇನೆ. ಇದಲ್ಲದೆ, ನಿನ್ನ ಸಮರ್ಥನೆಗಳನ್ನು ಬೆಂಬಲಿಸಿ ಸೈ ಎನ್ನುತ್ತಾ ವಕ್ಷಸ್ಥಳ ವಾಸಿಯಾಗಿರಲಾರೆ ಎಂದಳು. ತಾನು ಇಷ್ಟೆಲ್ಲಾ ಮಾತುಗಳಾಡುತ್ತಿದ್ದರೂ ಹರಿಯಲ್ಲಿ ಯಾವುದೇ ಬದಲಾವಣೆಯನ್ನು ಕಾಣದಿದ್ದರಿಂದ ಲಕ್ಷ್ಮಿಯು ಸ್ವಾಭಿಮಾನದಿಂದ ಕೊಲ್ಹಾಪುರಕ್ಕೆ ಹೋದಳು. ಅಲ್ಲಿನ ಜನರಿಗೆ ಆರಾಧ್ಯದೇವಿಯಾದಳು ಎಂದು ಸೂತನು ಹೇಳಿದಾಗ, ಶೌನಕಾದಿಯರು ಲಕ್ಷ್ಮಿದೇವಿ ಹೋದ ನಂತರವೂ ಸ್ವಾಮಿ ವೈಕುಂಠದಲ್ಲಿದ್ದಾನೆಯೇ? ಅಥವಾ ಇಲ್ಲವೇ? ಲಕ್ಷ್ಮಿ ಹೋದ ಮೇಲೆ ಜೀವನವನ್ನು ಹೇಗೆ ಕಳೆದನು ಎಂದು ಕೇಳಿದರು. ಅದಕ್ಕೆ ಸೂತನು ನಂತರದ ವೃತ್ತಾಂತವನ್ನು ವಿವರಿಸಿದನು.

ಲಕ್ಷ್ಮಿದೇವಿಯು ಕೊಲ್ಹಾಪುರಕ್ಕೆ ಹೊರಟ ಮೇಲೆ ಹರಿಗೆ ವಿರಹತಾಪ ಹೆಚ್ಚಾಯಿತು. ನಾರದನು ವೆಂಕಟಾದ್ರಿಯಲ್ಲಿ ಇಲ್ಲ ಎಂದು ಬ್ರಹ್ಮನಿಗೆ ಹೇಳುವುದು. ಅಜನು ನಾರದನನ್ನು ಋಷಿಗಳ ಬಳಿಗೆ ಹೋಗಲು ಆದೇಶಿಸಿವುದು, ಮುಕ್ತಿಪ್ರದನು ಯಾರೆಂದು ಕಂಡು ಹಿಡಿಯಲು ಭೃಗುವು ಬರುವುದು, ಭೃಗು ಕೋಪದಿಂದ ಎದೆಗೆ ಒದೆಯುವುದು, ತನಗೆ ಅವಮಾನವಾಗಿದೆಯೆಂದು ಲಕ್ಷ್ಮಿ ಹೊರಟು ಹೋದಳು ಎಂದರೇನು?



ಕರ್ಮದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಲಕ್ಷ್ಮೀ ದೈಹಿಕವಾಗಿ ಹೊರಟುಹೋದರೂ, ಚಂದ್ರನು ತನ್ನ ಪ್ರತಿರೂಪವನ್ನು ಬಿಡದಂತೆಯೇ ಆ ಲಕ್ಷ್ಮಿಯು ಸೌಭಾಗ್ಯ ಲಕ್ಷ್ಮಿಯಾಗಿ ನನ್ನೊಳಗೆ ನೆಲೆಸಿದ್ದಾಳೆ.

ನಾನು ಲಕ್ಷ್ಮೀ ದೇವಿಯ ಹೃದಯದಲ್ಲಿಯೇ ಇರುತ್ತೇನೆ ಮತ್ತು ಆ ಲಕ್ಷ್ಮಿಯನ್ನು ಖಂಡಿತವಾಗಿಯೂ ನನ್ನ ಹೃದಯದಲ್ಲಿಯೇ ಇಟ್ಟುಕೊಳ್ಳುತ್ತೇನೆ ಎಂದುಕೊಂಡನು.

ನಂತರ ತನ್ನ ಸರ್ವಜ್ಞತ್ವವನ್ನು ಮರೆ ಮಾಚಿದನು. ರಮಾವನಿತ ಕುರಿತು ಕಾಳಜಿ ಇಲ್ಲ. ಅವನು ನಿರ್ದಯಿ ಎಂದು ಎಲ್ಲರೂ ಹೇಳುತ್ತಿದ್ದರು. ಜನರ ವ್ಯವಹಾರಗಳಲ್ಲಿ ಮುಳುಗಿದನು. ರಮಾದೇವಿ ಎಲ್ಲಿದ್ದಾಳೆಯೇ ಎಂದು ತಿಳಿಯಲು ಬಯಸಿದನು.

ಭೂನೀಳನು ಪರದೂಲರ ರಕ್ಷಣೆ ಇಟ್ಟುಕೊಂಡನು. ರಮಾದೇವಿಯನ್ನು ಹುಡುಕುತ್ತಾ ಹೋಗುತ್ತಿದ್ದೇನೆ ಎಂದು ಭೂನೀಳಾದಿಯರನ್ನು ನಂಬಿಸಿದನು.

ವೈಕುಂಠವನ್ನು ರಕ್ಷಿಸಲು ಭೂನೀಳರಿಗೆ ಹೇಳಿದನು. ನಂತರ, ವೈಕುಂಠವನ್ನು ತೊರೆದು ವೆಂಕಟಾದ್ರಿಯನ್ನು ತಲುಪಿದನು ಎಂದು ವಿವರಿಸುತ್ತಿದ್ದಂತೆ ಶೌನಕಾದಿ ಮುನಿಗಳು ವಿಷ್ಣುವು ವೆಂಕಟಾದ್ರಿಯ ಮೇಲೆ ತನ್ನ ಸಮಯವನ್ನು ಹೇಗೆ ಕಳೆದನು ಎಂದು ಪ್ರಶ್ನಿಸಿದರು.


(ಮುಂದುವರೆಯುತ್ತದೆ)



# ಏಪ್ರಿಲ್ 2026
## ತಿಂಗಳ
# ರಾಶಿ ಫಲಗಳು

**ಶ್ರೀಮಾತಾ ಅನುಗ್ರಹ**





**ಮೇಷ**

ಆರೋಗ್ಯದಲ್ಲಿ ಅಭಿವೃದ್ಧಿ ಕಂಡು ಬರುವುದು. ಕುಟುಂಬದವರೊಂದಿಗೆ ಸಂತೋಷದಿಂದ ಕಾಲ ಕಳೆಯುವಿರಿ. ಆಡಿಟಿಂಗ್ ಹಾಗೂ ಅಕೌಂಟಿಂಗ್ ಇಂದ ಒಳ್ಳೆಯ ಲಾಭವಿರುವುದು.ಉತ್ತಮ ವಾಗ್ಮಿಯಾಗಿರುವಿರಿ. ಒಳ್ಳೆಯ ವಿದ್ಯಾವಂತ ಸ್ನೇಹಿತರು ಸಿಗುವರು. ವಿದ್ಯೆಯಲ್ಲಿ ಪ್ರಗತಿ ಉಂಟಾಗುವುದು.



**ವೃಷಭ**

ಈ ಮಾಸ ನಿಮಗೆ ಶುಭದಾಯಕ. ಆದಾಯಕ್ಕೆ ಅನೇಕ ದಾರಿಗಳಿರುತ್ತದೆ. ಚಿಂತೆ ಇರುವುದಿಲ್ಲ ಶತೃಗಳ ಮೇಲೆ ಜಯ ಸಾಧಿಸುತ್ತಾರೆ. ಸ್ನೇಹಿತರ ಸಹಾಯದಿಂದ ಹೊಸದನ್ನು ಸಾಧಿಸುವಿರಿ. ಶತೃಗಳ ಮೇಲೆ ಜಯ ಸಾಧಿಸುವಿರಿ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಕೈಹಾಕಿದ ಕೆಲಸ ಕಾರ್ಯಗಳು ಕೈಗೂಡುತ್ತವೆ.



**ಮಿಥುನ**

ವ್ಯಾಪಾರದಲ್ಲಿ ಅಭಿವೃದ್ಧಿ ಕಂಡು ಬರುವುದು. ಆರೋಗ್ಯವಂತರಾಗಿರುವಿರಿ. ಹಣಕಾಸಿನ ವ್ಯವಹಾರ ಚೆನ್ನಾಗಿರುವುದು. ಉದ್ಯೋಗದಲ್ಲಿ ಬಡ್ತಿ ದೊರೆಯುವುದು. ವರಮಾನದಲ್ಲಿ ಏರಿಕೆಯಾಗಲಿದೆ. ಎಂತಹ ಕ್ಲಿಷ್ಟ ಕಾರ್ಯವನ್ನಾದರೂ ಯಶಸ್ವಿಯಾಗಿ ಪೂರೈಸುವಿರಿ.



**ಕರ್ಕಾಟಕ**

ಮಕ್ಕಳಿಂದ ಸಂತೋಷ ಉಂಟಾಗುತ್ತದೆ. ಶತೃಗಳು ಸೋಲುತ್ತಾರೆ. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ. ಪ್ರಯಾಣದಿಂದ ಪ್ರಯೋಜನವಿದೆ. ತೀರ್ಥಯಾತ್ರೆಗೆ ಹೋಗುವಿರಿ. ರಿಯಲ್ ಎಸ್ಟೇಟ್‌ನಿಂದ ಲಾಭವಿರುವುದು.



**ಸಿಂಹ**

ನೂತನ ವಸ್ತ್ರಾಭರಣಗಳನ್ನು ಕೊಳ್ಳುವಿರಿ. ಆರೋಗ್ಯ ಚೆನ್ನಾಗಿರುವುದು. ಅಂದುಕೊಂಡದ್ದಕ್ಕಿಂತ ಹೆಚ್ಚಾಗಿ ಪಡೆಯುವಿರಿ. ನಿರ್ದಿಷ್ಟ ಆದಾಯವಿರುವುದು. ಸರಕಾರಿ ಕೆಲಸಕಾರ್ಯಗಳು ಈಡೇರುವುವು.ಸಂಗಾತಿಯಿಂದ ಅದೃಷ್ಟ ಬರುವುದು. ಮಿತ್ರರಿಂದ ಅನುಕೂಲವಾಗುವುದು.ವಿದ್ಯಾಭ್ಯಾಸದಲ್ಲಿ ಅಭ್ಯುದಯ.



**ಕನ್ಯೆ**

ಧನಲಾಭವಾಗುವುದು. ನಿಮಗೆ ಸುಖಾನುಕೂಲತೆಗಳು ಹೆಚ್ಚುವುವು ತೊಂದರೆಗಳು ಪರಿಹಾರವಾಗುವುವು. ಹಿರಿಯರಿಂದ ಧನಾಗಮನವಾಗುವುದು. ಗೌರವವನ್ನು ಪಡೆಯುವಿರಿ. ಸಂಗಾತಿಯಿಂದ ಅನುಕೂಲವಾಗುವುದು.



**ತುಲಾ**

ಶತೃಫಲ ಮೇಲೆ ಜಯ ಸಾಧಿಸುವಿರಿ. ಕೈಗೊಂಡ ಕೆಲಸ ಕಾರ್ಯಗಳು ನೆರವೇರುತ್ತವೆ. ಮನೆಗೆ ಹೊಸವಸ್ತುಗಳನ್ನು ಕೊಂಡು ತರುವಿರಿ. ಆರೋಗ್ಯ ಸುಧಾರಿಸುವುದು. ಉದ್ಯೋಗದಲ್ಲಿ ಬಡ್ತಿ ದೊರಕುವುದು. ದೂರ ಪ್ರಯಾಣದಿಂದ ಲಾಭವಿರುವುದು. ಮಾನಸಿಕ ನೆಮ್ಮದಿ ಇರುವುದು. ವ್ಯಾಪಾರದಲ್ಲಿ ಅಭಿವೃದ್ಧಿ ಇರುವುದು. ನ್ಯಾಯಾಲಯದಲ್ಲಿ ಗೆಲ್ಲುವರಿ.



**ವೃಶ್ಚಿಕ**

ಆಕಸ್ಮಿಕ ಧನಲಾಭವಾಗುವುದು.ತಾಯಿಯೊಟ್ಟಿಗೆ ಖುಷಿಯಾಗಿ ಕಾಲ ಕಳೆಯುವಿರಿ. ವಿದ್ಯಾವಂತ ಸ್ನೇಹಿತರು ದೊರೆಯುವರು. ಆಸ್ತಿ ಮಾಡುವಿರಿ. ಕೌಟುಂಬಿಕ ಜೀವನ ಚೆನ್ನಾಗಿರುವುದು. ಹೊಸ ವಾಹನವನ್ನು ಕೊಳ್ಳುವಿರಿ. ವ್ಯಾಪಾರನಿಮಿತ್ತ ಪ್ರಯಾಣ ಮಾಡಿ ಚೆನ್ನಾಗಿ ಸಂಪಾದಿಸುವಿರಿ.



**ಧನಸ್ಸು**

ಮಕ್ಕಳೊಡನೆ ಚೆನ್ನಾಗಿ ಕಾಲಕಳೆಯುವಿರಿ. ಭೋಗಭಾಗ್ಯಗಳನ್ನನುಭವಿಸುವಿರಿ ಪ್ರೇಮಪ್ರಸಂಗಗಳಲ್ಲಿ ಜಯ ಕಾಣುವಿರಿ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ. ಸಮಾಜದ ಉನ್ನತ ವರ್ಗದವರೊಂದಿಗೆ ಸ್ನೇಹವಾಗಿ ನಿಮ್ಮ ಸ್ಥಿತಿಗತಿಯೂ ಮೇಲೇರುತ್ತದೆ.



**ಮಕರ**

ನಿಮ್ಮ ಆಸೆಗಳು ಫಲಿಸುತ್ತದೆ. ಅನೇಕ ಮೂಲಗಳಿಂದ ಧನಲಾಭವಾಗುತ್ತದೆ. ವಾಹನ ಲಾಭವಿರುವುದು. ಬಂಧು ಬಾಂಧವರಿಂದ ಅನುಕೂಲ. ಹೋರಾಟದಲ್ಲಿ ಜಯ ಸರ್ಕಾರದಿಂದ ಗೌರವ ದೊರೆಯುವುದು. ವಿರೋಧಿಗಳ ಮೇಲೆ ಜಯ. ವಾದವಿವಾದಗಳಲ್ಲಿ ಜಯ ಕಾಣುವಿರಿ. ರಿಯಲ್ ಎಸ್ಟೇಟ್‌ನಿಂದ ಲಾಭ ಸಿಗುವುದು.




**ಕುಂಭ**

ಹೊಸ ಗೆಳೆಯರು ಸಿಗುವರು. ಕೆಲಸಗಾರರು ವಿಧೇಯರಾಗಿರುವರು. ಸರ್ಕಾರದಿಂದ ಸಮ್ಮಾನ ಹೊಸವಸ್ತ್ರ ಖರೀದಿ ಮಾಡುವಿರಿ. ಮಾತು ನಯವಾಗಿರಲಿ. ನಿಮ್ಮ ಮಾತಿನಿಂದ ಎಲ್ಲರೂ ವಿರೋಧಿಗಳಾಗುವರು. ಮನೆಯಲ್ಲಿ ಶುಭಕಾರ್ಯಗಳು ನಡೆಯುವುದು.



**ಮೀನ**

ಹಣ ಹರಿವು ಚೆನ್ನಾಗಿರುವುದು. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ನೂತನ ವಸ್ತ್ರಾಭರಣ ಕೊಳ್ಳುವಿರಿ. ಸಂಗಾತಿಯಿಂದ ಸಂತೋಷ. ಸಂತಾನ ಭಾಗ್ಯ, ಸರ್ಕಾರದಿಂದ ಲಾಭವಿರುವುದು. ವಿಧ್ಯಾಭ್ಯಾಸದಲ್ಲಿ ಅಭ್ಯುದಯ. ಐಶಾರಾಮಿ ಜೀವನವನ್ನು ನಡೆಸುವಿರಿ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

**1. ಶಿವನ ದೇವಾಲಯಗಳಲ್ಲಿ ಚಂಡಿಕೇಶ್ವರ ಇರುತ್ತಾನೆ. ಅವನ ಮುಂದೆ ಚಿಟಿಕೆ ಹೊಡೆದು ಅಥವಾ ಚಪ್ಪಾಳೆ ತಟ್ಟಿ ಭಕ್ತರು ಮುಂದೆ ಹೋಗುತ್ತಾರೆ.  ಕಾರಣವೇನು?**

**ಉತ್ತರ :** ಬಹಳ ಹಿಂದೆ ಈಚದತ್ತ ಎಂಬ ಬ್ರಾಹ್ಮಣ ಪಂಡಿತನಿದ್ದ. ಅವನ ಮಗ ಚಂದ್ರೇಶ್ವರ ಶರ್ಮ ವೇದಪಾರಂಗತನು. ಮಹಾ ಶಿವ ಭಕ್ತನು. ಒಂದು ದಿನ ನಿತ್ಯಕರ್ಮಗಳನ್ನು ಮುಗಿಸಿ ಹಿಂತಿರುಗುವಾಗ ಒಬ್ಬ ಗೋಪಾಲಕ ತನ್ನ ಹಸುವನ್ನು ಹಿಗ್ಗಾಮುಗ್ಗಾ ಹೊಡೆಯುತ್ತಿದ್ದ. ಇದನ್ನು ಕಂಡ ಚಂದ್ರೇಶ್ವರ ಶರ್ಮನಿಗೆ ಬಹಳ ನೋವಾಯಿತು. ಅವನು ಗೋಪಾಲಕನಿಗೆ ಹೇಳಿದನು. ಗೋವು ದೈವ ಸಮಾನವಾದುದು. ಅದನ್ನು ಹಿಂಸಿಸುವುದು ಸರಿಯಲ್ಲ. ನಿನಗೆ ಗೋಪಾಲನೆ ಕಷ್ಟವಾದರೆ ನಾನು ಮಾಡುತ್ತೇನೆ. ಕೋಪದಲ್ಲಿದ್ದ ಗೋಪಾಲಕನು-ಆಯ್ತು ನನ್ನ ಎಲ್ಲ ಗೋಗಳ ಪೋಷಣೆಯ ಜವಾಬ್ದಾರಿ ಇಂದಿನಿಂದ ನಿನ್ನದೇ. ಆದರೆ ಅದರಿಂದ ಉತ್ಪಾದನೆಯಾದ ಹಾಲಿನಲ್ಲಿ ನಿನಗೆ ಯಾವ ಪಾಲೂ ಇಲ್ಲ ಎಂದನು.

ಗೋಪಾಲನೆಯ ಜೊತೆ ಜೊತೆಗೇ ನದಿಯ ತಟದಲ್ಲಿ ವೇದಾಧ್ಯಯನ ಮುಂದುವರೆಸಿದ. ಗೋವುಗಳೂ ಅವನನ್ನು ಹೊಂದಿಕೊಂಡು ಬಿಟ್ಟವು.

ಚಂದ್ರೇಶ್ವರಶರ್ಮನು ಗೋಪಾಲನೆಯ ವೇಳೆಯಲ್ಲಿ ನದಿಯಿಂದ ಮರಳು ತಂದು ಲಿಂಗ ತಯಾರಿಸಿ ಅಭಿಷೇಕ ಪೂಜೆ ಮಾಡುತ್ತಿದ್ದ. ಅವನ ಪ್ರೀತಿಗೆ ಸಂತೋಷಗೊಂಡ ಗೋವುಗಳು ತಾವಾಗಿಯೇ ಹಾಲು ಸುರಿಸಲು ಶುರುಮಾಡಿದವು. ಆ ಹಾಲಿನಿಂದ ಶಿವಲಿಂಗಕ್ಕೆ ಅಭಿಷೇಕ ಮಾಡುತ್ತಿದ್ದ. ಈ ದೃಶ್ಯವನ್ನು ಒಬ್ಬ ನೋಡಿದ. ಅದನ್ನು ಗೋಮಾಲೀಕನಿಗೆ ಹೇಳಿದ. ಗೋಮಾಲೀಕ ಚಂದ್ರೇಶ್ವರ ಶರ್ಮನ ತಂದೆಗೆ ದೂರು ನೀಡಿದ. ಮಗನ ಈ ನಡವಳಿಕೆಯಿಂದ ಕೋಪಗೊಂಡ ಈಚದತ್ತನು ತಾನಾಗಿ ಕಣ್ಣಾರೆ ನೋಡಲು ಹೋದ. ಚಂದ್ರಕೇಶ್ವರನು ಧ್ಯಾನಮಗ್ನನಾಗಿ ಲಿಂಗಕ್ಕೆ ಅಭಿಷೇಕ ಮಾಡುತ್ತಿದ್ದ. ಗೋವುಗಳು ನೋಡುತ್ತಿದ್ದವು. ಮಗನನ್ನು ಕೂಗಿದ, ಅಲುಗಾಡಿಸಿದ, ಆದರೆ ಧ್ಯಾನ ಮಗ್ನನಾಗಿದ್ದ ಚಂದ್ರಕೇಶ್ವರನಿಗೆ ಎಚ್ಚರವೇ ಆಗಲಿಲ್ಲ ಕೋಪಗೊಂಡ ಈಚದತ್ತನು ಅಲ್ಲೇ ಇದ್ದ ಹಾಲು ತುಂಬಿಟ್ಟಿದ್ದ ಮಡಿಕೆಯನ್ನು ಕಾಲಿನಿಂದ ಒದೆಯುತ್ತಾನೆ. ಮಡಕೆ ಒಡೆದು ಚೂರಾಗಿ ಅದು ಲಿಂಗಕ್ಕೆ ಹೊಡೆದು ಮರಳಿನ ಲಿಂಗ ಭಿನ್ನವಾಗುತ್ತದೆ.

ಚಂದ್ರಕೇಶ್ವರ ತಕ್ಷಣವೇ ಕಣ್ಣು ತೆರೆದು ನೋಡಿದ. ಹಸುಗಳ ಮೇವಿಗಾಗಿ ಎಲೆ, ಹುಲ್ಲುಗಳನ್ನು ಕುಯ್ದು ತರಲು ಕೊಡಲಿ ಇಟ್ಟು ಕೊಳ್ಳುತ್ತಿದ್ದ ಅವನು ಆ ಕೊಡಲಿಯಿಂದಲೇ ತಂದೆಯ ಕಾಲುಗಳನ್ನು ಕತ್ತರಿಸಿದ. ತನ್ನ ಆರಾಧ್ಯದೈವನಿಗೆ ಅಪಚಾರ ಮಾಡಿದುದಕ್ಕಾಗಿ ತಂದೆ ಎಂದೂ ಲೆಕ್ಕಿಸದೆ ಕಾಲುಗಳನ್ನು ಕತ್ತರಿಸಿದ್ದ. ಚಂದ್ರಕೇಶ್ವರನ ಭಕ್ತಿಗೆ ಮೆಚ್ಚಿದ ಶಿವ, ತನ್ನ ಕುಟುಂಬಕ್ಕೆ ಅವನನ್ನು ಸೇರಿಸಿಕೊಂಡ. ತನ್ನ ಕುಟುಂಬದ ಸದಸ್ಯರಾದ ಪಾರ್ವತಿ,ವಿನಾಯಕ, ಸುಬ್ರಹ್ಮಣ್ಯರ ಜೊತೆಗೆ ಚಂದ್ರಕೇಶ್ವರನನ್ನು ತನ್ನ ಮೂರನೆ ಮಗನಾಗಿ ಸ್ವೀಕರಿಸಿದ. ಈಚದತ್ತನಿಗೆ ಕಾಲುಗಳು ಬರುವಂತೆ ಅನುಗ್ರಹಿಸಿದ. ಶಿವನು ಚಂದ್ರಕೇಶ್ವರನಿಗೆ "ಚಂಡಿಕೇಶ್ವರ" ಎಂದು ನಾಮಕರಣ ಮಾಡಿದ.

ಶಿವನ ನಿರ್ಮಾಲ್ಯಗಳಾದ ಬಿಲ್ವಪತ್ರೆ, ಹೂವು, ವಿಭೂತಿ ಅಥವಾ ಪ್ರಸಾದಗಳನ್ನು ಚಂಡಿಕೇಶ್ವರನಿಗೆ ತೋರಿಸಿಯೇ ಹೊರಗೆ ತೆಗೆದುಕೊಂಡು ಹೋಗಬೇಕೆಂಬ ನಿಯಮ ಮಾಡಲಾಯಿತು. ಧ್ಯಾನಸ್ಥನಾಗಿರುವ ಚಂಡಿಕೇಶ್ವರನನ್ನು ಚಿಟಿಕೆ, ಚಪ್ಪಾಳೆಗಳಿಂದ ಎಬ್ಬಿಸಿ ನಿನಗೆ ತಿಳಿಯದಂತೆ ಇಲ್ಲಿಂದ ಹೊರಗೆ ತೆಗೆದುಕೊಂಡು ಹೋಗುತ್ತಿಲ್ಲ ಎಂಬುದನ್ನು ತಿಳಿಸಿ ಹೊರಗೆ ಕೊಂಡೊಯ್ಯುವುದು ಪದ್ಧತಿಯಾಗಿ ಬಿಟ್ಟಿದೆ.



**ನೀತಿ ಕಥೆ**

# ಪ್ರಾಚೀನ ಭಾರತದ ನಾರಿ ಶಕ್ತಿಯೂ ದೊಡ್ಡದು

– ಎ. ಆರ್. ರಘುರಾಮ
99161 38436

ಯಾಜ್ಞವಲ್ಕ್ಯ ಮಹರ್ಷಿ ಮಹಾ ತಪಸ್ವಿ. ಇವರಿಗೆ ಮೈತ್ರೇಯಿ, ಕಾತ್ಯಾಯಿನಿ ಎಂಬ ಪತ್ನಿಯರು. ಇಬ್ಬರೂ ದಾರ್ಶನಿಕರು. ತಪಸ್ವಿಗೆ ತಕ್ಕನಾದ ಮಡದಿಯರು. ಶಾಸ್ತ್ರ ವಿದ್ಯೆಯನ್ನೂ ಕಲಿತವರಾಗಿದ್ದರು. ಮಹರ್ಷಿಗಳು ಬಹಳ ವರ್ಷಕಾಲ ಇಬ್ಬರೊಂದಿಗೂ ಸುಖ ಸಂಸಾರ ನಡೆಸಿದರು. ಗುರುಕುಲದಲ್ಲಿ ನೂರಾರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆಯೇ ಬೆಳೆಸಿದರು. ಅಪಾರ ಸಂಪತ್ತನ್ನೂ ಗಳಿಸಿದರು. ಒಂದು ದಿನ ಮಹರ್ಷಿಗೆ ಸಂಸಾರವೂ ಸೇರಿ ಸಕಲ ಸಂಪತ್ತುಗಳು ಬೇಡ ಎನಿಸಿದವು ಸರಿ. ತಪಸ್ಸು ಮಾಡಲು ಮತ್ತೆ ದಟ್ಟ ಕಾಡಿಗೆ ಹೋಗಬೇಕು ಎಂದು ನಿರ್ಧಾರ ಮಾಡಿಬಿಟ್ಟರು.

ತಾವು ಗಳಿಸಿದ್ದ ಎಲ್ಲ ಆಸ್ತಿ, ಸಂಪತ್ತನ್ನೆಲ್ಲಾ ಎರಡು ಭಾಗ ಮಾಡಿದರು. ಪತ್ನಿಯರನ್ನು ಕರೆದು ವಿವರ ನೀಡಿದರು. ಕಾತ್ಯಾಯಿನಿ ಅದಕ್ಕೆ ಒಪ್ಪಿದಳು. ಶಾಸ್ತ್ರಾಧ್ಯಯನ ಮಾಡಿಕೊಂಡು ಜೀವನ ಮುಂದುವರಿಸಲು ಸಂಕಲ್ಪ ಮಾಡಿದಳು. ಯಾಜ್ಞವಲ್ಕ್ಯರು ನೀಡಿದ ಆಸ್ತಿ. ಆಕೆ ಜೀವನ ಪೂರ್ಣ ಸವಲತ್ತು ಕೊಡುವಷ್ಟು ಇತ್ತು. ಆದರೆ ಮೈತ್ರೇಯಿ ಆಸ್ತಿ ಪಾಲು ಪಡೆಯುವಾಗ ಇದೆಲ್ಲಾ ಏಕೆ ಎಂದಳು. ಆಸ್ತಿ ನಮಗೆ ಹಂಚಿ ನೀವು ಎಲ್ಲಿಗೆ ಹೋಗುವಿರಿ ಎಂದು ಪ್ರಶ್ನೆ ಮಾಡಿದಳು. ಆಕೆಯ ಆಲೋಚನೆ ಯಾವಾಗಲೂ ವಿಶೇಷವಾಗಿಯೇ ಇರುತ್ತಿತ್ತು. ನೆಮ್ಮದಿ ಗಳಿಸಲು ತಪಸ್ಸಿಗೆ ಹೋಗುವೆ ಎಂದರು ಋಷಿಗಳು. ಸಾಕಷ್ಟು ಸಂಪತ್ತುಗಳಿಸಿದ್ದರೂ, ನೂರಾರು ಶಿಷ್ಯರು ಇದ್ದರೂ ಇದಕ್ಕಿಂತಾ ಹೆಚ್ಚು ತೃಪ್ತಿ ನೆಮ್ಮದಿ ಸಿಗುವ ಸ್ಥಿತಿಯಾದ ತಪಸ್ಸು ಮಾಡಲು ಹೋಗುತ್ತೀರಿ ಎಂದರೆ ಅದು ಈ ಎಲ್ಲಾ ಆಸ್ತಿ ಅಂತಸ್ತಿಗಿಂತಾ ಹೆಚ್ಚಿನದೇ ಆಗಿರಬೇಕು ಅಲ್ಲವೇ ಎಂದಳು.

ಮಹರ್ಷಿಗಳು ಹೌದು. ನಿನ್ನ ಅಭಿಪ್ರಾಯ ಸರಿ ಎಂದರು. ನಿಮಗೇ ಬೇಡವಾಗಿರುವ ಸಂಪತ್ತು ನನಗಾದರೂ ಏಕೆ ಎಂದಳು. ಮಹತ್ವವಾದದ್ದನ್ನು ಗಳಿಸಲು ನೀವು ನಿಶ್ಚಯಿಸಿದಾಗ ಇವೆಲ್ಲವೂ ಲೌಕಿಕ, ಕ್ಷಣಿಕ ಎಂದು ಅನಿಸಿದೆ ಅಲ್ಲವೇ? ನನಗೂ ದೊಡ್ಡದೇ ಬೇಕು. ತಪಸ್ಸಿನ ಹಿಂದೆ ನಾನೂ ಬರುವೆ ಎಂದು ಮೈತ್ರೇಯಿ ಪಟ್ಟು ಹಿಡಿದಳು. ನನ್ನ ಜತೆ ಸಂಸಾರ ಮಾಡಿದ ಇಬ್ಬರಿಗೂ ಸಮನಾಗಿ ಆಸ್ತಿ ಹಂಚಿದ್ದೇನೆ. ಏಕೆ ಸುಮ್ಮನೆ ಕಾಡು-ಮೇಡುಗಳಿಗೆ ಬಂದು ಶ್ರಮ ಪಡುವೆ? ಸುಖವಾಗಿ ಇರು ಎಂದರೂ ಆಕೆ ಕೇಳಲಿಲ್ಲ. ಧನದ ಆಧಾರಿತ ಜೀವನದಿಂದ ಅಮೃತತ್ವ ಸಿದ್ಧಿ ಆಗಲಾರದು. ಪ್ರಾಪಂಚಿಕ ಸಂಪತ್ತನ್ನು ತೆಗೆದುಕೊಂಡು ನಾನೇನು ಸಾಧನೆ ಮಾಡಲು ಆಗುವುದಿಲ್ಲ ಎಂದು ಬಿಟ್ಟಳು. ಸಂಪ್ರೀತರಾದ ಋಷಿಗಳು ಆಕೆಯ ಪ್ರೌಢಿಮೆ ಮೆಚ್ಚಿದರು. ಬ್ರಹ್ಮ ವಿದ್ಯೆಯನ್ನು ಬೋಧಿಸಿದರು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಈ ಪ್ರಸಂಗ ಗಮನಿಸಿದರೆ ಪುರಾತನ, ಭಾರತೀಯ ಮಹಿಳೆಯರಿಗೆ ಅದೆಂಥಾ ಶಾಸ್ತ್ರಜ್ಞಾನ ಇತ್ತು ಎಂಬುದು ಅರಿವಾಗುತ್ತದೆ. ಪ್ರಾಚೀನ ಕಾಲದ ಮಹಿಳೆಯರು ಋಷಿ ಪತ್ನಿಯರಾಗಿದ್ದರೂ, ವನ, ಆಶ್ರಮ, ವಾಸಿಗಳಾಗಿದ್ದರೂ ಅವರಿಗೆ ಆಗಾಧ ಲೋಕ ಜ್ಞಾನವಿತ್ತು. ಲೌಕಿಕ ಆಧ್ಯಾತ್ಮಿಕ, ಪಾರಮಾರ್ಥಿಕ ಚಿಂತನೆ ಇತ್ತು. ಮೈತ್ರೇಯಿ ಸೇರಿದಂತೆ ವೇದಕಾಲೀನ ಯುಗದಲ್ಲಿ ಇದ್ದ ಅನೇಕ ಮಾತೆಯರು ಬದುಕಿನ ಆಚೆಗೂ ಹೆಸರೂ ಶಾಶ್ವತವಾಗಿ ಇರುವಂತೆ ಅವರು ಜೀವಿಸಿದ್ದರು. ಇದೇ ನಮ್ಮ ಪರಂಪರೆ ಇದೇ ನಮ್ಮ ಸಂಸ್ಕೃತಿ. ಹಾಗಾಗಿಯೇ ಭಾರತೀಯತೆಗೆ ವಿಶ್ವ ಮಾನ್ಯತೆ ಇರುವುದು.

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.




ಬಣ್ಣವನ್ನು ತುಂಬಿರಿ.



## ಮಾರ್ಗ ಅನ್ವೇಷಣೆ

ಇಲ್ಲಿರುವ ಕುಟುಂಬದವರು ಯಾವ ಹಾದಿಯಲ್ಲಿ ಹೋದರೆ ದೇವಸ್ಥಾನಕ್ಕೆ ಸೇರಬಹುದು ಎಂದು ಕಂಡು ಹಿಡಿಯಿರಿ ಮಕ್ಕಳೇ ನೋಡೋಣ !




ಉತ್ತರಗಳು: 3 ನೇ ಹಾದಿಯಲ್ಲಿ ಹೋದರೆ ದೇವಸ್ಥಾನಕ್ಕೆ ಸೇರುತ್ತಾರೆ.

## ಗೊಂಬೆಯನ್ನು ಗಮನಿಸಿ



ಈ ಚಿತ್ರದಲ್ಲಿರುವ ಗುಲಾಬಿ ಹೂವಿನ ರೆಂಬೆಯಲ್ಲಿ ಚಿಕ್ಕ ಗುಲಾಬಿ ವಿಭಿನ್ನವಾಗಿದೆ. ಅದು ಯಾವುದು ಎಂದು ಕಂಡು ಹಿಡಿಯಿರಿ ಮಕ್ಕಳೇ ನೋಡೋಣ

ಉತ್ತರಗಳು: ಇದರಲ್ಲಿ ಮೊದಲನೆ ಸಾಲಿನಲ್ಲಿ 3 ನೇಯದು, ಎರಡನೇ ಸಾಲಿನಲ್ಲಿ 2ನೇಯದು, ಮೂರನೇ ಸಾಲಿನಲ್ಲಿ 1 ನೇಯದು ವಿಭಿನ್ನವಾಗಿದೆ.

తిరుమల తిరుపతి దేవస్థానగళు

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01. ಭಾರತವನ್ನು ಏನೆಂದು ಕರೆಯುವುದು ಅತಿಶಯೋಕ್ತಿಯಲ್ಲ?......................................

02. ನಮ್ಮ ದಾಸ ಸಾಹಿತ್ಯ ಕಂಡಂತಹ ಅನರ್ಘ್ಯವಾದ ರತ್ನಗಳಲ್ಲಿ ಒಬ್ಬರಾದವರು ಯಾರು? ..........................

03. ಭಕ್ತಿಗೆ ಪ್ರಾಮುಖ್ಯತೆ ನೀಡಿದವರು ಯಾರು? ......................................

04. ಋತುಗಳ ರಾಜ ವಸಂತನ ಎರಡನೇ ಚರಣ ಯಾವುದು?......................................

05. ಕೇರಳದ ರಾಜ್ಯದ ಕಾಲಡಿ ಗ್ರಾಮದಲ್ಲಿ ಯಾರು ಜನಿಸಿದರು? ......................................

06. ನೈಮಿತ್ತಿಕ ಶ್ರಾದ್ಧದಲ್ಲಿ ಬರುವ ಪಕ್ಷಮಾಸದಲ್ಲಿ ಮಾಡುವ ಶ್ರಾದ್ಧ ಯಾವುದು?......................................

07. ಶ್ರೀ ಕೃಷ್ಣದೇವರಾಯನ ಪತ್ನಿಯರ ಹೆಸರೇನು?......................................

08. ಲಿಂಗರೂಪದಲ್ಲಿರುವ ಪರಮಾತ್ಮನ ಗರ್ಭಗುಡಿಗೆ ಏನೆಂದು ಕರೆಯುತ್ತಾರೆ? ......................................

09. ಪಾವಗಡದ ಊರಿನಲ್ಲಿ ಯಾವ ದೇವಾಲಯವಿದೆ?......................................

10. ರಾಮಾನುಜರು ತಿರುಪತಿಯ ಸಮೀಪದಲ್ಲಿ ಎಷ್ಟು ಆಗ್ರಹಾರಗಳನ್ನು ಕಟ್ಟಿಸಿದರು? ......................................

11. ತಿರುಮಹೀಂದ್ರಪುರಿಯಲ್ಲಿ ಯಾವ ನದಿ ಪ್ರವಹಿಸುತ್ತದೆ?......................................

12. ಷಷ್ಠಮ ಶತಕದ ದಶಮ ದಶಕದಲ್ಲಿ ಯಾರು ಯಾರನ್ನು ಕೀರ್ತಿಸಿ ಧನ್ಯರಾದರು? ......................................

13. ಶ್ರೀ ವೆಂಕಟೇಶ್ವರ ಸ್ವಾಮಿಯ ವಕ್ಷಸ್ಥಳದಲ್ಲಿ ಯಾರು ಇರುತ್ತಾರೆ? ......................................

14. ಚಂದ್ರಶೇಖರ ಶರ್ಮ ಯಾರ ಮಹಾಭಕ್ತನು?......................................

15. ಯಾಜ್ಞವಲ್ಕ್ಯ ಯಾರು?......................................

## ಸೂಚನೆಗಳು


**45 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.


**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |





ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ.



1) ಕಾಲಡಿ 2) ಶಿವಗುರು ಮತ್ತು ಆರ್ಯಾಂಬೆ 3) ಭಜಗೋವಿಂದಂ 4) ಶೃಂಗೇರಿ ಪೀಠ,
5) ಅದ್ವೈತಸಿದ್ಧಾಂತ 6) ನಲ್ಲಿಕಾಯಿ 7) ಮಾತೃ ಪಂಚಕಂ 8) ಶಿವ ಪಂಚಾಕ್ಷರಂ

ಮಕ್ಕಳೇ! ಈ ಚಿತ್ರದಲ್ಲಿರುವ ಧನಸ್ಸುನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಬಾಣದಲ್ಲಿ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ !




1) i 2) iv 3) v 4) iii 5) ii



ಮಕ್ಕಳೇ ನಾನು ದೇವಸ್ಥಾನದಲ್ಲಿ ಹಾಗೂ ಮನೆಯ ದೇವರ ಮನೆಯಲ್ಲಿ ಹಾಗೂ ಕೆಲವರು ಹಬ್ಬಗಳಲ್ಲಿ ನನ್ನನ್ನು ಸ್ಥಾಪಿಸುತ್ತಾರೆ ನಾನು ಯಾರು ಎಂದು ಹೇಳಿ ನೋಡೋಣ.

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!

ಕಲಶ


ಚಿತ್ರಕಥೆ


# ತೃಪ್ತಿಗಿಂತ ಐಶ್ವರ್ಯ ಮೊತ್ತೊಂದಿಲ್ಲ


ಕಥೆ : ಮೂಲ : ಶ್ರೀಮತಿ. ಎಂ.ಉತ್ತರಫಲ್ಗುಣಿ

ಅನುವಾದ : ಆರ್.ಕೆ.ವಿ.

ಚಿತ್ರಗಳು : ಕಮಲಕಣ್ಣನ್















ನೆಲದ ಮೇಲೆ ಮಲಗುವುದು.
ಸಂಪತ್ತುಗಳು- ಕಮಂಡಲ, ದಂಡ, ಭಿಕ್ಷಾಪಾತ್ರೆ ಮತ್ತು ಒಂದು ಸಣ್ಣ ಚೀಲದ ಮೂಟೆ ಅಷ್ಟೇ.
ಸಂಪತ್ತು ಎಂದರೆ ಏನೆಂದು ತಿಳಿಸಿ ಸ್ವಾಮೀ!
ಸಂತೃಪ್ತಿಯಿಂದ ಜೀವಿಸುವುದು ಹೇಗೆಂದು ತಿಳಿಸಿ ಸ್ವಾಮೀ!
ಹಾಗೇ ಆಗಲಿ ಎನ್ನುತ್ತಾ ಎಲ್ಲರಿಗೂ ವಿವರಿಸುವುದಕ್ಕೆ ಸ್ವಾಮೀಜಿ ಸಿದ್ಧರಾದರು.
ಇರುವುದರಲ್ಲಿ ಸಂತೋಷವಾಗಿ ಇರುವುದೇ ನಿಜವಾದ ಸಂಪತ್ತು. ಇವು ಮಾನಸಿಕ ಪ್ರಶಾಂತತೆಯನ್ನು, ಸಂಪೂರ್ಣವಾದ ಆರೋಗ್ಯವನ್ನು ನೀಡುತ್ತದೆ. ಅದು ಹಣಕ್ಕಿಂತಲೂ ತೃಪ್ತಿಯನ್ನೂ ಹೊಂದಿರುವುದೇ ನಿಜವಾದ ಐಶ್ವರ್ಯ.
ಸಣ್ಣ ಪುಟ್ಟ ವಿಷಯಗಳಲ್ಲೂ ಸಂತೋಷವನ್ನು ಹುಡುಕುವುದು, ಇರುವುದರಲ್ಲಿ ಇತರರಿಗೂ ಸಹಾಯ ಮಾಡುವುದು. ಸಂತೋಷವೆನ್ನುವುದು ನಮ್ಮ ಬಳಿ ಇರುವ ಐಶ್ವರ್ಯದ ಮೇಲೆ ಆಧಾರಗೊಂಡಿರುವುದಿಲ್ಲ. ನಮ್ಮ ಮನಸ್ಸಿನ ಭಾವನೆಯ ಮೇಲೆ ಆಧಾರಗೊಂಡಿರುತ್ತದೆ. ಹೀಗೆ ನಡೆದು ಕೊಂಡರೆ ನಿಮ್ಮ ಜೀವನವು ಸುಖವಾಗಿರುತ್ತದೆ.
"ತೃಪ್ತಿಗಿಂತ ಅಧಿಕವಾದ ಐಶ್ವರ್ಯವಿಲ್ಲ, ಸಂತೋಷಕ್ಕಿಂತಲೂ ಅಧಿಕವಾದ ಐಶ್ವರ್ಯವೂ ಇಲ್ಲ" ಎನ್ನುವುದೇ ಮೇಲಿನ ಕತೆಯ ನೀತಿ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್‌ಕೋಡ್‌ತಪ್ಪದೇನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯುಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯು,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and Published by Dr. V. G. Chokkalingam, M.A.,Ph.D.,Dip In JMC on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.,Dip In JMC

# ಕೀಲಪಟ್ಲ, ಶ್ರೀ ಕೋನೇಟಿರಾಯಸ್ವಾಮಿಯವರ ಬ್ರಹ್ಮೋತ್ಸವಗಳು

## 23-04-2026 ರಿಂದ 03-05-2026 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 23-04-2026 | ಗುರುವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 24-04-2026 | ಶುಕ್ರವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 25-04-2026 | ಶನಿವಾರ | ಚಿಕ್ಕಶೇಷವಾಹನ | ಹಂಸವಾಹನ |
| 26-04-2026 | ಭಾನುವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 27-04-2026 | ಸೋಮವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 28-04-2026 | ಮಂಗಳವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 29-04-2026 | ಬುಧವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 30-04-2026 | ಗುರುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 01-05-2026 | ಶುಕ್ರವಾರ | ರಥೋತ್ಸವ | ಅಶ್ವವಾಹನ |
| 02-05-2026 | ಶನಿವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |
| 03-05-2026 | ಭಾನುವಾರ | ಪುಷ್ಪಯಾಗ | |



# ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

## 22-05-2026 ರಿಂದ 31-05-2026 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 22-05-2026 | ಶುಕ್ರವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 23-05-2026 | ಶನಿವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 24-05-2026 | ಭಾನುವಾರ | ಚಿಕ್ಕಶೇಷವಾಹನ | ಹಂಸವಾಹನ |
| 25-05-2026 | ಸೋಮವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 26-05-2026 | ಮಂಗಳವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 27-05-2026 | ಬುಧವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 28-05-2026 | ಗುರುವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 29-05-2026 | ಶುಕ್ರವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 30-05-2026 | ಶನಿವಾರ | ರಥೋತ್ಸವ | ಅಶ್ವವಾಹನ |
| 31-05-2026 | ಭಾನುವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |



SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-03–2026 and Posting at Tirupati RMS.Regd. with the Registrar of News papers for India under RNI.No.APKAN/2021/80589. Postal Regd.No.TRP/156/2024-2026 "Licenced to Post Without Prepayment No. PMGK/RNP/WPP-04(6)/ 2024-2026" Posting on 1st of Every Month



ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವ, ತಿರುಚಾನೂರು
28-04-2026 ರಿಂದ 01-05-2026 ರ ವರೆಗೆ